ಲಂಕೇಶ್

ಫೆಬ್ರವರಿ 4, 2009 ರೂ. 12/-



ಳೆದಿದೆ ಮೋಡಾ ೊಲೆಗಳ ಗರ

ಒಂಟಿ ಗೃಹಿಣಿಯರೇ ಟಾರ್ಗೆಟ್?

ಹಿತ್ಯ ಮ್ಮೇಳನ ರಾಜಕಾರಣಿ-ಸ್ವಾಮಿಜಿಗಳಿಗೆ ಏನು ಕೆಲಸ



ುಗುವನ್ನೇ ಪ್ ಮಾಡಿದ ೋರಿಗಳು



ಅನಿತಕ್ಕ MLA ಆಗಿದ್ದು ಹೇಗೆ



ಲ್ಯಾಂಡ್ ಮಾಫಿಯಾಗೆ ಆಚಾರ್ಯ ಕುಮ್ಮಕ್ಕು




ಮಗನಿಗಾಗಿ 'ದಂಡಾ'ವತಿ

ಸತ್ಯಂ ನೌಕರರ ನೆರವಿಗೆ ಸರ್ಕಾರ ಏಕೆ ಹೋಗಬಾರದು

ಒಂದೆಡೆ ಸತ್ಯಂ ಕಂಪನಿಯ ಸಾವಿರಾರು ನೌಕರರನ್ನು ರಕ್ಷಿಸಬೇಕೆಂದು, ಅವರ ಕೆಲಸಗಳನ್ನು ಕಾಪಾಡಬೇಕೆಂದು ಕೇಳಿಬರುತ್ತಿರುವ ಬೇಡಿಕೆ ದಿಗ್ಭ್ರಾಂತಗೊಳಿಸುತ್ತಿದೆ. ಮತ್ತೊಂದೆಡೆ ಸತ್ಯಂ ಕಂಪನಿಯನ್ನು ಮಾತ್ರವಲ್ಲದೆ ಇಡೀ ಐಟಿ ಕ್ಷೇತ್ರವನ್ನೇ ಸಾರ್ವಜನಿಕರ ಹಣವನ್ನು ಉಪಯೋಗಿಸಿ ಸರ್ಕಾರವು ಉಳಿಸಬೇಕೆಂದು ವಾದಮಾಡುತ್ತಿರುವುದು ಆ ದಿಗ್ಭ್ರಾಂತಿಯನ್ನು ಹೆಚ್ಚಿಸುತ್ತಿದೆ.

ನಾನು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವನು. ಅದರಲ್ಲೂ ಇಪ್ಪತ್ತು ವರ್ಷಗಳನ್ನು ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಎಚ್‌ಎಎಲ್‌ನಲ್ಲಿ ಕಳೆದವನು. ಆಗ ಇಂಥ ಹಲವಾರು ಸರ್ಕಾರಿ ಕಾರ್ಖಾನೆಗಳು ಬೆಂಗಳೂರಿನ ತುಂಬಾ ಇದ್ದವು. ಇಂದು ಐಟಿಐ, ಸಿಐಎಲ್, ಎನ್‌ಎಎಲ್, ಬಿಇಎಂಎಲ್ ತರಹದ ಕೆಲ ಕಾರ್ಖಾನೆಗಳು ತಮ್ಮ ತುಕ್ಕು ಹಿಡಿದಿರುವ ನಾಮಫಲಕಗಳಂತೆ, ವಯಸ್ಸಾಗುತ್ತಿರುವ ಕಾರ್ಮಿಕರಂತೆ, ಪಾರ್ಥೇನಿಯಂ ತುಂಬಿಕೊಂಡಿರುವ ಉದ್ಯಾನದಂತೆ ಸೊರಗುತ್ತಿದ್ದರೂ ಅದು ಹೇಗೋ ಇನ್ನೂ ತಮ್ಮ ಜೀವ ಉಳಿಸಿಕೊಂಡಿವೆ. ಆದರೆ ಎಚ್‌ಎಂಟಿ, ಎನ್‌ಜಿಇಎಫ್ ಮತ್ತು ಇತರೆ ಸರ್ಕಾರಿ ಕಾರ್ಖಾನೆಗಳು ತಮ್ಮ ಬಾಗಿಲು ಮುಚ್ಚಿವೆ. ಆ ಕಾರ್ಖಾನೆಗಳನ್ನು ಮುಚ್ಚಬಾರದೆಂದು, ಅವುಗಳ ನೌಕರರಿಗೆ ರಕ್ಷಣೆ ನೀಡಬೇಕೆಂದು ಈಗ ಸತ್ಯಂ ಕಂಪನಿಯ ನೌಕರರ ಬಗ್ಗೆ ಕೇಳಿಬರುತ್ತಿರುವ ಬೇಡಿಕೆ ಆಗ ಕೇಳಿಬಂದಿರಲೇ ಇಲ್ಲ.

ಬೆಂಗಳೂರಿಗೆ ಈಗಿನಂತೆ ಐಟಿ ಸಿಟಿ, ಪಬ್ ಸಿಟಿ, ಪಿಂಚಣಿದಾರರ ಸ್ವರ್ಗ, ಸೈನ್ಸ್ ಸಿಟಿ ಎಂಬೆಲ್ಲಾ ಹೆಸರು ಬರುವ ಮುಂಚೆ ಅದು ಜವಳಿ ನಗರವಾಗಿತ್ತು. ತಿರುಪ್ಪೂರು, ಕೊಯಂಬತ್ತೂರುಗಳಿಗೆ ಜವಳಿ ನಗರಗಳೆಂಬ ಹೆಸರು ಬರುವ ಎಷ್ಟೋ ವರ್ಷಗಳ ಮುಂಚೆ ಇಂದಿನ ಹಲವಾರು ಬಡಾವಣೆಗಳಷ್ಟು ವಿಸ್ತಾರವಿದ್ದ ಹಲವು ಜವಳಿ ಕಾರ್ಖಾನೆಗಳು ಬೆಂಗಳೂರಿನಲ್ಲಿದ್ದವು. ಕೆಆರ್ ಮಿಲ್, ಬಿನ್ನಿ ಮಿಲ್, ರಾಜಾಮಿಲ್‌ಗಳು ಸಾವಿರಾರು ಕಾರ್ಮಿಕರಿಗೆ ಕೆಲಸ ಕೊಟ್ಟಿದ್ದವು. ಇಂದು ಈ ಮಿಲ್‌ಗಳು ಇದ್ದ ಜಾಗದಲ್ಲಿ ಬೃಹತ್ ಅಪಾರ್ಟ್‌ಮೆಂಟ್‌ಗಳು ತಲೆ ಎತ್ತಿವೆ. ಈ ಮಿಲ್‌ಗಳು ಕಣ್ಣುಮುಚ್ಚಿದ್ದರಿಂದ ಎಷ್ಟು ಜನ ಉದ್ಯೋಗ ಕಳೆದುಕೊಂಡರೆಂದು ಯಾರೂ ಲೆಕ್ಕ ಇಟ್ಟಂತಿಲ್ಲ. ಅವರ ಉದ್ಯೋಗವನ್ನು ಕಾಪಾಡಬೇಕೆಂದು ಹೇಳಿದವರೂ ಇಲ್ಲ.



ಈಗ ದಗಾಕೋರ ಸತ್ಯಂ ಕಂಪನಿಯನ್ನು ಉಳಿಸಬೇಕೆಂದು ಈ ದೇಶದ ಉದ್ಯಮಪತಿಗಳು ಮತ್ತು ಸರ್ಕಾರಿ ಬುದ್ಧಿಜೀವಿಗಳು ಪ್ರತಿಪಾದಿಸುತ್ತಿರುವಾಗ ಇವೆಲ್ಲವೂ ಸಹಜವಾಗಿ ನೆನಪಾಗುತ್ತಿದೆ. ಇಡೀ 80 ಮತ್ತು 90ರ ದಶಕದಲ್ಲಿ ಈ ದೇಶದಲ್ಲಿ ಕೇಳಿಬರುತ್ತಿದ್ದ ಘೋಷಣೆಗಳು ಹೀಗಿದ್ದವು: ನಷ್ಟ ಮಾಡುತ್ತಿರುವ ಸರ್ಕಾರಿ ಕಂಪನಿಗಳನ್ನು ಮುಚ್ಚಿ, ಸರ್ಕಾರ ಕೈಗಾರಿಕೋದ್ಯಮಗಳನ್ನು ಉಳಿಸಲು ಸಾರ್ವಜನಿಕ ಹಣವನ್ನು ವೆಚ್ಚ ಮಾಡಬಾರದು. ಮುಕ್ತ ಮಾರುಕಟ್ಟೆ ಜಿಂದಾಬಾದ್ ಇತ್ಯಾದಿ, ಇತ್ಯಾದಿ.



ಇದರಿಂದಾಗಿ ಎನ್‌ಜಿಇಎಫ್, ಹೆಚ್‌ಎಂಟಿ ತರಹದ ಹಲವಾರು ಬೃಹತ್ ಸರ್ಕಾರಿ ಕಾರ್ಖಾನೆಗಳಿಗೆ ರೋಗಗ್ರಸ್ತವೆಂಬ ಹಣೆಪಟ್ಟಿ ಹಚ್ಚಿ ಅವುಗಳನ್ನು ಮುಚ್ಚಿಹಾಕಲಾಯಿತು. ಕಾರ್ಮಿಕರ ಐಕ್ಯತೆ ಮತ್ತು ಸರ್ಕಾರಿ ಒಡೆತನವೆಂಬ ಪದಗಳೇ ನಿಷಿದ್ಧವೆಂಬಂತಾಯಿತು. ಕಾರ್ಮಿಕ ಸಂಘಟನೆ ಮತ್ತು ಸಮಾಜವಾದ ಎಂಬುದು ಘೋರ ಅಪರಾಧವೆಂಬಂತೆ ಚಿತ್ರಿಸಲಾಯಿತು.

ವಾಸ್ತವವಾಗಿ ಈ ಸತ್ಯಂ ಕಂಪನಿಯೂ ಒಳಗೊಂಡಂತೆ ಹೊಸ ಆರ್ಥಿಕತೆಯನ್ನು ಪ್ರತಿನಿಧಿಸುತ್ತಿರುವ ಕಂಪನಿಗಳು ಸಾರ್ವಜನಿಕ ಕಂಪನಿಗಳ ಸಮಾಧಿಯ ಮೇಲೆ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಂತಹವು. ಮಲ್ಲೇಶ್ವರಂ ಮಿಲ್ ಇದ್ದ ಜಾಗದಲ್ಲಿ ಈಗ ತಲೆಯೆತ್ತಿರುವ ಮಂತ್ರಿ ಅಪಾರ್ಟ್‌ಮೆಂಟ್ ಅಂತೂ ಅಂತಹ ಒಂದು ಸಮಾಧಿಯ ಮೇಲೆಯೇ ನಿರ್ಮಿಸಿರುವಂತದ್ದು!

ಈ ಖಾಸಗಿ ಮಾಲೀಕತ್ವದ ಕಂಪನಿಗಳಲ್ಲಿ ಕಾರ್ಮಿಕ ನೀತಿಗಳೇ ಇಲ್ಲ, ಮಾತ್ರವಲ್ಲ ದುಡಿಮೆಯ ಅವಧಿ, ಸೇವಾ ಭದ್ರತೆ, ಸಂಬಳ ಇವೆಲ್ಲವನ್ನು ಆ ಕಂಪನಿಗಳು ಮರು ವ್ಯಾಖ್ಯಾನ ಮಾಡಿ ಅವುಗಳ ಮೂಲ ಉದ್ದೇಶವನ್ನೇ ಭ್ರಷ್ಟಗೊಳಿಸಿದವು. ಉದ್ಯೋಗಿಗಳಿಗೂ ಅದು ಸದ್ಯಕ್ಕೆ ಅನುಕೂಲಕರವಾಗಿತ್ತು. ಯಾವುದೇ ನಿಯಂತ್ರಣವಿಲ್ಲದೆ ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ವಲಸೆ ಹೋಗುವುದು ಅವರಿಗೂ ಬೇಕಿತ್ತು. ಹೀಗಾಗಿ ಕೆಲಸದಲ್ಲಿನ ಭದ್ರತೆ ಎಂಬ ಪದವೇ ಅರ್ಥ ಕಳೆದುಕೊಂಡಿತ್ತು.

ಈಗ ಸತ್ಯಂ ಕಂಪನಿ ಕಷ್ಟದಲ್ಲಿದೆ. ಅದರ 53 ಸಾವಿರ ಉದ್ಯೋಗಿಗಳು ಕೆಲಸ ಕಳೆದುಕೊಳ್ಳುವ ಭೀತಿಯನ್ನು ಎದುರಿಸುತ್ತಿದ್ದಾರೆ. ಈಗ ಇದ್ದಕ್ಕಿದ್ದ ಹಾಗೆ ಸತ್ಯಂ ಮತ್ತದರ ಉದ್ಯೋಗಿಗಳು ಸರ್ಕಾರವು ತಮ್ಮನ್ನು ರಕ್ಷಿಸಬೇಕೆಂದು ಬಯಸುತ್ತಿದ್ದಾರೆ.

ಹಾಗಿದ್ದಲ್ಲಿ ನಾವು "ಏಕೆ" ಎಂಬ ಕೆಲವು ಪ್ರಶ್ನೆಗಳನ್ನು ಕೇಳಲೇಬೇಕಲ್ಲವೇ?

1. ಸತ್ಯಂ ಸಮಸ್ಯೆ ಒಂದು ಖಾಸಗಿ ಕಂಪನಿ ಎದುರಿಸುತ್ತಿರುವ ಕಂಪನಿಯೊಳಗಿನ ಬಿಕ್ಕಟ್ಟು. ಇದಕ್ಕೆ ಕಾರಣ ಆ ಕಂಪನಿಯ ಯಜಮಾನ ತನ್ನ ದುರಾಸೆಗಾಗಿ ಹೊಸ ಆರ್ಥಿಕ ವ್ಯವಸ್ಥೆಯನ್ನು ತನಗೆ ಬೇಕಾದಂತೆ ತಿರುಚಿಕೊಂಡಿದ್ದು. ಇದು ಇಡೀ ಕ್ಷೇತ್ರವೇ ಎದುರಿಸುತ್ತಿರುವ ಬಿಕ್ಕಟ್ಟಲ್ಲ. ಹೀಗಾಗಿ ಇಡೀ ಕ್ಷೇತ್ರವನ್ನೇ ಬೈಲ್ ಔಟ್ ಮಾಡಬೇಕಾದ ಅಗತ್ಯತೆ ಸರ್ಕಾರಕ್ಕಿಲ್ಲ.

2. ಇವತ್ತು ಐಟಿ ದೈತ್ಯರು ಸತ್ಯಂ ಬಿಕ್ಕಟ್ಟಿನ ಬೆನ್ನೇರಿ ಸರ್ಕಾರ ಇಡೀ ಕ್ಷೇತ್ರವನ್ನೇ ಉಳಿಸಲು ಸಾರ್ವಜನಿಕರ ಹಣವನ್ನು ನೀಡಬೇಕೆಂದು ಪಟ್ಟು ಹಿಡಿಯುತ್ತಿದ್ದಾರೆ. ಇಡೀ ಆರ್ಥಿಕತೆಯೇ ಹಿಂಜರಿತವನ್ನು ಎದುರಿಸುತ್ತಿರುವಾಗ ಕೇವಲ ಐಟಿ ಕ್ಷೇತ್ರವನ್ನು ಮಾತ್ರ ಏಕೆ ಉಳಿಸಬೇಕು?

ಅಷ್ಟು ಮಾತ್ರವಲ್ಲ; ಈವರೆಗೆ ತಮ್ಮ ಕ್ಷೇತ್ರದ ಆಗುಹೋಗುಗಳಿಂದ ಸರ್ಕಾರ ಗಾವುದ ದೂರವಿರಬೇಕೆಂದು ಬಯಸುತ್ತಿದ್ದ ಜನ ಈಗೇಕೆ ಅದೇ ಸರ್ಕಾರ ತನ್ನ ರಕ್ಷಣೆಯಲ್ಲಿ ಪಾತ್ರವಹಿಸಬೇಕೆಂದು ಬಯಸಬೇಕು?

ಹೀಗಾಗಿ ಬೇಡವೆಂದರೂ ಮತ್ತಷ್ಟು ಪ್ರಶ್ನೆಗಳನ್ನು ಕೇಳಲೇಬೇಕು ಎನಿಸುತ್ತದೆ: ಸರ್ಕಾರ ಇವುಗಳನ್ನು ಉಳಿಸಲೇ ಬೇಕೆಂದರೆ ಈ ಕೆಳಗಿನ ಶರತ್ತುಗಳನ್ನಾದರೂ ಹಾಕಲೇಬೇಕಲ್ಲವೇ?

1. ಎಲ್ಲಾ ಐಟಿ ಸಂಸ್ಥೆಗಳು ಕಡ್ಡಾಯವಾಗಿ ಕಾರ್ಮಿಕ ಕಾನೂನುಗಳನ್ನು ಪಾಲಿಸಲೇ ಬೇಕು.
2. ಉದ್ಯೋಗಿಗಳ ನೋಂದಾವಣೆಯಲ್ಲಿ ಅವು ಕಡ್ಡಾಯವಾಗಿ ಮೀಸಲಾತಿ ನೀತಿಯನ್ನು ಪಾಲಿಸಬೇಕು.
3. ಸರ್ಕಾರ ಈ ಕಂಪನಿಗಳಿಗೆ ನೀಡುತ್ತಿರುವ ತೆರಿಗೆ ರಿಯಾಯತಿಯನ್ನು ನಿಲ್ಲಿಸಬೇಕು ಮತ್ತು ಅವೂ ಸಹ ಇತರ ಉದ್ಯಮಗಳಂತೆ ತೆರಿಗೆಯನ್ನು ಕಟ್ಟಬೇಕು.
4. ಅವುಗಳ ವ್ಯವಹಾರವು ಸಹ ಮಾಹಿತಿ ಹಕ್ಕು ಕಾಯಿದೆಯಡಿ ಬರಬೇಕು.

ಇವು ಕನಿಷ್ಠ ಶರತ್ತುಗಳು. ಅಲ್ಲವೇ?

-ಹೃತಿಕ್ ಸುಮುಖ,
ಬೆಂಗಳೂರು

ಕಾಲೇಜು ದಿನಗಳು ಮತ್ತು ಕನ್ನಡ ಚಿತ್ರಗಳು

ಕಾಲೇಜ್ : ಬೊಂಬಾಟ್
ಪ್ರಾಂಶುಪಾಲರು : ಮೆಂಟಲ್‌ಮಂಜ
ಪ್ರಾಧ್ಯಾಪಕರು : ಹುಚ್ಚ
ಲವ್ : ಹುಡುಗಾಟ
ತರಗತಿ : ಸಂಗಮ
ಪರೀಕ್ಷೆ : ರಕ್ತ ಕಣ್ಣೀರು
ಮೌಲ್ಯನಿರ್ಮಾಪಕ : ಹಠವಾದಿ
ಫಲಿತಾಂಶ : ಗಾಳಿಪಟ

* * * *

ರಾಧಿಕಾ : ರೀ, ನಾನು ಲಕ್ಸ್ ಸೋಪ್ ಹಾಕೊಂಡು ಸ್ನಾನ ಮಾಡಲೋ ಅಥವಾ ಡವ್ ಸೋಪ್ ಹಾಕೊಂಡು ಸ್ನಾನ ಮಾಡಲೋ?

ಕುಮಾರ : ಲೇ..ಬೋ... ಮೊದಲು ಬಾಗಿಲು ಹಾಕೊಂಡು ಸ್ನಾನ ಮಾಡು. ಇಲ್ಲಾಂದ್ರೆ ಆ ಜನಾರ್ದನ ರೆಡ್ಡಿ ವಿಡಿಯೋ ಸೀಡಿ ಮಾಡಿಬಿಟ್ಟಾನು!

* * * *

ಮಾವ : ಅಳಿಯಂದ್ರೆ, ಎಲ್ಲಿ ನನ್ನ ಮಗಳು?
ಅಳಿಯ : ಮಾವ ನೀವೇ ಹೇಳಿದ್ದರಲ್ಲಾ? ಒಲಿದರೆ ನಾರಿ, ಮುನಿದರೆ ಮಾರಿ ಅಂತ. ಅವಳು ಮುನಿಸಿಕೊಂಡಳು ಅದಕ್ಕೆ ಅವಳನ್ನು ಮಾರಿ ಬಿಟ್ಟೆ.

* * * *

ಮಗ : ನಾನು ಎದುರು ಮನೆ ಹುಡುಗೀನಾ ಪ್ರೀತಿಸ್ತಿದ್ದೀನಿ. ನಾನು ಅವಳನ್ನೇ ಮದುವೆ ಆಗ್ತೀನಿ!
ತಂದೆ : ಸಾಧ್ಯವಿಲ್ಲ, ಅವಳು ನಿನ್ನ ತಂಗಿ. (ಕತೆಯಲ್ಲಿ ಒಂದು ಟ್ವಿಸ್ಟ್)
ತಾಯಿ : ಬೇಜಾರು ಮಾಡ್ಕೋಬೇಡ ಮರಿ. ಅವಳ ಜೊತೆ ನಿನ್ನ ಮದುವೆನ ನಾನು ಮಾಡುಸ್ತೀನಿ. ಯಾಕೆಂದರೆ ನೀನು ನಿನ್ನ ಅಪ್ಪನ ಮಗನಲ್ಲ!

* * * *



ಮಗ : ಅಪ್ಪ, ನನ್ನ ಮಾರ್ಕ್ಸ್‌ಕಾರ್ಡ್‌ಗೆ ಸೈನ್ ಮಾಡು
ಅಪ್ಪ : ಏನೋ ಇಷ್ಟು ಕಡಿಮೆ ಮಾರ್ಕ್ಸ್ ತಗೊಂಡಿದ್ದೀಯಾ? ನಾಚಿಕೆ ಆಗಲ್ವಾ... ನೀನು ನನ್ನನ್ನ ಅಪ್ಪ ಅಂತ ಕರೀಬೇಡ.
ಮಗ : ಆಯ್ತು, ಲೋ ಮಚ್ಚಾ ಸೈನ್ ಮಾಡೋ!

* * * *

ಇಬ್ಬರು ಪುರುಷರು ದೊಡ್ಡ ಕಟ್ಟಡವೊಂದರಿಂದ ಜಿಗಿಯಲು ಸಿದ್ಧರಾಗಿದ್ದಾರೆ.

ಮೊದಲನೆಯವನು : ನಾನು ಹೀಗೆ ಜಿಗಿಯುತ್ತಿರುವುದು ಐವತ್ತನೇ ಬಾರಿ. ಇದರಲ್ಲಿ ನಾನು ರೆಕಾರ್ಡ್ ಹೋಲ್ಡರ್.

ಎರಡನೆಯವನು : ನಾನು ಹೀಗೆ ಜಿಗಿಯುತ್ತಿರುವುದು ಮೊದಲನೆ ಬಾರಿ, ನಾನು ಸತ್ಯಂ ಸ್ಟಾಕ್ ಹೋಲ್ಡರ್!

* * * *

ಬ್ರೇಕಿಂಗ್ ನ್ಯೂಸ್:

ಸತ್ಯಂ ಹಗರಣದ ರೂವಾರಿ ರಾಮಲಿಂಗ ರಾಜು ಅವರ ಬದುಕನ್ನು ಕುರಿತು ಸಿನಿಮಾವೊಂದು ಸೆಟ್ಟೇರುತ್ತಿದೆ. ಸಿನಿಮಾದ ಹೆಸರು...

'ಮಿಲಿಯನೇರ್ ಸ್ಲಂ ಡಾಗ್'!

ಹೀಗೊಂದು ನ್ಯಾಯ



ಇತ್ತೀಚೆಗೆ ರತನ್ ಟಾಟಾ "ನರೇಂದ್ರ ಮೋದಿ ಈ ದೇಶದ ಪ್ರಧಾನಿ ಆಗಬೇಕು. ಯಾವ ಉದ್ಯಮಿ ಗುಜರಾತಿನಲ್ಲಿ ಬಂಡವಾಳ ಹೂಡಿಲ್ಲವೊ ಆತ ಪೆದ್ದ" ಎಂದಿದ್ದಾರೆ. ಮೋದಿ ಬಗೆಗಿನ ಟಾಟಾ ಪ್ರೇಮಕ್ಕೆ ಕಾರಣಗಳಿವೆ. ನ್ಯಾನೋ ಕಾರ್ ಕಾರ್ಖಾನೆಯನ್ನು ಸಿಂಗೂರಿನಿಂದ ಗುಜರಾತಿಗೆ ವರ್ಗಾಯಿಸಲು ಟಾಟಾನಿಗೆ ಮೋದಿ 9,750 ಕೋಟಿ ರೂಪಾಯಿಗಳ ಸಾಲವನ್ನು ಕೇವಲ 0.1%ಬಡ್ಡಿ ಮೇಲೆ ನೀಡಿದ. ಮಾತ್ರವಲ್ಲ ಈ ಸಾಲವನ್ನು ಇಪ್ಪತ್ತು ವರ್ಷಗಳ ಕಾಲ ತೀರಿಸಬೇಕಿಲ್ಲ ಎಂದ.

ಆದರೆ ಅದೇ ಗುಜರಾತಿನಲ್ಲಿ ದಲಿತರು ಚರಂಡಿಗಳನ್ನು ಸ್ವಚ್ಛಗೊಳಿಸುವ ಕೆಲಸವನ್ನು ತೊರೆದು ಹೊಸ ಜೀವನವನ್ನು ಕಂಡುಕೊಳ್ಳಲು ಮೋದಿ ಸರ್ಕಾರ ಸಹಾಯಧನದ ರೂಪದಲ್ಲಿ ನೀಡುವ ಸಾಲ ಕೇವಲ 80,000 ರೂಪಾಯಿಗಳು. ಅಷ್ಟೇ ಅಲ್ಲ ಈ ಸಾಲದ ಮೇಲೆ ವಿಧಿಸುವ ಬಡ್ಡಿ ದರ 11%.

ಜನಸಾಮಾನ್ಯರು ಮೋದಿಯನ್ನು ದ್ವೇಷಿಸಲು, ಟಾಟಾ-ಅಂಬಾನಿ-ಮಿತ್ತಲ್ ತರಹದ ಉದ್ಯಮಿಗಳು ಅದೇ ಮೋದಿಯನ್ನು ಪ್ರೀತಿಸಲು ಇಷ್ಟು ಸಾಕಲ್ಲವೇ?

Quote-unquote"

"ಅಮೆರಿಕಾವನ್ನು ಮತ್ತು ಅಮೆರಿಕದ ಜನರನ್ನು ಹೇಗೆ ನಾಶ ಮಾಡಬೇಕೆಂದು ಭಯೋತ್ಪಾದಕರು ಸದಾ ಚಿಂತಿಸುತ್ತಿರುತ್ತಾರೆ. ನಾವೂ ಅದನ್ನೇ ಮಾಡುತ್ತಿರುತ್ತೇವೆ."

-ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್

"ನಾನು ನನ್ನ ರಾಜಕೀಯ ಬದುಕನ್ನು ಬರಾಕ್ ಒಬಾಮಾ ರೀತಿಯಲ್ಲಿ ರೂಪಿಸಿಕೊಳ್ಳುತ್ತೇನೆ. ನನ್ನ ಮತ್ತು ಒಬಾಮಾ ನಡುವೆ ಹಲವಾರು ಸಾಮ್ಯತೆಗಳಿವೆ."

-ನಟ ಸಂಜಯ್ ದತ್

"ಐವತ್ತು ವರ್ಷಗಳ ಕಮ್ಯುನಿಸ್ಟ್ ಕ್ಯೂಬಾ ಈ ಅವಧಿಯಲ್ಲಿ ಹತ್ತು ಅಮೆರಿಕಾದ ಅಧ್ಯಕ್ಷರನ್ನು ಕಂಡಿದೆ. ಅಷ್ಟೇ ಅಲ್ಲ, ಇವತ್ತು ಅಮೆರಿಕ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸುತ್ತಿದ್ದರೆ ಕ್ಯೂಬಾ ಮೇಲೆ ಯಾವ ಪರಿಣಾಮವೂ ಬೀರಿಲ್ಲ."

-ಕ್ಯೂಬಾ ನಾಯಕ ಫಿಡಲ್ ಕ್ಯಾಸ್ಟ್ರೋ



ಕಂಡಹಾಗೆ

■ ಗೌರಿ ಲಂಕೇಶ್

ಒಬಾಮಾ ನಿರೀಕ್ಷೆ ಮತ್ತು ವಾಸ್ತವ

ಬಹಳಷ್ಟು ಜನರಂತೆ ನಾನು ಕೂಡ ಜನವರಿ
ರಂದು ಬರಾಕ್ ಒಬಾಮಾ ಅವರು
ಮಾಣವಚನ ಸ್ವೀಕರಿಸುವುದನ್ನು ನೋಡಲು
ತರಳಾಗಿದ್ದೆ. ಅಮೆರಿಕಾದಿಂದ ರಜೆ ಮೇಲೆ
ತಿಂಗಳು ಬಂದಿದ್ದ ಚಿದು ಈ
ಾರಂಭಕ್ಕೆಂದು ವಾಪಸ್ಸು ಹೋಗಿರಬೇಕಿತ್ತು.
ಆತನ ಕಣ್ಣಿಗೆ ಯಾವುದೋ ಒಂದು
ಸ್ ತೊಂದರೆ ಕೊಡುತ್ತಿದ್ದು ಚಿಕಿತ್ಸೆಗೆಂದು
ಇಲ್ಲೇ ಉಳಿದಿದ್ದಾನೆ. ಆದ್ದರಿಂದ ಇಬ್ಬರೂ
ಪಮಾರಂಭವನ್ನು ಜೊತೆಯಾಗಿ
ಡುವುದೆಂದು ನಿರ್ಧರಿಸಿದೆವು.

ಬೆಂಗಳೂರು ಈಗ ಎಷ್ಟು ವಾಹನ
ಣೆಯಿಂದ ತತ್ತರಿಸುತ್ತಿದೆ ಎಂದರೆ ನನ್ನ
ಸಿನಿಂದ ಹೆಬ್ಬಾಳ ಹತ್ತಿರವಿರುವ ಚಿದು ಮನೆಗೆ
ು 16 ಕಿ.ಮೀಟರ್‌ಗಳು. ಆದರೆ ಈ
ರವನ್ನು ಕ್ರಮಿಸಲು ನನಗೆ ಹಿಡಿದಿದ್ದು
ೂವರೆ ಗಂಟೆ!

ಕಳೆದ ಹದಿನಾಲ್ಕು ವರ್ಷಗಳಿಂದ ಇಂಡಿಯನ್
ಪ್ರೆಸ್ ಮತ್ತು ಅನಂತರ ಟೈಮ್ಸ್ ಆಫ್
ಯಾದ ಅಂತರರಾಷ್ಟ್ರೀಯ
ಾದಕನಾಗಿರುವ ಚಿದುಗೆ ದುಃಖ: ಕಣ್ಣಿನ
ನಾದಿಂದಾಗಿ ಇಂತಹ ಐತಿಹಾಸಿಕ ಘಟನೆಯನ್ನು
ಡಲು, ಅದರ ಬಗ್ಗೆ ವರದಿ ಮಾಡಲು ತಾನು
ಅಮೆರಿಕಾದಲ್ಲಿಲ್ಲವಲ್ಲ ಎಂದು. "ನಮ್ಮ
ುಗ ಪ್ರೆಸಿಡೆಂಟ್ ಆಗುತ್ತಿದ್ದಾನೆ, ಆದರೆ ನಾನೇ
ಲ್ಲ" ಎಂದು ತನ್ನ ನೋವಿನ ನಡುವೆಯೂ
ತಮಾಷೆ ಮಾಡುತ್ತಿದ್ದ.

ಒಬಾಮಾ ಬಗ್ಗೆ ಚಿದು "ನಮ್ಮ ಹುಡುಗ"
ಪದಗಳನ್ನು ಬಳಸಿದ್ದು ಅಚ್ಚರಿ ಹುಟ್ಟಿಸಲಿಲ್ಲ.
ಕೆಂದರೆ ಒಬಾಮಾ ಬಗ್ಗೆ ಅಮೆರಿಕಾದಿಂದ
ು ಆಫ್ರಿಕಾದ ಕಿನ್ಯಾ, ಏಷ್ಯಾದ
ಲ್ಯಾಂಡ್‌ವರೆಗೂ "ನಮ್ಮ ಹುಡುಗ" ಎಂಬ
ನೆ ಬೆಳೆದಿದೆ. ಅಷ್ಟೇ ಅಲ್ಲ, "ಬದಲಾವಣೆ"
ಘೋಷ ವಾಕ್ಯದೊಂದಿಗೆ ಅಧ್ಯಕ್ಷ
ಾವಣೆಗಳಲ್ಲಿ ಗೆದ್ದ ಒಬಾಮಾ ನಿಜವಾಗಲೂ
ಎಲ್ಲೆಡೆ ಮತ್ತು ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆ ತರುತ್ತಾರೆ ಎಂಬ ಅಪಾರ ನಿರೀಕ್ಷೆಯೂ ಇದೆ.

ಇದೆಲ್ಲದರ ಬಗ್ಗೆ ನಾವಿಬ್ಬರೂ ಚರ್ಚಿಸುತ್ತಿದ್ದಾಗ "ಒಬಾಮಾ ಈಗಿರುವ ಸ್ಥಿತಿಯನ್ನು ಕಲ್ಪಿಸಿಕೊಂಡರೆ ಹೆದರಿಕೆಯಾಗುತ್ತದೆ. ಏಕೆಂದರೆ ಆತನ ಮೇಲೆ ಜನ ಅಷ್ಟೊಂದು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ವಾಸ್ತವವಾಗಿ ಯಾರಿಂದಲೂ ಅಷ್ಟೆಲ್ಲ ನಿರೀಕ್ಷೆಗಳನ್ನು ಈಡೇರಿಸಲಾಗುವುದಿಲ್ಲ" ಎಂದು ಚಿದು ಹೇಳಿದ.

ಅಂತಹ ನಿರೀಕ್ಷೆಗಳಿಂದಾಗಿಯೇ ಅವತ್ತು ಅಮೆರಿಕದ ರಾಜಧಾನಿ ವಾಷಿಂಗ್ಟನ್‌ನಲ್ಲಿ ಲಕ್ಷಾಂತರ ಜನ ಸೇರಿದ್ದು; ಜಗತ್ತಿನಾದ್ಯಂತ ಮಿಲಿಯನ್ ಗಟ್ಟಲೆ ಜನ ತಮ್ಮ ಟಿವಿಗಳ ಮುಂದೆ ಕೂತಿದ್ದು; ಒಬಾಮಾ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ತಮ್ಮ ಪ್ರಥಮ ಅಧ್ಯಕ್ಷ ಭಾಷಣದಲ್ಲಿ ಏನೇನು ಹೇಳುತ್ತಾರೆಂದು ಅಪಾರ ಕುತೂಹಲದಿಂದ ಕಾದಿದ್ದು.

ಅಮೆರಿಕನ್ನರಲ್ಲದೆ ಇತರೆ ದೇಶಗಳ ಜನರೂ ತನ್ನ ಮೇಲೆ ಇಟ್ಟಿರುವ ಅಪಾರ ನಿರೀಕ್ಷೆಗಳ ಬಗ್ಗೆ ಒಬಾಮಾ ಅವರಿಗೆ ಗೊತ್ತಿಲ್ಲವೆಂದೇನಲ್ಲ, ಅವರಿಗೆ ಚೆನ್ನಾಗಿಯೇ ಗೊತ್ತು. ತನ್ನ ಭಾಷಣದಲ್ಲಿ ಜನರು ನಿರೀಕ್ಷಿಸುವುದನ್ನು ಹೇಳಬೇಕು. ಆದರೆ ತನ್ನ ಕೈಯಿಂದ ಆಗಲಾರದ ಭರವಸೆಗಳನ್ನು ಕೊಡಬಾರದು; ಇತರರಿಗೆ ಎಚ್ಚರಿಕೆ ಕೊಡಬೇಕು ಆದರೆ ಬೆದರಿಸಿದಂತೆ ಕೇಳಿಸಕೂಡದು; ಬದಲಾವಣೆ ತರುತ್ತೇನೆಂದು ಹೇಳಬೇಕು ಆದರೆ ಎಲ್ಲವೂ ಸದ್ಯದಲ್ಲೇ ಸರಿಹೋಗುತ್ತದೆಂಬ ಭಾವನೆ ಮೂಡಿಸಿ ಜನರನ್ನು ವಂಚಿಸಬಾರದು.....



ಹೇಳಿಕೇಳಿ ಒಬಾಮಾ ಅದ್ಭುತ ಭಾಷಣಕಾರ. ತನ್ನ ಜ್ಞಾನ ಮತ್ತು ಕಾಳಜಿ, ಕನಸು ಮತ್ತು ನಿರಾಶೆ, ಅನುಭವಿಸಿದ್ದು ಮತ್ತು ಕಂಡದ್ದು ಎಲ್ಲವನ್ನೂ ಹದವಾಗಿ ಬೆರೆಸಿ ಮಾತನಾಡುವ ಒಬಾಮಾ ಜನರ ಮನ ಮುಟ್ಟುತ್ತಾರೆ. ಆದರೆ ಓಟುಗಳಿಗಾಗಿ ಮಾಡುವ ಭಾಷಣಕ್ಕೂ, ಅಧ್ಯಕ್ಷನಾಗಿ ಮಾಡುವ ಭಾಷಣಕ್ಕೂ ವ್ಯತ್ಯಾಸವಿದೆ ಎಂದು ಅರಿತಿರುವ ಒಬಾಮಾ ತನ್ನ ಎಲ್ಲ ಮಾತಿನ ಕುಶಲತೆಯನ್ನು ಪ್ರಯೋಗಿಸಿ ಅಂದಿನ ಭಾಷಣ ಮಾಡಿದರು. ಎಲ್ಲ ದೃಷ್ಟಿಕೋನಗಳಿಂದಲೂ ಆ ಭಾಷಣದ ಪ್ರತಿ ಸಾಲು ಆ ಸಂದರ್ಭಕ್ಕೆ ಸೂಕ್ತವಾಗಿತ್ತು.

ಆದರೂ ಅಮೆರಿಕಾದ ವಿಶ್ಲೇಷಕರಲ್ಲಿ ಈಗಿರುವ ಭಯ ಯಾವುದೆಂದರೆ ಒಬಾಮಾ ಒಂದು ಸಣ್ಣ ತಪ್ಪು ಮಾಡಿದರೂ ಅದರಿಂದ ಆಗುವ ನಿರಾಶೆ ಬಹಳ ದೊಡ್ಡದಾಗಿರುತ್ತದೆಂದು. ಆ ಭಯ ಸಹಜವೇ. ಉದಾಹರಣೆಗೆ ಇದೀಗ ಮಾಜಿ ಅಧ್ಯಕ್ಷನಾಗಿರುವ ಜಾರ್ಜ್ ಬುಷ್‌ನಿಂದ ಯಾರೂ ಹೆಚ್ಚನ್ನು ನಿರೀಕ್ಷಿಸಿರಲಿಲ್ಲ. ಆತ ಇಂಗ್ಲಿಷ್‌ಅನ್ನು ತಪ್ಪುತಪ್ಪಾಗಿ ಮಾತನಾಡಿದಾಗ ಅಥವಾ ಅಸಂಬದ್ಧವಾಗಿ ಮಾತನಾಡಿದಾಗ, ಜನ ಆತನ ಬಗ್ಗೆ ನಿರಾಶೆಗೊಳ್ಳದೆ ಲೇವಡಿ ಮಾಡಿ ಸುಮ್ಮನಾಗುತ್ತಿದ್ದರು.

ಅಂದಹಾಗೆ ಅಮೆರಿಕದ ಹಾಸ್ಯಗಾರರಿಗಂತೂ ಈಗ ತುಂಬಾ ಬೇಸರವಾಗಿದೆಯಂತೆ. ಯಾಕೆಂದರೆ ಬುಷ್ ಪ್ರತಿದಿನ ಅವರುಗಳಿಗೆ ಸಕತ್ತಾಗಿ ಸಾಮಗ್ರಿ ಒದಗಿಸುತ್ತಿದ್ದರು. ಆದರೆ ತನ್ನ ಪ್ರತಿಮಾತು ಮತ್ತು ಕ್ರಿಯೆ ಬಗ್ಗೆ ಜಾಗರೂಕರಾಗಿರುವ ಒಬಾಮಾರಿಂದ ಅಂತಹ ಸಾಮಗ್ರಿ ಸಿಗುವುದಿಲ್ಲವೆಂದೂ, ಒಬಾಮಾರ ಬಗ್ಗೆ ಹಾಸ್ಯ ಮಾಡಿದರೆ ಜನರಿಗೆ ನಗು ಬದಲಾಗಿ ಕೋಪ ಬರುತ್ತದೆ ಎಂದೂ ಅಲ್ಲಿನ ಹಾಸ್ಯಗಾರರು ದುಃಖಭರಿತರಾಗಿದ್ದಾರಂತೆ!

ಒಬಾಮಾ ಬಗ್ಗೆ ಮೊನ್ನೆ ನಮ್ಮ ಆಫೀಸಿನ ಸಿಬ್ಬಂದಿ ಚರ್ಚಿಸುತ್ತಿದ್ದಾಗ, ಶಿವಸುಂದರ್ ಅವರು "ಆತನಿಂದ ಏನೂ ಆಗಲ್ಲ" ಎಂದರು. ನಾನು ನಕ್ಕು "ನೀವು ತುಂಬಾ ಸಿನಿಕ್ ಕಣ್ರಿ" ಎಂದೆ. "ಹಾಗಲ್ಲ, ಒಬಾಮಾಗೆ ನಿಜವಾಗಲೂ ಬದಲಾವಣೆ ತರಬೇಕು ಅನ್ನಿಸಿದ್ದರೂ ಅದು ಆತನಿಂದ ಸಾಧ್ಯವಿಲ್ಲ. ಏಕೆಂದರೆ ಬದಲಾವಣೆ ಆಗಬೇಕೆಂದರೆ ಅಮೆರಿಕಾದಲ್ಲಿ ಗಟ್ಟಿಯಾಗಿ ಬೇರುಬಿಟ್ಟಿರುವ ಇದೀ ವ್ಯವಸ್ಥೆಯೇ ಬದಲಾಗಬೇಕು. ಅದು ಸಾಧ್ಯವಿಲ್ಲ" ಎಂದರು ಶಿವಸುಂದರ್.

ಒಬಾಮಾ ಎಷ್ಟು ಪರಿಣಾಮಕಾರಿ ಆಗಬಹುದು ಎಂಬುದರ ಬಗ್ಗೆ ಚಿದು ಕೂಡ ಮಾತನಾಡುತ್ತಾ ``Mr. Smith goes to Washington'' ಎಂಬ ಹಾಲಿವುಡ್ ಸಿನಿಮಾ ಬಗ್ಗೆ ಹೇಳಿದ್ದ. ಒಬಾಮಾ ಮೇಲಿನ ನಿರೀಕ್ಷೆಗಳ ಹಿನ್ನೆಲೆಯಲ್ಲಿ ಈ ಚಲನಚಿತ್ರ ಪ್ರಸ್ತುತ ಎನಿಸುತ್ತದೆ.

1939 ರಲ್ಲಿ ಬಿಡುಗಡೆಗೊಂಡ ``Mr. Smith...'' ಚಿತ್ರ ಅಮೆರಿಕದಲ್ಲಿನ ರಾಜಕೀಯ ಕುರಿತದ್ದು. ಖ್ಯಾತ ನಿರ್ದೇಶಕ ಫ್ರಾಂಕ್ ಕಾಪ್ರಾ ಇದನ್ನು ನಿರ್ದೇಶಿಸಿದ್ದು ಜಗತ್ತಿನ ಅತಿ ಶ್ರೇಷ್ಠ ಸಿನಿಮಾಗಳಲ್ಲಿ ಇದೊಂದಾಗಿದೆ. ಅದರ ಕತೆ ಹೀಗಿದೆ:

ಅಮೆರಿಕಾದ ರಾಜ್ಯವೊಂದರ ಸೆನೇಟರ್ ನಿಧನ ಹೊಂದಿದ್ದಾನೆ. ಮುಂದಿನ ಚುನಾವಣೆಯ ತನಕ ಸೆನೇಟರ್ ಸ್ಥಾನದಲ್ಲಿ ಯಾರನ್ನು ಕೂರಿಸಬೇಕು ಎಂದು ನಿರ್ಧರಿಸುವ ಅಧಿಕಾರ ಆ ರಾಜ್ಯದ ರಾಜ್ಯಪಾಲನಿಗಿದೆ. ರಾಜ್ಯಪಾಲ ಹೂಬರ್ಟ್‌ಗೆ ತನ್ನ ಸ್ನೇಹಿತ ಮತ್ತು ಭ್ರಷ್ಟ ಉದ್ಯಮಿಯಾದ ಜಿಮ್‌ಗೆ ಅನುಕೂಲವಾಗುವಂತಹ ವ್ಯಕ್ತಿಯನ್ನು ಸೆನೇಟರ್ ಹುದ್ದೆಯಲ್ಲಿ ಕೂರಿಸುವ ಆಸೆ. ಆದರೆ ಹೂಬರ್ಟ್ ಮಕ್ಕಳಿಗೆ ತಮ್ಮ ಶಾಲೆಯಲ್ಲಿ ಗುರುವಾಗಿರುವ ಸ್ಮಿತ್ ಎಂಬಾತನೇ ಸೆನೇಟರ್ ಆಗಬೇಕೆಂಬ ಬಯಕೆ. ಸ್ಮಿತ್ ಒಳ್ಳೆಯ ಮನುಷ್ಯನಾದರೂ ರಾಜಕೀಯದ ಬಗ್ಗೆ ಮುಗ್ಧ. ಆತನ ಈ ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡು ತನಗೆ ಬೇಕಿರುವುದನ್ನೆಲ್ಲ ಸಾಧಿಸಿಕೊಳ್ಳಬಹುದು ಎಂದು ಲೆಕ್ಕ ಹಾಕುವ ಹೂಬರ್ಟ್ ಕೊನೆಗೆ ಸ್ಮಿತ್‌ನನ್ನೇ ಆಯ್ಕೆ ಮಾಡುತ್ತಾನೆ.

ಸಾರ್ವಜನಿಕವಾಗಿ ಉತ್ತಮ ವ್ಯಕ್ತಿ ಎನಿಸಿಕೊಂಡಿರುವ ಆದರೆ ಒಳಗೊಳಗೇ ಭ್ರಷ್ಟನಾಗಿರುವ ಜೋಸೆಫ್ ಎಂಬ ಹಿರಿಯ ರಾಜಕಾರಣಿ ಸ್ಮಿತ್‌ನನ್ನು ತನ್ನ ಆಶ್ರಯಕ್ಕೆ ತೆಗೆದುಕೊಳ್ಳುತ್ತಾನೆ. ಆದರೆ ರಾಜಕಾರಣದ ಗಂಧಗಾಳಿಯೂ ಗೊತ್ತಿರದ ಸ್ಮಿತ್‌ನನ್ನು ವಾಷಿಂಗ್ಟನ್ ಪತ್ರಕರ್ತರು ಹಳ್ಳಿಗಮಾರ ಎಂದೂ, ಆತ ಸೆನೇಟರ್ ಆಗಿರಲಿಕ್ಕೆ ನಾಲಾಯಕ್ ಎಂದೂ ಲೇವಡಿ ಮಾಡುತ್ತಾರೆ.

ತಾನು ಹಳ್ಳಿಗಮಾರನಲ್ಲ ಎಂದು ಜನರಿಗೆ ತಿಳಿಸಲು ಸ್ಮಿತ್ ಒಂದು ಯೋಜನೆಯನ್ನು ರಚಿಸಬೇಕೆಂದು ಜೋಸೆಫ್ ಸಲಹೆ ನೀಡುತ್ತಾನೆ. ಅದರಂತೆ ಸ್ಮಿತ್ ಮಕ್ಕಳ ಒಂದು ಉದ್ಯಾನವನಕ್ಕೆ ಜಾಗವನ್ನು ನಿಗದಿಪಡಿಸಿ ಅದಕ್ಕೆಂದು ಜನರಿಂದ ಧನ ಸಹಾಯವನ್ನು ಕೇಳುತ್ತಾನೆ. ಆತನ ಯೋಜನೆ ಜನರಿಗೆ ಇಷ್ಟವಾಗಿ ಹಣ ಹರಿದು ಬರುತ್ತದೆ. ಆದರೆ ಸ್ಮಿತ್‌ಗೆ ಗೊತ್ತಿಲ್ಲದಂತೆ ಆತ ಉದ್ಯಾನವನಕ್ಕೆ ನಿಗದಿಪಡಿಸಿರುವ ಜಾಗವನ್ನು ಜೋಸೆಫ್ ಮತ್ತು ಉದ್ಯಮಿಗಳು ಲಪಟಾಯಿಸಿ, ಇದೆಲ್ಲಾ ಸ್ಮಿತ್‌ನ ಕುತಂತ್ರ ಎಂದೇ ಬಿಂಬಿಸುತ್ತಾರೆ. ಪತ್ರಿಕೆಗಳೂ ಸ್ಮಿತ್ ವಿರುದ್ಧ ಕೆಂಡಕಾರಿ ಜನಸಾಮಾನ್ಯರು ಆತನ ವಿರುದ್ಧ ತಿರುಗಿಬೀಳುವಂತೆ ಮಾಡುತ್ತಾರೆ. ಕೊನೆಗೆ ವಿಚಾರಣೆ ನಡೆದು ಸ್ಮಿತ್ ನಿಜವಾಗಲೂ ನಿರಪರಾಧಿ ಎಂದೂ, ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಉದ್ಯಮಿಗಳೇ ಈ ಭೂ ಅವ್ಯವಹಾರದ ಹಿಂದೆ ಇದ್ದಾರೆಂದೂ ಸಾಬೀತಾಗುತ್ತದೆ.

ಈ ಚಿತ್ರವನ್ನು ವಾಷಿಂಗ್ಟನ್‌ನಲ್ಲಿ ಮೊದಲ ಬಾರಿಗೆ ಪ್ರದರ್ಶಿಸಿದಾಗ ದೊಡ್ಡ ರಾದ್ಧಾಂತವೇ ನಡೆದಿತ್ತು. ಹಲವು ಸನೇಟರ್‌ಗಳು ಇದನ್ನು ಟೀಕಿಸಿದ್ದರೆ ಪತ್ರಕರ್ತರು "ಈ ಚಿತ್ರವನ್ನು ಸರ್ಕಾರ ನಿಷೇಧಿಸಬೇಕು. ಇದು ದೇಶದ ಹಿತಾಸಕ್ತಿಗೆ ವಿರುದ್ಧವಾದದ್ದು" ಎಂದು ಅಭಿಪ್ರಾಯಪಟ್ಟಿದ್ದರು. ಇನ್ನು ಕೆಲ ರಾಜಕಾರಣಿಗಳು ಅಮೆರಿಕಾದ ಪ್ರಜಾತಂತ್ರ ಸರ್ಕಾರವನ್ನು ಟೀಕಿಸುವ ಈ ಚಿತ್ರದ ಹಿಂದೆ ಕಮ್ಯುನಿಸ್ಟರು ಇದ್ದಾರೆಂದೇ ವಾದಿಸಿದ್ದರು.

ಅಮೆರಿಕಾದಲ್ಲಿ ಮಾತ್ರವಲ್ಲ ``Mr. Smith'' ಚಿತ್ರದ ಮೇಲೆ ನಾಜಿಗಳ ಜರ್ಮನಿ, ಫ್ಯಾಸಿಸ್ಟರ ಇಟಲಿ, ರಷ್ಯಾ ಮತ್ತು ಸ್ಪೇನ್ ದೇಶಗಳು ನಿಷೇಧ ಹೇರಿದ್ದವು. ಆದರೆ ಇದೇ ಚಿತ್ರವನ್ನು ಇವತ್ತು "ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ಮತ್ತು ಸದಭಿರುಚಿಗಾಗಿ ಈ ಚಿತ್ರ ಮುಖ್ಯವಾದದ್ದು" ಎಂದೇ ಅಮೆರಿಕದ ನ್ಯಾಷನಲ್ ಫಿಲಂ ರೆಜಿಸ್ಟ್ರಿ ಅದನ್ನು ಪರಿಗಣಿಸಿರುವುದರಿಂದ ಇದೀಗ ಅಂತರ್ಜಾಲದಲ್ಲಿ ಲಭ್ಯವಿದೆ.....

ರಾಜಕಾರಣದ ಬಗ್ಗೆ ಸ್ಮಿತ್‌ನಂತೆ ಒಬಾಮಾ ಮುಗ್ಧನಲ್ಲ. ಆದರೆ ಅಲ್ಲಿನ ವ್ಯವಸ್ಥೆ ಎಷ್ಟು ಬದಲಾವಣೆಗಳನ್ನು ತರಲು ಒಬಾಮಾರಿಗೆ ನೆರವಾಗುತ್ತದೆ ಎಂಬ ಪ್ರಶ್ನೆಯಂತೂ ಉಳಿಯುತ್ತದೆ.... ■



ಅನಿತಾ ಶಾಸಕಿಯಾಗಿದ್ದು ಹೀಗೆ.....!


ರಾಜ್ಯ ವಿಧಾನಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಶಾಸಕ ದಂಪತಿಗಳು ಕಾಣಿಸಿಕೊಂಡಿದ್ದಾರೆ. ಅನಿತಾ ಕುಮಾರಸ್ವಾಮಿ ಮಧುಗಿರಿ ಉಪಚುನಾವಣೆಯಲ್ಲಿ ಗೆದ್ದ ಮೇಲೆ ಮೊನ್ನೆ ನಡೆದ ಬೆಳಗಾವಿ ವಿಶೇಷ ಅಧಿವೇಶನದಲ್ಲೇ ಪ್ರಮಾಣವಚನ ಸ್ವೀಕರಿಸಿ ಸದನದಲ್ಲೇ ಕುಮಾರಸ್ವಾಮಿಗೆ ಶೇಕ್‌ಹ್ಯಾಂಡ್ ನೀಡಿ ಹೋದರು.

ಮಧುಗಿರಿಯಲ್ಲಿ ಅನಿತಾ ಹೇಗೆ ಗೆದ್ದರೆಂಬುದು ನಮಗೆಲ್ಲಾ ಗೊತ್ತು. ಆದರೆ ಅವರು ಎಲೆಕ್ಷನ್‌ಗೆ ಯಾಕೆ ನಿಂತರೆಂಬುದೇ ಒಂದು ಸ್ವಾರಸ್ಯಕರ ವಿಚಾರ.

ಚಲ್ಲರೆ ಚೆನ್ನಿಗಪ್ಪ ಬಿಜೆಪಿಗೆ ಹಾರಿಹೋದ ಮೇಲೆ. ಜೆಡಿಎಸ್ ಒಬ್ಬ ಸಮರ್ಥ ಕ್ಯಾಂಡಿಡೇಟ್‌ಗಾಗಿ ಹುಡುಕಿತಲ್ಲವೆ. ಆಗ ಸರ್ಕಾರಿ ಅಧಿಕಾರಿ ವೀರಭದ್ರಯ್ಯನವರನ್ನು ನಿಲ್ಲಿಸುವ ಯತ್ನ ನಡೆಯಿತು. ಅದಕ್ಕೊಂದು ಪ್ರತಿತಂತ್ರ ಮಾಡಿದ ಚೆನ್ನಿಗಪ್ಪ ಯಡ್ಡಿಗೆ ಚಾಡಿ ಹೇಳಿ ವೀರಭದ್ರಯ್ಯನವರ ಸ್ವಯಂ ನಿವೃತ್ತಿ ಅರ್ಜಿಯನ್ನು ಪೆಂಡಿಂಗ್ ಇಡಿಸಿಬಿಟ್ಟ.

ದೇವೇಗೌಡರಿಗೆ ಸಿಟ್ಟು ಬಂದಿದ್ದೇ ಆವಾಗ.

ಇದ್ದವನೊಬ್ಬ ಚೆನ್ನಿಗಪ್ಪ ಬಿಜೆಪಿಗೆ ಹೋಗಿದ್ದಾನೆ. ಬರಲು ರೆಡಿಯಾಗಿದ್ದ ವೀರಭದ್ರಯ್ಯನಿಗೆ



ಯಡ್ಡಿ ಅಡ್ಡಗಾಲಾಗಿ ದ್ದಾರೆ.... ಈಗೇನು ಮಾಡುವುದು ಎಂದು ಚಡಪಡಿಸುತ್ತಿದ್ದ ಗೌಡರಿಗೆ ಅದೇಕೊ ಏನೋ ಕುಮಾರಸ್ವಾಮಿ ಮೇಲೇ ಕೋಪ ಬಂದಿದೆ. ಚಲುವರಾಯಸ್ವಾಮಿಯನ್ನು ಕರೆದು "ಏನಪ್ಪ, ನಿಮ್ಮಣ್ಣ ಏನ್ ಮಾಡಿದ ನೋಡು. ಮಧುಗಿರಿಲಿ ನಮಗೆ ಈಗ ಕ್ಯಾಂಡಿಡೇಟೇ ಇಲ್ಲ. ಆ ಚೆನ್ನಿಗಪ್ಪನ್ನ ಬೆಳೆಸಿದೋನೇ ಇವನು. ಈಗೇನ್ ಮಾಡ್ತಾನಂತೆ. ಅವನ ಹೆಂಡತೀನಾ ಎಲೆಕ್ಷನ್ ನಿಲ್ಲಿಸ್ತಾನಂತಾ" ಅಂತ ರೇಗಿಬಿದ್ದರಂತೆ.

ಈ ಚೆಲುವರಾಯಸ್ವಾಮಿ ಸೀದಾ ಹೋದವರೆ ತನ್ನ ನಾಯಕ ಕುಮಾರಸ್ವಾಮಿಗೆ 'ದೊಡ್ಡವರು ಹಿಂಗಿಂಗೆ ಅಂದರು' ಅಂತ ಯಥಾ ವತ್ತು ವಿವರಗಳನ್ನು ಕಿವಿಗೆ ಹಾಕಿದ್ದಾನೆ.

ಬಹುಶಃ ಕುಮಾರಸ್ವಾಮಿ ಕೆರಳಿ ನಿಂತಿದ್ದೇ ಆಗ. ಎಲ್ಲಾರು ನನ್ನೇ ಆಡಿಕೊಳ್ಳೀರಾ. ಹಾಗಾದ್ರೆ ಒಂದು ಕೈ ನೋಡೇ ಬಿಡ್ತೀನಂತ ಕೂಡಲೇ ಅನಿತಾಗೆ ಎಲೆಕ್ಷನ್ ಸೂಚನೆ ಕೊಟ್ಟು, ಮಧುಗಿರಿ ಜೆಡಿಎಸ್ ನಾಯಕರಿಂದ ಅನಿತಕ್ಕನೇ ಅಭ್ಯರ್ಥಿಯಾಗಬೇಕೆಂಬ ಮನವಿ ಪತ್ರ ತರಿಸಿ ತಾನೇ ಅಖಾಡಕ್ಕಿಳಿದೇಬಿಟ್ಟರು. ಆಮೇಲೇ ನಾಯಿತೆಂಬುದು ನಿಮಗೂ ಗೊತ್ತು. ಅನಿತಾ ಕುಮಾರಸ್ವಾಮಿ ಈಗ ಶಾಸಕಿ. ಮಧುಗಿರಿ ನಂದೇ ಅಂತಿದ್ದ ಚೆನ್ನಿಗಪ್ಪ ಈಗ ಚರಂಡೀ ಪಾಲು.

ತನ್ನ ಪಾಡಿಗೆ ತಾನು ಸಂಸಾರ ನೋಡಿಕೊಂಡು ಕಸ್ತೂರಿ ಚಾನಲ್ ನಡೆಸಿಕೊಂಡಿದ್ದ ಅನಿತಾ, ದೇವೇಗೌಡರು ಒಂದು ಸಿಟ್ಟಿನ ಮೂಡ್‌ನಲ್ಲಿ ಆಡಿದ ಮಾತಿನಿಂದ ಈಗ ಶಾಸಕಿಯಾಗಿದ್ದಾರೆ. ಚಾಲೆಂಜ್ ಅಂದರೆ ಇದಪ. ■

ಅಪ್ಪನನ್ನು ಜೈಲಿಗೆ ದೂಡಿದ 11 ತಿಂಗಳ ಕೂಸು!

ಅಮ್ಮ ಮನೆಯಿಂದ ಹೊರಗೆ ಹೋಗಿದ್ದಳು. ಅಪ್ಪ ಕೆಲಸದಲ್ಲಿ ಮಗ್ನನಾಗಿದ್ದ. ಆದರೆ 11 ತಿಂಗಳ ಪುಟ್ಟ ಕೂಸಿಗೆ ಬೋರ್ ಹೊಡೆದಿತ್ತು. ಆ ಎಳೆ ಬಾಲಕ ಅಳಲಾರಂಭಿಸಿದಾಗ ಆತನನ್ನು ಸುಮ್ಮನಿರಿಸಲು ಆತನ ಕೈಗೆ ಅಪ್ಪ ಫೋನ್ ಅನ್ನು ಇಟ್ಟ.

ಮಗು ಫೋನ್‌ನಲ್ಲಿದ್ದ ಬಟನ್‌ಗಳನ್ನು ಒತ್ತುತ್ತಾ ಅದು ಮಾಡುತ್ತಿದ್ದ ಸದ್ದನ್ನು ಕೇಳುತ್ತಾ ಆಟವಾಡುತ್ತಿದ್ದ. ಆದರೆ ಹಲವು ನಿಮಿಷಗಳ ನಂತರ ಆ ಮನೆಯ ಬಾಗಿಲ ಮುಂದೆ ಪೊಲೀಸರು ಹಾಜರಾದರು. ಅವರನ್ನು ನೋಡಿ ತಂದೆಗೆ ಶಾಕ್.

"ನಮ್ಮ ಮನೆಯಿಂದ ಯಾರೂ ಪೊಲೀಸರಿಗೆ ಫೋನ್ ಮಾಡಿಲ್ಲವಲ್ಲ?" ಎಂದ. ಆದರೆ ಮಗುವಿನ ಕೈಯಲ್ಲಿ ಫೋನ್ ಇರುವುದನ್ನು ಗಮನಿಸಿದ ಪೊಲೀಸರಿಗೆ ಗೊತ್ತಾಯಿತು. ಆಟವಾಡುತ್ತಿದ್ದ ಆ ಮಗು ಪೊಲೀಸರನ್ನು ಕರೆಯುವ 911 ಸಂಖ್ಯೆಯನ್ನು ಒತ್ತಿತ್ತು, ಇದು ಅಮೆರಿಕಾದಲ್ಲಿ ನಡೆದಿದ್ದರಿಂದ ಪೊಲೀಸರು ಯಾವ ಫೋನ್‌ನಿಂದ ಕರೆ ಬಂದಿತ್ತು ಎಂದು ಕೂಡಲೆ ಪತ್ತೆಹಚ್ಚಿ ಆ ಮನೆಯ ಮುಂದೆ ಹಾಜರಾಗಿದ್ದರು.

ಇದು ಪುಟ್ಟ ಮಗುವಿನಿಂದಾದ ಅಚಾತುರ್ಯ ಎಂದು ಗೊತ್ತಾದ ನಂತರ ಪೊಲೀಸರು ಹೊರಡಲು ಸಿದ್ಧರಾದರು. ಆಗ ಅವರ ಕಣ್ಣಿಗೆ ಬಿದ್ದದ್ದು ಮನೆಯ ಹಿತ್ತಲಿನಲ್ಲಿ ತಂದೆ ಸಮೃದ್ಧವಾಗಿ ಬೆಳೆದಿದ್ದ ಗಿಡಗಳು. ಅವು ಗಾಂಜಾ ಗಿಡಗಳಾಗಿದ್ದವು. ನಿರುದ್ಯೋಗಿಯಾಗಿದ್ದ ಆ ಮಗುವಿನ ತಂದೆ ಆದಾಯಕ್ಕಾಗಿ 500ಕ್ಕೂ ಹೆಚ್ಚು ಗಾಂಜಾ ಗಿಡಗಳನ್ನು ಹಿತ್ತಲಿನಲ್ಲಿ ಬೆಳೆದಿದ್ದ. ಪೊಲೀಸರು ಕೂಡಲೆ ಆತನನ್ನು ಬಂಧಿಸಿದರು. "ಪುಟ್ಟ ಕೂಸನ್ನು ರಂಜಿಸಲು ಫೋನ್ ಬದಲಾಗಿ ಯಾವುದಾದರೂ ಆಟಿಕೆ ನೀಡಿದ್ದರೆ ಹೀಗಾಗುತ್ತಿರಲಿಲ್ಲ" ಎಂದು ಈಗ ಆ ತಂದೆ ಪರಿತಪಿಸುತ್ತಾ ಜೈಲಿನ ಕಂಬಿಗಳನ್ನು ಎಣಿಸುತ್ತಿದ್ದಾನಂತೆ.



■

ವಿಚಿತ್ರ ಜಗತ್ತು


ಒಬಾಮಾ ಪ್ರಮಾಣವಚನಕ್ಕೆ ಬಂದ ಎಲಿಯನ್‌ಗಳು!

ಮೊನ್ನೆ ಜನವರಿ 20 ರಂದು ಅಮೆರಿಕದ ನೂತನ ಮತ್ತು ಪ್ರಪ್ರಥಮ ಕರಿಯ ಅಧ್ಯಕ್ಷರಾಗಿ ಬರಾಕ್ ಒಬಾಮಾ ಪ್ರಮಾಣವಚನ ಸ್ವೀಕರಿಸುವ ಸಮಾರಂಭವನ್ನು ನೋಡಲು ಅಮೆರಿಕದ ರಾಜಧಾನಿ ವಾಷಿಂಗ್ಟನ್‌ನಲ್ಲಿ ಲಕ್ಷಾಂತರ ಜನ ಸೇರಿದ್ದರಲ್ಲವೆ. ಕೊರೆಯುತ್ತಿದ್ದ ತಂಡಿಯಲ್ಲಿ ಅವರೆಲ್ಲ ಗಂಟೆಗಟ್ಟಲೆ ಕಾದು ನಿಂತಿದ್ದರು ಈ ಐತಿಹಾಸಿಕ ಘಟನೆಯಲ್ಲಿ ಭಾಗವಹಿಸಲು. ಹಾಗೆಯೇ ಜಗತ್ತಿನಾದ್ಯಂತ ಮಿಲಿಯನ್‌ಗಟ್ಟಲೆ ಜನಗಳು ಹಗಲು ರಾತ್ರಿಯೆನ್ನದೆ ಈ ಸಮಾರಂಭದ ಲೈವ್ ಪ್ರಸಾರವನ್ನು ತಮ್ಮ ಮನೆಯ ಟಿವಿ ಪರದೆ ಮೇಲೆ ನೋಡಿದರು. ಒಂದು ಸಮೀಕ್ಷೆಯ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ಅತಿಹೆಚ್ಚು ಜನ ಇದನ್ನು ವೀಕ್ಷಿಸಿದರು.

ಭೂಮಂಡಲದ ಮೇಲೆ ಈ ಸಮಾರಂಭ ಇಷ್ಟೊಂದು ಕುತೂಹಲ ಮತ್ತು ಕಾತುರವನ್ನು ಸೃಷ್ಟಿಸಿದಾಗ ಎಲಿಯನ್‌ಗಳನ್ನು ತಾಕದೆ ಇರುತ್ತದೆಯೇ? ಹಲವರ ಪ್ರಕಾರ ಈ ಐತಿಹಾಸಿಕ ಘಟನೆಯನ್ನು ನೋಡಲು ಹಾರುವ ತಟ್ಟೆಯೊಂದರಲ್ಲಿ ಎಲಿಯನ್‌ಗಳು ಆಗಮಿಸಿ ವಾಷಿಂಗ್ಟನ್ ಮೇಲೆ ಹಾರಿಹೋದರು!

ಅಂದು ಪ್ರಮಾಣವಚನ ಸಮಾರಂಭ ಮುಗಿದ ಕೂಡಲೇ CNN ಚಾನೆಲ್‌ನ ಹಿರಿಯ ವಿಶ್ಲೇಷಕರಿಬ್ಬರು ಒಬಾಮಾರ ಭಾಷಣವನ್ನು ಚರ್ಚಿಸುತ್ತಿದ್ದಾಗ CNN ಕ್ಯಾಮೆರಾ ಚಲಿಸಿತು. ಆಗ ವಾಷಿಂಗ್ಟನ್‌ನಲ್ಲಿರುವ 555 ಅಡಿ ಎತ್ತರದ ಸೂಜಿ ಆಕಾರದ ಕಂಬದ ಹತ್ತಿರವೇ ಕಪ್ಪನೆ ಆಕಾರವೊಂದು ಹಾರಿ ಹೋಗುತ್ತಿರುವುದು ಕ್ಯಾಮೆರಾ ಕಣ್ಣಿಗೆ ಕಾಣಿಸಿದೆ.

ಆ ದೃಶ್ಯ ಈಗ ಅಂತರಜಾಲದಲ್ಲಿ ಲಭ್ಯವಿದ್ದು, ಬಹಳಷ್ಟು ಜನ ಅದನ್ನು ಹಾರುವ ತಟ್ಟೆ ಎಂದೂ, ಅದರಲ್ಲಿ ಎಲಿಯನ್ ಬಂದಿದ್ದರೆಂದೂ ತರ್ಕಿಸುತ್ತಿದ್ದಾರೆ!



ಅದು ಹಾರುವ ತಟ್ಟೆ ಅಲ್ಲ, ಹಾರುವ ಹಕ್ಕಿ ಎಂದು ಯಾರೋ ಹೇಳಿದ್ದಕ್ಕೆ ಒಬ್ಬ "ಅದು ಚಪ್ಪಟೆ ಆಕಾರದಲ್ಲಿದ್ದು ರೆಕ್ಕೆಗಳಿಲ್ಲ. ಆದ್ದರಿಂದ ಅದು ಹಾರುವ ತಟ್ಟೆ. ಒಬಾಮಾರಿಗೆ ಹಾರೈಸಲು ಎಲಿಯನ್‌ಗಳು ಬಂದಿದ್ದರೂ ಅಚ್ಚರಿ ಇಲ್ಲ" ಎಂದಿದ್ದಾನೆ.

ಒಬಾಮಾರ ಪ್ರಮಾಣವಚನ ಸ್ವೀಕರಿಸಿದ ಸಮಾರಂಭದ ನಂತರ ಅಂತರಜಾಲದಲ್ಲಿ ಅತಿ ಹೆಚ್ಚು ಜನ ನೋಡಿರುವ ಕ್ಲಿಪ್ಪಿಂಗ್ ಇದಾಗಿದೆ ಎಂದು ಎಲಿಯನ್‌ಗಳಿಗೆ ಗೊತ್ತಾದರೆ ಅವರಿಗೆ ಎನನ್ನಿಸುತ್ತದೋ ಗೊತ್ತಿಲ್ಲ. ■

ಟಾಯ್ಲೆಟ್ ಟ್ರಬಲ್

ಭಾರತೀಯರಲ್ಲದೆ ಏಷ್ಯಾದ ಬಹಳಷ್ಟು ಜನ ತಮ್ಮ ಬೆಳಗ್ಗಿನ ನಿತ್ಯ ಕಾಯಕವನ್ನು ಮುಗಿಸಿದನಂತರ ಸ್ವಚ್ಛಗೊಳ್ಳಲು ನೀರನ್ನು ಉಪಯೋಗಿಸುತ್ತಾರೆ. ಆದರೆ ಆಸ್ಟ್ರೇಲಿಯಾದಲ್ಲಿ ಹೀಗೆ ಮಾಡುವ ಹಾಗಿಲ್ಲ. ಹಾಗೆ ಮಾಡಿದ್ದಕ್ಕೆ ಫಿಲಿಫೀನ್ ಮೂಲದ ಮೆಕಾನಿಕ್ ಒಬ್ಬನನ್ನು ಕೆಲಸದಿಂದಲೇ ಓಡಿಸಲಾಗಿದೆ.


ಮೊನ್ನೆ ಏನಾಯಿತೆಂದರೆ ಬಾರ್ನಬೆ ಎಂಬಾತ ಟಾಯ್ಲೆಟ್‌ಗೆ ಹೋಗುವಾಗ ತನ್ನೊಂದಿಗೆ ಒಂದು ಬಾಟ್ಲ ನೀರನ್ನು ತೆಗೆದುಕೊಂಡು ಹೋದನಂತೆ. ಇದನ್ನು ನೋಡಿದ ಸೂಪರ್‌ವೈಸರ್ "ನೀರ್‍ಯಾಕೆ? ಪೇಪರ್ ಉಪಯೋಗಿಸು" ಅಂದನಂತೆ.

"ಅದೆಲ್ಲ ಆಗಲ್ಲ. ನನಗೆ ನೀರು ಉಪಯೋಗಿಸಿಯೇ ರೂಢಿ. ಟಾಯ್ಲೆಟ್‌ನಲ್ಲಿ ನೀರು ಉಪಯೋಗಿಸಬಾರದೆಂದು ಕಾನೂನಿದೆಯೇ?" ಎಂದನಂತೆ.

ಹಾಗೆಂದು ಕಾನೂನಿಲ್ಲ ನಿಜ. ಆದರೆ ಆಸ್ಟ್ರೇಲಿಯಾದ ಪದ್ಧತಿ ಪೇಪರ್ ಉಪಯೋಗಿಸುವುದು. ಆದ್ದರಿಂದ ನೀನೂ ಹಾಗೆ ಮಾಡಬೇಕೆಂದು ಬಾರ್ನಬೆ ಕೆಲಸ ಮಾಡುತ್ತಿದ್ದ ಕಂಪನಿಯ ಅಧಿಕಾರಿಗಳೂ ಹೇಳಿದರಂತೆ.

ಅವರ ಮಾತನ್ನು ಕೇಳದಿದ್ದಕ್ಕೆ, ಬಾರ್ನಬೆಯನ್ನು ಕೆಲಸದಿಂದಲೇ ಒದ್ದೋಡಿಸಲಾಗಿದೆ.

ಬಹಿರ್ದೆಸೆಯಿಂದಾಗಿ ಎಂತೆಂಥ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ ನೋಡಿ!



ಶಿವರಾಮೇಗೌಡರ ಜ್ಞಾನೋದಯ

ನಾಗಮಂಗಲದ ಮಾಜಿ ಶಾಸಕ ಶಿವರಾಮೇಗೌಡರು ಹೊಸ ವರ್ಷ ಮತ್ತು ಸಂಕ್ರಾಂತಿಯ ಶುಭಾಶಯಗಳ ಜೊತೆಗೆ ಭಗವದ್ಗೀತೆಯ ಪ್ರಖ್ಯಾತ ಶ್ಲೋಕವೊಂದನ್ನು ಮುದ್ರಿಸಿ ಹಂಚಿದ್ದಾರೆ. ಈ ಶ್ಲೋಕವನ್ನು ತುಂಬ ವಿಶ್ಲೇಷಣೆಗೆ ಒಳಪಡಿಸಿರುವ ನಾಗಮಂಗಲದ ಜನ ಟಿ.ಬಿ. ಸರ್ಕಲ್‌ನಲ್ಲಿ ನಿಂತು ಮಾತನಾಡಿಕೊಳ್ಳುವುದು ತುಂಬ ಸ್ವಾರಸ್ಯಕರವಾಗಿದೆ.

ಶ್ಲೋಕ ಇಂತಿದೆ:

ಆದದ್ದೆಲ್ಲಾ ಒಳ್ಳೆಯದಕ್ಕೇ ಆಗಿದೆ.

ಆಗುವುದೆಲ್ಲಾ ಒಳ್ಳೆಯದೇ ಆಗುತ್ತದೆ.

ಆಗಲಿರುವುದು ಅದೂ ಒಳ್ಳೆಯದೇ ಆಗಲಿದೆ.

ರೋದಿಸಲು ನೀನೇನು ಕಳೆದುಕೊಂಡಿರುವೆ.

ಕಳೆದುಕೊಳ್ಳಲು ನೀನು ತಂದಿರುವುದಾದರೂ ಏನು.

ನಾಶವಾಗಲು ನೀನು ಮಾಡಿರುವುದಾದರೂ ಏನು.


ನೀನೇನು ಪಡೆದರೂ ಅದನ್ನು ಇಲ್ಲಿಂದಲೇ ಪಡೆದಿರುವೆ.

ಏನನ್ನ ನೀಡಿದರೂ ಅದನ್ನು ಇಲ್ಲಿಂದಲೇ ನೀಡಿರುವೆ.

ನಿನ್ನೆ ಬೇರಾರದ್ದೊ ಆಗಿದ್ದು ಇಂದು ನಿನ್ನದಾಗಿದೆ.

ಮತ್ತು ನಾಳೆ ಇನ್ಯಾರದ್ದೊ ಆಗಲಿದೆ.


ಪರಿವರ್ತನೆ ಜಗದ ನಿಯಮ.



ಇಂತಹ ಅದ್ಭುತ ಶ್ಲೋಕವನ್ನು ಮುದ್ರಿಸಿ ಹಂಚಿರುವ ಶಿವರಾಮೇಗೌಡರ ಮನಃಪರಿವರ್ತನೆ ಬಗ್ಗೆ ನಾಗಮಂಗಲದ ಹೈದರು ಆಡಿಕೊಳ್ಳುವುದೇನೆಂದರೆ:

"ಶಿವರಾಮೇಗೌಡರು ಶಾಸಕರಾಗಿ ಗಂಗಾಧರಮೂರ್ತಿ ಕೊಲೆ ಕೇಸಿನಲ್ಲಿ ಸಿಕ್ಕಿಕೊಂಡರು. ಆಮೇಲೆ ಸೋತು ಹೋದರು. ಗೌಡರಿಂದ ತೊಂದರೆಗೊಳಗಾದವರೆಲ್ಲಾ ಸೇರಿ, ಕಂಟ್ರಾಕ್ಟ್ ಮಾಡಿಸಿಕೊಂಡು ಮೈಸೂರಿನಲ್ಲಿ ಹಾಯಾಗಿದ್ದ ಚಲುವರಾಯಸ್ವಾಮಿಯನ್ನು ತಂದು ನಾಟಿ ಹಾಕಿ ಬೆಳೆಸಿದರು. ಇದರ ಫಲವಾಗಿ ಚಲುವರಾಯಸ್ವಾಮಿ ಗೆದ್ದು ಮಂತ್ರಿಯಾದರು. ಇವರನ್ನು ತಂದು ನಾಟಿಹಾಕಿದವರ ಪೈಕಿ ಜವರೇಗೌಡರು ಮನ್‌ಮುಲ್ ಅಧ್ಯಕ್ಷರಾದರು. ಪಂಚಾಯ್ತಿ ಚುನಾವಣೆಯಲ್ಲೂ ಗೆಲ್ಲಲಾರದ ಬಿ. ರಾಜೇಗೌಡ, ಡಿಸಿಸಿ ಬ್ಯಾಂಕ್ ಅಧ್ಯಕ್ಷನಾದ. ಗಂಗಾಧರಮೂರ್ತಿ ಕೊಲೆ ಖಂಡಿಸಿ ಕಂಚನಹಳ್ಳಿಯಿಂದ ನಾಗಮಂಗಲದವರೆಗೂ ಕಾಲ್ನಡಿಗೆ ಮಾಡಿದ ಬಾಲು ಜಿಲ್ಲಾ ಪಂಚಾಯ್ತಿ ಸದಸ್ಯನಾಗಿ ಬಂಡೆಗಳ ನಡುವೆ ಕ್ರಷರ್ ಹಾಕಿ ಚುಂಚನಗಿರಿ ಬೆಟ್ಟವನ್ನೇ ನಡುಗಿಸಿದ. ಚಲುವರಾಯಸ್ವಾಮಿ ಅಣ್ಣ ಲಕ್ಷ್ಮಿಕಾಂತ್ ಕಂಟ್ರಾಕ್ಟಿನ ಸಿಂಹಪಾಲು ಪಡೆದು ಕೋಟ್ಯಾನುಕೋಟಿ ಸಂಪಾದಿಸಿದ. ಇನ್ನ ಗಂಗಾಧರಮೂರ್ತಿ ಕೊಲೆಯಿಂದ ಆತನ ಕುಟುಂಬಕ್ಕೆ ಲಂಕೇಶ್ ಒಂದೂ ಮುಕ್ಕಾಲು ಲಕ್ಷ ಸಂಗ್ರಹಿಸಿಕೊಡಲಾಗಿ ಅವರೆಲ್ಲಾ ನೆಮ್ಮದಿಯಾಗಿದ್ದಾರಂತೆ. ಹೀಗೆ ಕೊಲೆಯಿಂದ ಒಳ್ಳೆಯದೇ ಆಯಿತು" ಎಂದು ಕೊಂಡಾಡುತ್ತಿರುವ ದಳದ ಲೋಭಗಳಿಗೆ ಏನು ಹೇಳುವುದು?

ಬಹುಶಃ ಅದಕ್ಕೇ ಇರಬೇಕು. ಕೊಲೆ ಮಾಡಿ ಜೈಲಿನಲ್ಲಿರುವ ಹುಡುಗರನ್ನು ಕಂಡರೆ ದಳದ ಲೀಡರುಗಳಿಗೆ ಎಂತದೋ ಕರುಣೆ. ಅಂತೂ ಆದದ್ದೆಲ್ಲಾ ಒಳ್ಳೆಯದಕ್ಕೆ ಆಗಿದೆ, ಯಾರೂ ಮರುಗುವಂತಿಲ್ಲ ಕೊರಗುವಂತಿಲ್ಲ ಎಂದು ಹೇಳುತ್ತ ಹೊರಟಿರುವ ಶಿವರಾಮೇಗೌಡರು ಮುಂಬರುವ ಲೋಕಸಭಾ ಚುನಾವಣೆಗೆ ಹುರಿಯಾಳಂತೆ! ■


ವಿ.ಎಸ್.ಆಚಾರ್ಯ

ಬಿಜೆಪಿ ಶಾಸಕನ ಲ್ಯಾಂಡ್ ರಾಬರಿಯೂ ಅದಕ್ಕೆ ಪೊಲೀಸರ ತಲೆದಂಡವು

ಪೊಲೀಸು ಖಾತೆಯ ಮಂತ್ರಿಯೇ ಕೋರ್ಟ್ ಆದೇಶದ ವಿರುದ್ಧ ವರ್ತಿಸುವಂತೆ ಪೊಲೀಸ್ ಅಧಿಕಾರಿಗಳನ್ನು ಬೆದರಿಸಬಹುದೆ? ಕೋರ್ಟ್ ಆದೇಶವನ್ನು ಪಾಲಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಗೂಂಡಾಗಿರಿಯಲ್ಲವೆ? ಓರ್ವ ಥರ್ಡ್‌ರೇಟ್ ಲ್ಯಾಂಡ್ ಬ್ರೋಕರ್‌ಗಾಗಿ ಪೊಲೀಸ್ ಇಲಾಖೆಯ ಇಬ್ಬರು ಎಸಿಪಿಗಳು ಮತ್ತೊಬ್ಬ ಇನ್ಸ್‌ಪೆಕ್ಟರ್‌ನ ತಲೆದಂಡಕ್ಕೆ ನಿಂತ ಗೃಹ ಸಚಿವ ಆಚಾರ್ಯರಿಗೆ ಯಾವ ಪುರಸ್ಕಾರ ಕೊಡಬೇಕು?

ಓರ್ವ ಥರ್ಡ್‌ರೇಟ್ ಲ್ಯಾಂಡ್ ...ರೋಕರ್‌ಗಾಗಿ ಪೊಲೀಸ್ ಇಲಾಖೆಯ ಇಬ್ಬರು ...ಪಿಗಳು ಮತ್ತೊಬ್ಬ ಇನ್ಸ್‌ಪೆಕ್ಟರ್‌ನ ತಲೆದಂಡಕ್ಕೆ ...ತ ಗೃಹ ಸಚಿವ ಆಚಾರ್ಯರಿಗೆ ಯಾವ ...ರಸ್ಕಾರ ಕೊಡಬೇಕು?

ಕರ್ನಾಟಕ ಎಂಥೆಂಥ ಗೃಹಮಂತ್ರಿಗಳನ್ನು ...ಡಿಲ್ಲ?

ಆದರೆ ಕ್ರಿಮಿನಲ್ ನೆಲಗಳ್ಳನೊಬ್ಬನಿಗಾಗಿ ...ಬ್ಬರು ಎಸಿಪಿ ಮಟ್ಟದ ಪೊಲೀಸ್ ಅಧಿಕಾರಿಗಳು ...ತ್ತೊಬ್ಬ ಇನ್ಸ್‌ಪೆಕ್ಟರ್‌ರನ್ನು ಬಲಿಹಾಕುವ ಮಟ್ಟಕ್ಕೆ ...ಾವ ಮಂತ್ರಿಯೂ ಕುಲಗೆಟ್ಟಿರಲಿಲ್ಲ. ಬಜೆಪಿಯ ...ಮರಾಜ್ಯದ ಸ್ಯಾಂಪಲ್ಲೋ ಎಂಬಂತೆ ಇಲ್ಲಿಗೆ ...ರಡು ವಾರದ ಹಿಂದಷ್ಟೇ ಗೃಹ ಮಂತ್ರಿ ...ಚಾರ್ಯರ ಚೇಂಬರಿನಿಂದ ವಿಚಿತ್ರ ...ದೇಶವೊಂದು ಪೊಲೀಸ್ ಕಮಿಷನರ್ ...ದರಿಯವರಿಗೆ ರವಾನೆಯಾಗುತ್ತದೆ. ಆದರ ಒಕ್ಕಣೆ ...ಗಿದೆ.

ಕೆ.ಜಿ. ಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯ ...ನಂದ್ ಎಂಬುವವರಿಗೆ ರಕ್ಷಣೆ ನೀಡುವಲ್ಲಿ ...ಆರ್. ಪುರಂ ವಲಯದ ಸಹಾಯಕ ಪೊಲೀಸ್ ...ಯುಕ್ತ ಎನ್. ನರಸಿಂಹಯ್ಯ, ಕೆ.ಜಿ. ಹಳ್ಳಿ ...ೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಟಿ. ರಂಗಪ್ಪ ...ತ್ತು ಸಬ್‌ಇನ್ಸ್‌ಪೆಕ್ಟರ್ ರಾಮಕೃಷ್ಣ ರೆಡ್ಡಿ. ಇವರು ...ಾನ್ಯ ಗೃಹ ಸಚಿವರು ನೀಡಿದ ಮೌಖಿಕ ...ದೇಶವನ್ನು ಪಾಲಿಸದೇ ಕರ್ತವ್ಯಲೋಪ ...ಸಗಿರುವುದರಿಂದ ಈ ಮೂವರು ಅಧಿಕಾರಿಗಳ ...ರುದ್ಧ ತತಕ್ಷಣಕ್ಕೆ ಜಾರಿಗೆ ಬರುವಂತೆ ಶಿಸ್ತುಕ್ರಮ ...ರುಗಿಸುವುದು....!

ಪೊಲೀಸ್ ಕಮೀಷನರ್ ಶಂಕರ್ ...ದರಿಯವರಾದರೂ ಏನು ಮಾಡಲು ಸಾಧ್ಯ? ...ಃ ಗೃಹ ಮಂತ್ರಿ ಆಚಾರ್ಯರ ಮುಖಕ್ಕೆ ...ಾಡೆದಂತೆ ಕಮಿಷನರ್ ಬಿದರಿ ಮೇಲ್ಕಂಡ ...ೂರೂ ಅಧಿಕಾರಿಗಳ ವಿರುದ್ಧ ಮಂತ್ರಿ ...ಚಾರ್ಯರು ಕೊಟ್ಟ ಆದೇಶವನ್ನು ...ದಬುಟ್ಟಿಗೆಸೆದು ಕೂತಿದ್ದಾರೆ.

ಅಷ್ಟಕ್ಕೂ ಈ ಮೂವರು ಪೊಲೀಸ್ ...ಧಿಕಾರಿಗಳು ಮಾಡಿದ ತಪ್ಪೆಂದರೆ ಕೋರ್ಟ್ ...ದೇಶವನ್ನು ಎತ್ತಿ ಹಿಡಿದದ್ದು, ನೆಲಗಳ್ಳ ಆನಂದನ ...ಂಡಾಗಿರಿಗೆ ಕುಮ್ಮಕ್ಕು ಕೊಡದೇ ನ್ಯಾಯ ...ಲಿಸಿದ್ದು ಮತ್ತು ಕಾನೂನುಬದ್ಧವಾಗಿ ...ಮೀನೊಂದರ ಹಕ್ಕುದಾರರಾಗಿರುವವರಿಗೆ ರಕ್ಷಣೆ ...ಟ್ಟಿದ್ದು!

ಹೇಗೆ ಲ್ಯಾಂಡ್ ಮಾಫಿಯಾ ...ಗೊಂಬೆಯಾಗಿ ...ಹಮಂತ್ರಿಯೊಬ್ಬ ಪಾಪಕ್ಕೆ ...ಲುದಾರನಾಗುತ್ತಾನೆ ...ಬುದಕ್ಕೆ ಇದಕ್ಕಿಂತ ಉತ್ತಮ ...ದಾಹರಣೆಯೇ ಬೇಕಿಲ್ಲ.

ಈ ಪ್ರಕರಣದ ...ತ್ರಧಾರನೇ ಕುಂದಾಪುರದ ...ಲಿ ಬಜೆಪಿ ಶಾಸಕ ಹಾಲಾಡಿ ...ನಿವಾಸ ಶೆಟ್ಟಿ. ತೀರ ಅಗದೀ ...ಕ್ಕೆ ಯಾರದೋ ಜಮೀನು ...ೋಚಲು ನಿಂತ ಎಮ್ಮೆಲ್ಲೇ ...ಲಾಡಿ ಶ್ರೀನಿವಾಸ ಶೆಟ್ಟಿಯ ...ನ್ನಿಗಿರುವವನು ಬೆಂಗಳೂರಿನ ...ಕೋರಿಯಸ್ ಭೂಕಂಟಕ


ಶಂಕರ್ ಬಿದರಿ

ಮತ್ತು ದೇವೇಗೌಡರ ಮಾಜಿ ಬಂಟ ರವಿಶಂಕರ್ ಶೆಟ್ಟಿ. ಈತನಿಗೆ ಇಡೀ ದೀಲನ್ನು ತಗಲು ಹಾಕಿದ್ದು ನಾಗವಾರದ ನೆಲ ಪಾತಕಿ ಆನಂದ.

ಅದು ಕಮ್ಮಿಯೆಂದರೂ ಎಂಟು ಕೋಟಿ ಬೆಲೆಬಾಳುವ ಎರಡೆಕರೆ ಮೂವತ್ತೈದು ಕೋಟಿಯ ಭಾರೀ ಸೈಟು. ನಾಗವಾರದ ರಿಂಗ್ ರಸ್ತೆಯಲ್ಲಿದ್ದ ವೀರಯ್ಯನ ಪಾಳ್ಯಕ್ಕೆ ಹೋಗುವಲ್ಲಿ ಬಲಕ್ಕಿರುವ ಈ ಸೈಟಿಗೂ ಲ್ಯಾಂಡ್ ರೌಡಿ ಆನಂದನಿಗೂ ಸದ್ಯ ಕಾಂಗ್ರೆಸ್ಸಿನಲ್ಲಿರುವ ದೇವೇಗೌಡರ ಹಳೇ ಶಿಷ್ಯ ರವಿಶಂಕರ್ ಶೆಟ್ಟಿಗೂ ಮತ್ತು ಕುಂದಾಪುರದ ಬಜೆಪಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಗೂ ಏನೇನೂ ಸಂಬಂಧವಿಲ್ಲ.

ವೀರಯ್ಯನ ಪಾಳ್ಯದ ಸ.ನಂ. 35/13 ರ ಒಟ್ಟು ಇಪ್ಪತ್ತೆಕರೆಯ ಪೈಕಿ 2.35 ಎಕರೆಯ ಈ ಜಮೀನು ಸದ್ಯ ಶ್ರೀನಿವಾಸ್ ಭೈರೇಗೌಡ ಮತ್ತು ಗೋವಿಂದರಾಜು ಎಂಬುವವರ ಹೆಸರಲ್ಲಿದೆ. ಅವರ ಹೆಸರಿಗೇ ಖಾತೆಯಾಗಿದೆ ಮತ್ತು ಭೂಪರಿವರ್ತನೆ ಕೂಡ ಅವರ ಹೆಸರಲ್ಲೇ ಆಗಿದೆ. ಹೀಗೆ ಕರಿಬಸಪ್ಪ ಎಂಬ ರೈತನ ಮಗ ಮರಿಸ್ವಾಮಿ ಎಂಬಾತನ ಮೂಲಕ ನೋಂದಾವಣಿಯಾದ ಈ ಜಮೀನಿಗೂ ಕುಂದಾಪುರದ ಬಜೆಪಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಗೂ ಏನೇನೂ ಸಂಬಂಧವಿಲ್ಲ.

ಆದರೆ ನಾಗವಾರದ ಖತರ್‌ನಾಕ್ ನೆಲಗಳ್ಳ ಆನಂದನಿಗೆ ಗಂಡಾಗುಂಡಿ ಮಾಡಿಯಾದರೂ ಇದನ್ನು ಲಪಟಾಯಿಸುವ ದುರಾಶೆ. ತನ್ನ ತಾತ ದೊಡ್ಡಯ್ಯ ಎಂಬಾತ ತನಗೆ ವಿಲ್ ಬರೆದಿಟ್ಟು ಸತ್ತ ನಂತರ ಈ ಭೂಮಿ ತನಗೆ ಬಂತೆಂಬಂತೆ ನಕಲಿ ವಿಲ್ ಒಂದನ್ನು ರಿಜಿಸ್ಟರ್ ಮಾಡಿಸಿದ. ಅದನ್ನೇ ಆಧಾರವಾಗಿಟ್ಟುಕೊಂಡು ಮೂರು ಸುಳ್ಳು ಕೇಸು ಹಾಕಿದ. ಕೋರ್ಟು ಈ ಎಲ್ಲಾ ಕೇಸುಗಳನ್ನೂ ವಜಾ ಮಾಡಿದೆ. ಆನಂದನ ತಾತ ಬರೆದನೆನ್ನಲಾದ ವಿಲ್ಲು ಕೂಡ ಸುಳ್ಳೆಂದು ಸಾಬೀತಾಗಿದೆ. ಸದರಿ ಭೂಮಿಗೂ ಆನಂದನಿಗೂ ಏನೇನೂ ಸಂಬಂಧವಿಲ್ಲವೆಂದು ಕೋರ್ಟೇ ಆದೇಶ ನೀಡಿದೆ.


ಭೂಕಳ್ಳರು ಗಂಟುಬಿದ್ದ ಜಾಗ...

ಹೀಗಿದ್ದೂ ಪದೇಪದೇ ಭೈರೇಗೌಡರ ಜಮೀನಿಗೆ ನುಗ್ಗಿ ಹಾವಳಿಯಿಡುತ್ತಲೇ ಬಂದ ಆನಂದನಿಗೆ ಯಲಹಂಕ ನೆಲಗಳ್ಳ ಶಾಸಕ ವಿಶ್ವನಾಥ್ ರೆಡ್ಡಿಯ ಕುಮ್ಮಕ್ಕು ಬೇರೆ. ಇದಕ್ಕೆ ತಕ್ಕಂತೆ ಆನಂದನ ಜೊತೆಯಾದವನು ಹಾಲಿ ಕಾಂಗ್ರೆಸ್ ಮತ್ತು ದೇವೇಗೌಡರ ಮಾಜಿ ಬಂಟ ರವಿಶಂಕರ್ ಶೆಟ್ಟಿ. ಎಂಟು ಕೋಟಿಯ ಬೋಗಸ್ ದಾಖಲೆಗಳ ಮೇಲೆ ಆನಂದನಿಗೆ 40 ಲಕ್ಷ ಕೊಟ್ಟು ಜಿಪಿಎ ಮಾಡಿಸಿಕೊಂಡ ರವಿಶಂಕರ್ ಶೆಟ್ಟಿ ಅದನ್ನು ತಗುಲಿ ಹಾಕಿದ್ದು ಕುಂದಾಪುರದ ಹಾಲಿ ಬಜೆಪಿ ಎಮ್ಮೆಲ್ಲೇ ಹಾಲಾಡಿ ಶ್ರೀನಿವಾಸ ಶೆಟ್ಟಿಗೆ.

ಆಗ ಕೆ.ಆರ್. ಪುರಂ ರೇಂಜಿಗೆ ಎಸಿಪಿಯಾಗಿದ್ದ ನಿಷ್ಠುರಿ ಪೊಲೀಸ್ ಅಧಿಕಾರಿ ಅಜ್ಜಣ್ಣ, ಪದೇಪದೇ ಕಂಡೋರ ಜಮೀನಿಗೆ ಹಾವಳಿಯಿಡುತ್ತಿದ್ದ ಆನಂದನ ಗೂಂಡಾಗಿರಿಗೆ ಅಜ್ಜಣ್ಣ ಸೊಪ್ಪು ಹಾಕಲಿಲ್ಲ. ಮೂಲ ದಾಖಲೆಗಳನ್ನು ಪರಿಶೀಲಿಸಿಯೇ ನ್ಯಾಯವಾದ ಹಕ್ಕುದಾರರ ನೆರವಿಗೆ ನಿಂತಿದ್ದಾರೆ. ಅದೂ ಕೋರ್ಟ್ ಆದೇಶವಿತ್ತಾದ್ದರಿಂದ ಎಸಿಪಿ ಅಜ್ಜಣ್ಣ ತಾನೇ ಏನು ಮಾಡಲು ಸಾಧ್ಯ?

ಹಾಗಂಥ ಬಜೆಪಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಬಿಡಬೇಕಲ್ಲ? ಹೋಗಿದ್ದೇ ಆಚಾರ್ಯರ ತಲೆ ತಿಕ್ಕಿ ಎಸಿಪಿ ಅಜಣ್ಣನರನ್ನು ಎತ್ತಂಗಡಿ ಮಾಡಿಸಿಬಿಟ್ಟ. ಆ ಜಾಗಕ್ಕೆ ಬಂದದ್ದು ಎನ್. ನರಸಿಂಹಯ್ಯ. ಅಜ್ಜಣ್ಣ ಎತ್ತಂಗಡಿಯಾಗುತ್ತಿದ್ದಂತೆ ಮತ್ತೆ ಒಂದಷ್ಟು ಮಂದಿ ರೌಡಿಗಳನ್ನು ಜಮಾಯಿಸಿ ಜಮೀನಿಗೆ ನುಗ್ಗಿದ ಆನಂದನನ್ನು ಈ ಬಾರಿ ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ರಂಗಪ್ಪನವರೇ ನಿಂತು ಖಾಲಿ ಮಾಡಿಸಿದ್ದಾರೆ. ಅದಾಗ್ಯೂ ತನ್ನ ಮೇಲೆ ರೌಡಿಗಳನ್ನು ಬಿಟ್ಟು ಹಲ್ಲೆ ಮಾಡಿಸಿದ ಶ್ರೀನಿವಾಸ್ ಮತ್ತು ಭೈರೇಗೌಡರು ತನ್ನ ವಾಚು, ಚಿನ್ನದ ಚೈನು ಕಿತ್ತುಕೊಂಡಿದ್ದಾರೆಂದು ಖೊಟ್ಟಿ ದೂರು ದಾಖಲಿಸಿದ್ದಾನೆ ಆನಂದ.


ಪೊಲೀಸರೇ ಎದುರಿಗಿದ್ದ ಮೇಲೆ ಎಲ್ಲಿಯ ಗೂಂಡಾಗಿರಿ? ಯಾವ ಚೈನ್ ರಾಬರಿ?

ಆನಂದನ ಸುಳ್ಳು ದೂರಿಗೆ ಎಸ್.ಐ. ರಾಮಕೃಷ್ಣ ರೆಡ್ಡಿಯಾಗಲಿ, ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ರಂಗಪ್ಪನವರಾಗಲಿ, ಸ್ವತಃ ಎಸಿಪಿ ಎನ್. ನರಸಿಂಹಯ್ಯ ಕೂಡ ನಯಾಪೈಸೆಯ ಕಿಮ್ಮತ್ತು ಕೊಡಲಿಲ್ಲ.

ಆದರೆ ಯಲಹಂಕದ ನೆಲಕಂಟಕ ಶಾಸಕ ವಿಶ್ವನಾಥ್ ಶೆಟ್ಟಿ ಮತ್ತು ಕುಂದಾಪುರದ ಬಜೆಪಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯ ಕುಮ್ಮಕ್ಕು ಆನಂದನಿಗಿತ್ತಲ್ಲ? ರವಿಶಂಕರ್ ಶೆಟ್ಟಿಯೇ ನಿಂತು ಎಮ್ಮೆಲ್ಲೇ ಶ್ರೀನಿವಾಸ ಶೆಟ್ಟಿಯ ಮೂಲಕ ವಿ.ಎಸ್. ಆಚಾರ್ಯರ ತಲೆ ತಿಕ್ಕಿದ್ದಾನೆ. ಮೊದಲೇ ಅಯೋಗ್ಯ ಗೃಹ ಮಂತ್ರಿ, ಬಜೆಪಿ ಸರ್ಕಾರವಿದ್ದೂ ತನ್ನ ಪಕ್ಷದ ಶಾಸಕನೊಬ್ಬನ ಭೂದರೋಡೆಗೆ ನೆರವಾಗದಿದ್ದರೆ ಹೇಗೆ?

ಸಣ್ಣದೊಂದು ವಿವೇಚನೆ ಕೂಡ ಮಾಡದೇ ಕೆ.ಆರ್. ಪುರಂ ಎಸಿಪಿ ನರಸಿಂಹಯ್ಯ, ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ರಂಗಪ್ಪ ಮತ್ತು ಎಸ್.ಐ. ರಾಮಕೃಷ್ಣ ರೆಡ್ಡಿಯ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಪೊಲೀಸ್ ಕಮೀಷನರ್ ಬಿದರಿಗೆ ಆದೇಶ ಕೊಟ್ಟಿದ್ದಾರೆ ಆಚಾರ್ಯ.

ಅಲ್ಲಿಗೆ ಕ್ರಿಮಿನಲ್ ಆನಂದನ ಪರವಾಗಿ ಗೃಹಮಂತ್ರಿಯೇ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿ ಹೇಳಿದ್ದು ಸತ್ಯ ಎಂದಾಯ್ತು?


ಶ್ರೀನಿವಾಸ್ ಶೆಟ್ಟಿ

ಕೋರ್ಟ್ ಆದೇಶವಿದ್ದಾಗ್ಯೂ ಗೃಹ ಸಚಿವ ಆಚಾರ್ಯರಿಗದು ಲೆಕ್ಕಕ್ಕಿಲ್ಲವೆ? ಪೊಲೀಸು ಖಾತೆಯ ಮಂತ್ರಿಯೇ ಕೋರ್ಟ್ ಆದೇಶದ ವಿರುದ್ಧ ವರ್ತಿಸುವಂತೆ ಪೊಲೀಸ್ ಅಧಿಕಾರಿಗಳನ್ನು ಬೆದರಿಸಬಹುದೆ? ಕೋರ್ಟ್ ಆದೇಶವನ್ನು ಪಾಲಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಗೂಂಡಾಗಿರಿಯಲ್ಲವೆ?

ಬಜೆಪಿಯ ರಾಮರಾಜ್ಯವೆಂದರೆ ಇದೇನಾ?

ಬಜೆಪಿ ಶಾಸಕನೇ ಲ್ಯಾಂಡ್ ರಾಬರಿಗೆ ನಿಂತರೆ ರೌಡಿಗಳು ಮತ್ತು ಕ್ರಿಮಿನಲ್‌ಗಳೆಲ್ಲ ಹೇಗೆ ಪೊಲೀಸ್ ಅಧಿಕಾರಿಗಳನ್ನು ಎತ್ತಂಗಡಿ ಮಾಡಿಸುವ ಮಟ್ಟಕ್ಕೆ ಬೆಳೆಯುತ್ತಾರೆಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ?

ಪೊಲೀಸರಿನ್ನು ಯಾವ ಪುರುಷಾರ್ಥಕ್ಕೆಂದು ಹಂತಕರು, ಪಾತಕಿಗಳನ್ನು ಶಿಕ್ಷಿಸಬೇಕು?

■ ರಾ. ಸೋಮನಾಥ್

ಗೃಹಮಂತ್ರಿಗೇ ಎದಿರೇಟು ಕೊಟ್ಟ ಬಿದರಿ

ಪೊಲೀಸ್ ಕಮೀಷನರ್ ಬಿದರಿಯ ಛಾತಿಗೆ ಎಂಥವರೂ ಮೆಚ್ಚಲೇಬೇಕು.

ಮೂವರು ಪೊಲೀಸ್ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳುವಂತೆ ಆಚಾರ್ಯರು ಕೊಟ್ಟ ಆದೇಶಕ್ಕೆ ...ಮೀಷನರ್ ಬಿದರಿ ನಯಾಪೈಸೆಯ ಕಿಮ್ಮತ್ತು ಕೊಡಲಿಲ್ಲ. ಇಡೀ ಪ್ರಕರಣವೇ ಕೋರ್ಟ್ ಆದೇಶದ ಮೇಲೆ ...ಂತಿದೆಯಾದ್ದರಿಂದ ಕೆ.ಆರ್. ಪುರಂನ ಎಸಿಪಿ ನರಸಿಂಹಯ್ಯನವರಾಗಲಿ, ಕೆ.ಜಿ. ಹಳ್ಳಿಯ ಇನ್ಸ್‌ಪೆಕ್ಟರ್ ರಂಗಪ್ಪ ...ಮತ್ತು ಸಬ್ ಇನ್ಸ್‌ಪೆಕ್ಟರ್ ರಾಮಕೃಷ್ಣ ರೆಡ್ಡಿಯಾಗಲಿ ಕಾನೂನನ್ನೂ ನ್ಯಾಯವನ್ನೂ ಎತ್ತಿ ಹಿಡಿದಿದ್ದಾರೆಯೇ ಹೊರತು ...ಯಾವ ತಪ್ಪನ್ನೂ ಮಾಡಿಲ್ಲವಾದ್ದರಿಂದ ಅವರ ಮೇಲೆ ಶಿಸ್ತುಕ್ರಮ ಜರುಗಿಸುವ ಪ್ರಶ್ನೆಯೇ ಇಲ್ಲ ಎಂಬುದು ...ಗೃಹಮಂತ್ರಿಗೆ ಬಿದರಿ ಕೊಟ್ಟ ಪ್ರತ್ಯುತ್ತರ.

ಹಾಗೆಯೇ ಗೃಹಮಂತ್ರಿ ವಕಾಲತ್ತು ವಹಿಸುತ್ತಿರುವ ಆನಂದ ಎಂಬಾತನ ಹಿನ್ನೆಲೆಯನ್ನೂ ಬಿದರಿ ವಿವರಿಸಿದ್ದಾರೆ. ...ಈ ಆನಂದ ಓರ್ವ ಹುಟ್ಟಾ ವಂಚಕ ಮಾತ್ರವಲ್ಲ ಹಳೇ ಪಾತಕಿ ಕೂಡ. ಈತನ ವಿರುದ್ಧ ಈತನಕ ಒಟ್ಟು ಎಂಟು ...ಮಿನಲ್ ಕೇಸುಗಳು ದಾಖಲಾಗಿವೆ. ಎಲ್ಲವೂ ಭೂಸಂಬಂಧಿ ಗೂಂಡಾಗಿರಿಗೆ ಸಂಬಂಧಪಟ್ಟ ಕೇಸುಗಳೆ. ...ಇಂಥವನೊಬ್ಬ ಯಾರದೋ ಆಸ್ತಿ ಲಪಟಾಯಿಸಲು ಸುಳ್ಳು ದಾಖಲೆ ಸೃಷ್ಟಿಸುತ್ತಾನೆಂದರೆ, ರೌಡಿಗಳನ್ನು ಜಮಾಯಿಸಿ ...ಹಾವಳಿಯಿಡುತ್ತಾನೆಂದರೆ ಅಂಥವನ ಬೆನ್ನಿಗೆ ನಿಲ್ಲುವ ಗೃಹಮಂತ್ರಿ ಇನ್ನೆಂಥವನು?

ಬಿದರಿಯ ಧೈರ್ಯವನ್ನು ಮೆಚ್ಚಲೇಬೇಕಲ್ಲವೆ?


ಸತ್ಯಭಾಮಾ






ಪೊಲೀಸ್ ಮತ್ತು ಕಾನೂನಿನ ಕೈಗೆಟುಕದಷ್ಟು ಅನಾಹುತಕಾರಿ ಹಂತ ಮುಟ್ಟಿಬಿಟ್ಟಿದೆ ಬೆಂಗಳೂರು. ಕೇವಲ ಹದಿನೈದೇ ದಿನಗಳೊಳಗೆ ಹದಿನೈದು ಅನಾಹುತಕಾರಿ ಕೊಲೆಗಳು, ಅಷ್ಟೇ ಸಂಖ್ಯೆಯ ಚೈನ್ ಸ್ನ್ಯಾಚಿಂಗ್ , ಎರಡು ಲಾಕಪ್ ಡೆತ್, ಒಂದು ಡಜನ್ ರಾಬರಿ ಮತ್ತು ಐದು ನಿರ್ಭಯ ಕಿಡ್ನಾಪ್! ಬೆಳೆದಿದೆ ನೋಡಾ... ಎಂಬ ಹಾಡನ್ನು ಅಣಕಿಸಲೋ ಎಂಬಂತೆ ಬೆಂಗಳೂರು ಈಗ ಕೊಲೆಗಳ ನಗರವಾಗಿ ಬದಲಾಗುತ್ತಿದೆ.

ಒಂಟಿ ಗೃಹಿಣಿಯರೇ ಟಾರ್ಗೆಟ್?

ಬೆಳೆದಿದೆ ನೋಡಾ ಕೊಲೆಗಳ ನಗರ

■ ರಾ.ಸೋಮನಾಥ್



ಕೊಲೆಯಾದ ರಂಗನ್ ಮತ್ತು ವಸಂತಾ ದಂಪತಿಗಳು

ಕೇವಲ ಹದಿನೈದೇ ದಿನಗಳೊಳಗೆ ಹದಿನೈದು ಅನಾಹುತಕಾರಿ ಕೊಲೆಗಳು, ಅಷ್ಟೇ ಸಂಖ್ಯೆಯ ಚೈನ್ ಸ್ನ್ಯಾಚಿಂಗ್ , ಎರಡು ಲಾಕಪ್ ಡೆತ್, ಒಂದು ಡಜನ್ ರಾಬರಿ ಮತ್ತು ಐದು ನಿರ್ಭಯ ಕಿಡ್ನಾಪ್!

ಜಯನಗರದ ತ್ರಿವಳಿಕೊಲೆ, ಹಾಡುಹಗಲೇ ಗರುಡಾಚಾರ್ ಪಾಳ್ಯದ ವಿನಾಯಕ ಫೈನಾನ್ಸ್‌ಗೆ ನುಗ್ಗಿ ರಿವಾಲ್ವರ್ ತೋರಿಸಿ 11.30 ಲಕ್ಷದ ದರೋಡೆ, ಕಿಕ್ಕಿರಿದ ಜಯನಗರದಲ್ಲಿ ವೃದ್ಧ ದಂಪತಿ ರಂಗನ್ ಮತ್ತವರ ಪತ್ನಿ ವಸಂತಾರ ಭೀಕರ ಹತ್ಯೆ, ಚಿಕ್ಕಲ್ಲಸಂದ್ರದ ಮನೆಯೊಂದಕ್ಕೆ ಹಾಡುಹಗಲಲ್ಲೇ ನುಗ್ಗಿದ ಹಂತಕರಿಂದ ಗಾಯತ್ರಿ ಎಂಬ ಮುಗ್ಧ ಗೃಹಿಣಿಯ ಅಮಾನುಷ ಕೊಲೆ ಮತ್ತು ತನ್ನನ್ನು ಅಡ್ಡಗಟ್ಟಿ ಹಣ ಮತ್ತು ಮೊಬೈಲ್ ಕಿತ್ತುಕೊಳ್ಳಲು ಯತ್ನಿಸಿದ ಪಾತಕಿಗಳ ವಿರುದ್ಧ ಪ್ರತಿರೋಧ ತೋರಿದರೆಂಬ ಒಂದೇ ಕಾರಣಕ್ಕೆ ನಡುರಸ್ತೆಯಲ್ಲೇ ಕೊಲೆಯಾದ ಬೆಳ್ಳಂದೂರು ಗೇಟಿನ ಯುವಕ ನಾಜರ್‌ನ ದುರಂತ.

ಪೊಲೀಸ್ ಮತ್ತು ಕಾನೂನಿನ ಕೈಗೆಟುಕದಷ್ಟು ಅನಾಹುತಕಾರಿ ಹಂತ ಮುಟ್ಟಿಬಿಟ್ಟಿದೆ ಬೆಂಗಳೂರು. ಯಾರೇ ಹೊಸ ಪೊಲೀಸ್ ಕಮೀಷನರ್ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಈ ಥರದ ಕೊಲೆ ಸುಲಿಗೆಗಳು ಏಕಾಏಕಿ ಉಲ್ಬಣಿಸುವುದಕ್ಕೂ ಮತ್ತು ಈಗ ಭುಗಿಲೆದ್ದ ವಿಲಕ್ಷಣ ಹತ್ಯಾ ಸರಣಿಗೂ ವ್ಯತ್ಯಾಸವಿಲ್ಲದೇ ಹೋಗಿದ್ದರೆ ಕಮೀಷನರ್ ಶಂಕರ್ ಬಿದರಿಯವರನ್ನು ಯಾರೂ ಕುಟುಕ ಬೇಕಿರಲಿಲ್ಲ. ಅಥವಾ ಬಿಜೆಪಿ ಸರ್ಕಾರದ ಕಾಲ್ಗುಣವೇ ಅಂಥಾದ್ದೋ ಗೊತ್ತಿಲ್ಲ.

ಹಿಂದಾದರೆ ಗ್ಯಾಂಗ್ ವಾರ್ ಕಾರಣಕ್ಕೆ ಸರಣಿ ಹತ್ಯೆಗಳಾಗುತ್ತಿದ್ದವು. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಮೇಲೆ ನೀಲಂ ಅಚ್ಯುತರಾವ್ ಕಮೀಷನರ್‌ಗಿರಿಯ ಹೊಸತರಲ್ಲೂ ವಿಪರೀತ ಹೆಣಬಿದ್ದದ್ದು ಸುಳ್ಳಲ್ಲ. ಧರ್ಮಸಿಂಗ್ ಮುಖ್ಯಮಂತ್ರಿಯಾದ ಮೇಲೆ ಶುರುವಿನಲ್ಲಿ ಕೊಲೆಸುಲಿಗೆಗಳಿರಲಿಲ್ಲವೆಂದಲ್ಲ. ಆದರೆ ಈಗ ಶುರುವಾಗಿರುವುದು ಮನೆಗಳಲ್ಲಿ ಒಂಟೊಂಟಿಯಾಗಿರುವ ಗೃಹಿಣಿಯರು ಮತ್ತು ವಯೋವೃದ್ಧರ ಹತ್ಯಾಕಾಂಡ.


ಶಂಕರ್ ಬಿದರಿ

ಗ್ಯಾಂಗ್‌ವಾರ್ ಸಂಬಂಧಿ ಕೊಲೆಗಳಿಗೂ ಜನವಸತಿ ಪ್ರದೇಶಗಳಲ್ಲಿನ ಒಂಟಿ ಗೃಹಿಣಿಯರು, ವಯೋವೃದ್ಧರ ಹತ್ಯೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಅಥವಾ ಮೊಬೈಲೋ ಹಣವನ್ನು ಕಸಿಯಲು ಹೋಗಿ ಮಾಡುವ ಕೊಲೆಗಳಿಗೂ


ಉಮೇಶ್

ಗ್ಯಾಂಗ್‌ವಾರ್‌ಗಳಿಗೂ ಸಂಬಂಧವಿರುವುದಿಲ್ಲ. ರೌಡಿಯೊಬ್ಬನ ಹೆಣ ಬಿತ್ತೆಂದರೆ ಇಂಥವನೇ ಮಾಡಿರಬೇಕೆಂದು ಸಲೀಸಾಗಿ ಲೆಕ್ಕಹಾಕುವ ಪೊಲೀಸರಿಗೆ ಫೈನಾನ್ಸ್ ಅಡ್ಡೆಯೊಂದಕ್ಕೆ ಹಾಡುಹಗಲೇ ನುಗ್ಗಿ ರಿವಾಲ್ವರ್ ತೋರಿಸಿ ಲಕ್ಷಗಟ್ಟಲೆ ದರೋಡೆ ಮಾಡುವ ಅಪರಿಚಿತ, ಅನಾಮಿಕ ಪಾತಕಿಗಳನ್ನು ಪತ್ತೆ ಹಚ್ಚುವುದೇ ದುಸ್ಸಾಧ್ಯ.

ಎರ್ರಾಬಿರ್ರಿ ಬೆಳೆಯುತ್ತಿರುವ ಬೆಂಗಳೂರಿಗೆ ಎಲ್ಲೆಲ್ಲಿಂದಲೋ ಬಂದ ಆಗಂತುಕರ ಮಧ್ಯೆಯೇ ದಿಕ್ಕುದೆಸೆಯಿಲ್ಲದ ವಯೋವೃದ್ಧರ ಮನೆ ಹುಡುಕಿ ಕೊಂದು ದೋಚುವ ಹಂತಕ ಪಡೆಯೊಂದು ಹುಟ್ಟಿಕೊಂಡಿರಬಹುದೇ?

ಇದು ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರ ಅನುಮಾನವಷ್ಟೇ ಅಲ್ಲ, ಬಹುತೇಕ ಪೊಲೀಸ್ ಠಾಣೆಗಳ ನುರಿತ ಕ್ರೈಂ ಪೊಲೀಸರ ಅನುಮಾನ ಕೂಡ. ಇಲ್ಲದಿದ್ದರೆ ಜನವರಿ 1ರಂದು ಮಲ್ಲೇಶ್ವರಂ 7ನೇ ಕ್ರಾಸ್‌ನಲ್ಲಿ ನಡೆದ ಆಡಿಟರ್ ಸುಂದರ್ ಹತ್ಯೆಗೆ ಸಣ್ಣದೊಂದು ಕಾರಣವಾದರೂ ಇರಬೇಕಿತ್ತು. ನವೀನ್‌ಸುಂದರ್ ಬಸವೇಶ್ವರನಗರದ ಶಿವರಾಜಕುಮಾರ್ ಅಸೋಸಿಯೇಟ್ಸ್‌ನಲ್ಲಿ ಆಡಿಟರ್ ಆಗಿದ್ದವರು. ಡಿಸೆಂಬರ್ ಇಪ್ಪತ್ತೇಳರಂದು ಕಚೇರಿಗೆ ಬಂದು ಕೆಲಸ ಮಾಡಿದ್ದೇ ಕೊನೆ. ಅನಂತರ ಯಾರೂ ಅವರನ್ನು ಕಂಡಿಲ್ಲ. ಮಲ್ಲೇಶ್ವರಂ 7ನೇ ಕ್ರಾಸ್‌ನ ತೆಂಗಿನ ಮರದ ಬಳಿಯ ಅವರದೇ ಮನೆಯಲ್ಲಿ ಒಬ್ಬಂಟಿಯಾಗಿ ವಾಸಿಸುತ್ತಿದ್ದ ನವೀನ್‌ಸುಂದರ್ ಮೊಬೈಲ್ ಸತತ ಮೂರು ದಿನಗಳಿಂದ ಸ್ವಿಚ್‌ಆಫ್ ಆಗಿದ್ದನ್ನು ಗಮನಿಸಿದ ಅವರ ಸಹೋದರಿ ದಿವ್ಯಾ ಅಂತಿಮವಾಗಿ ಜನವರಿ ಒಂದರಂದು ಮಲ್ಲೇಶ್ವರಂಗೆ ಬಂದು ಬಾಗಿಲು ಬಡಿದರೆ ಭಯಂಕರ ದುರ್ವಾರ್ತ!

ಅಲ್ಲಿಗೆ ನವೀನ್‌ಸುಂದರ್ ಕೊಲೆಯಾಗಿದ್ದು ಖಾತರಿಯಾಗಿ ಹೋಗಿತ್ತು. ಪೊಲೀಸ್ ಅಧಿಕಾರಿಗಳ ಸಮೇತ ಬಾಗಿಲು ಮುರಿದು ಒಳಹೊಕ್ಕರೆ ಆಡಿಟರ್ ಶವ ಬಚ್ಚಲು ಮನೆಯಲ್ಲಿ ಕೊಳೆತು ನಾರುತ್ತಿತ್ತು. ಆದೂ ಕೈಕಾಲು ಕಟ್ಟಿ ಹಾಕಿ ಅಮಾನುಷವಾಗಿ ಕೊಂದು ಬಚ್ಚಲು ಮನೆಗೆ ತುರುಕಲಾಗಿತ್ತು. ಕೊಂದವರ್‍ಯಾರು? ಯಾವ ಕಾರಣಕ್ಕೆ? ಬಹುಶಃ ಬೆಲೆಬಾಳುವ ಒಡವೆ, ದುಡ್ಡು ಯಾವುದೂ ಸಿಗದೇ ಹಂತಕರು ಪರಾರಿಯಾದರೆ?

ಇವತ್ತಿಗೂ ಆಡಿಟರ್ ನವೀನ್ ಸುಂದರ್ ಹತ್ಯೆಯೆಂಬುದು ಚಿದಂಬರ ರಹಸ್ಯವಾಗೇ ಉಳಿದಿದೆ.

ಇದು ಒಂದು ತೆರನಾದ ಹತ್ಯೆಯಾದರೆ ಜನವರಿ 9ರ ಶುಕ್ರವಾರ ಜಯನಗರ ಮೂರನೇ ಬ್ಲಾಕ್‌ನ 11ನೇ ರಸ್ತೆಯಲ್ಲಿನ ತಮ್ಮ ಸ್ವಂತ ಮನೆಯಲ್ಲೇ ಹೆಣವಾದವರು ನಿವೃತ್ತ ಡೆಪ್ಯೂಟಿ ಅಕೌಂಟೆಂಟ್ ಜನರಲ್ ರಂಗನ್ ಮತ್ತು ಅವರ ಪತ್ನಿ ವಸಂತಾ. ಚಿತ್ರ ನಿರ್ದೇಶಕ ನಾಗತಿಹಳ್ಳಿಗೆ ಪರಮಾಪ್ತರಾಗಿದ್ದ ರಂಗನ್ ದಂಪತಿಗಳು ಕಳೆದ ನಲವತ್ತು ವರ್ಷಗಳಿಂದ ಅದೇ ಮನೆಯಲ್ಲಿದ್ದವರು. ಒಂದಲ್ಲ ನಾಲ್ವರು ಮಕ್ಕಳಿದ್ದೂ ದಿಕ್ಕುದೆಸೆಯಿಲ್ಲದವರಂತೆ ಒಂಟೊಂಟಿಯಾಗಿ ವಾಸಿಸುತ್ತಿದ್ದ ರಂಗನ್-ವಸಂತಾ ಯಾವತ್ತೂ ಅಪರಿಚಿತರಿಗೆ ಬಾಗಿಲು ತೆರೆದವರಲ್ಲ. ಹಾಗಾದರೆ ಯಾರೋ ಪರಿಚಿತರೇ ಕೊಂದರಾ?


▶▶▶

ಪೊಲೀಸ್ ಠಾಣೆಗಳೇ ಹರಾಜಿಗೆ ಬಿದ್ದಾಗ....?

ಬೆಳೆದಿದೆ ನೋಡಾ.... ಎಂಬ ಹಾಡನ್ನು ಅಣಕಿಸಲೋ ಎಂಬಂತೆ ಬೆಂಗಳೂರು ಈಗ ಕೊಲೆಗಳ ನಗರವಾಗಿ ಬದಲಾಗುತ್ತಿದೆ.

ಒಂದೇ ದಿನಕ್ಕೆ ನಾಲ್ಕು ಕೊಲೆ, ಸಂಜೆಯಾಗುತ್ತಿದ್ದಂತೆ ಮನೆಯಿಂದ ಹೊರಬಿದ್ದ ಗೃಹಿಣಿಯ ನಡುರಸ್ತೆ ಕೊಲೆ, ತನ್ನ ಮನೆ ಮುಂದೆ ನಿಂತಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಮುನಿರಾಜು ಕೊಲೆ, ಕೇವಲ ಆಲೂಗಡ್ಡೆ ಚಿಪ್ಸ್ ಕೇಳಿದ ಎಂಬ ಒಂದೇ ಕಾರಣಕ್ಕೆ ಅಶೋಕ್‌ನಗರ ಪೊಲೀಸ್ ಲಿಮಿಟ್ಸ್‌ನಲ್ಲಿ ವಿನ್ಸೆಂಟ್ ರಾಜ್ ಎಂಬಾತನ ಕೊಲೆ, ಜೀವನ್ ಭೀಮಾನಗರದಲ್ಲಿ ಸಿಸಿ ಟಿವಿ ಮಳಿಗೆ ಇಟ್ಟಿದ್ದ ಪಳನಿಯನ್ನು ಲೈಂಗಿಕ ಕಿರುಕುಳಕ್ಕಾಗಿ ಆತನ ಉದ್ಯೋಗಿ ಯುವತಿಯ ಪ್ರಿಯಕರನೇ ಮಾಡಿದ ಕೊಲೆ; ಹೀಗೆ ಪ್ರತಿನಿತ್ಯ ಒಂದರ ಮೇಲೊಂದು ಕೊಲೆಗಳ ಸುದ್ದಿ ಪತ್ರಿಕೆಗಳ ಮುಖಪುಟದಲ್ಲಿ ರಾಚುತ್ತಿವೆ.


ಪಳನಿ


ಹತ್ಯೆಗೀಡಾದ ಪಳನಿಯ ಮೃತದೇಹ

ಬೆಂಗಳೂರು ತನ್ನ ಪೊಲೀಸರ ಕೈಮೀರಿ ಬೆಳೆಯುತ್ತಿರುವುದು ಒಂದೆಡೆಯಾದರೆ ಮತ್ತೊಂದೆಡೆ ಬಹುತೇಕ ಪೊಲೀಸ್ ಠಾಣೆಗಳನ್ನು ಇಂತಿಷ್ಟು ರೇಟಿಗೆಂದು ಮುಖ್ಯಮಂತ್ರಿ ಮಗನೇ ನಿಂತು ಹರಾಜು ಹಾಕಿದ್ದಾನೆ. ರೊಕ್ಕಕೊಟ್ಟು ಫಲವತ್ತಾದ ಪೊಲೀಸ್ ಠಾಣೆಗಳನ್ನು ಹಿಡಿದ ಬಹುತೇಕ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಬೆಂಗಳೂರಿನ ಪಾತಕಿಗಳ ಜಾಡಿರಲಿ ರಸ್ತೆಗಳೇ ಗೊತ್ತಿಲ್ಲ.

ಈಗ ಜಯನಗರದ ಡಬ್ಬಲ್ ಮರ್ಡರ್ ಮತ್ತು ತಿಲಕ್‌ನಗರದ ತ್ರಿಬಲ್ ಮರ್ಡರ್‌ನ ತನಿಖೆ ಮಾಡಲು ನುರಿತ ಪೊಲೀಸ್ ಅಧಿಕಾರಿಗಳಾದರೂ ಎಲ್ಲಿದ್ದಾರೆ? ಇನ್ನು ಜೆ.ಪಿ. ನಗರದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ತಲೆಗೆ ಈ ಎರಡೂ ಹತ್ಯಾಕಾಂಡಗಳನ್ನು ಕಟ್ಟಲು ಹೋದರೆ ಅವರಾದರೂ ಎಷ್ಟು ಅಂತ ಹೆಣಗಲು ಸಾಧ್ಯ? ಒಂದೆಡೆ ಸಿಸಿಬಿಯ ಬಾಳೇಗೌಡ ಮತ್ತು ಅಶೋಕನ್ ತಂಡ, ಇನ್ನೊಂದೆಡೆ ತಿಲಕ್‌ನಗರದ ಇನ್ಸ್‌ಪೆಕ್ಟರ್ ಶ್ರೀನಿಧಿ ತಂಡ, ಮತ್ತೊಂದೆಡೆ ಜಯನಗರದ ಇನ್ಸ್‌ಪೆಕ್ಟರ್ ಲೋಕೇಶ್ ಪಡೆ, ಇವರೆಲ್ಲರ ಜೊತೆಗೆ ಜೆ.ಪಿ. ನಗರದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಮೇಲುಸ್ತುವಾರಿ ವಹಿಸಿದರೂ ಈತನಕ ಹಂತಕರ ಪತ್ತೆಯಿಲ್ಲ.


ಹಂತಕರು...

ಹೋಗಲಿ ಈ ಎರಡು ಹತ್ಯಾ ಸರಣಿಗಳನ್ನೇ ಕೆದಕುತ್ತಾ ಹೊರಡೋಣವೆಂದರೆ; ಒಂದರ ಹಿಂದೊಂದು ಕೊಲೆಗಳು ನಡೆಯುತ್ತಲೇ ಇವೆ. ಅದನ್ನು ನೋಡುವುದಾ ಇದನ್ನು ಹುಡುಕುವುದಾ?

ಪೊಲೀಸರ ಅಂಕೆ ಮೀರಿ ಬೆಳೆಯುತ್ತಿರುವ ಬೆಂಗಳೂರಿಗೆ ಯಾವ ಕೇಡುಗಾಲವೋ ಬಲ್ಲವರ್‍ಯಾರು? ಇದರ ಮಧ್ಯೆ ರೊಕ್ಕಕ್ಕೆ ಪೊಲೀಸ್ ಠಾಣೆಗಳನ್ನು ಹರಾಜಿಗಿಟ್ಟರೆ ಇನ್ನೇನಾಗುತ್ತೆ? ■

ಆದರೆ ರಂಗನ್ ದಂಪತಿಗಳ ಪರಿಚಿತರ್‍ಯಾರೂ ಮನೆಗೆ ನುಗ್ಗಿ ಕೊಲ್ಲುವ ಮಟ್ಟದವರಲ್ಲ. ಾಗಿಲಿನಿಂದ ಬಂದು ಅಮಾನುಷವಾಗಿ ಕತ್ತು ುವ್ವಿ ಇಬ್ಬರೂ ವೃದ್ಧ ದಂಪತಿಗಳನ್ನು ಕೊಂದ ಕ ಮನೆಯಲ್ಲಿದ್ದ ದುಡ್ಡು ಭರಣಗಳ್ಯಾವುದನ್ನೂ ಮುಟ್ಟಿಲ್ಲ. ಗಮನಾರ್ಹ ತಿಯೆಂದರೆ ತಮ್ಮ ಜಯನಗರದ ಮನೆಯನ್ನು ು ಕೋಟಿಗೆ ಮಾರಿ, ಮೈಸೂರಿಗೆ ಹೋಗಿ ೊಳ್ಳುವುದು ರಂಗನ್ ಉದ್ದೇಶವಾಗಿತ್ತು. ್ಕೆಂದು ಒಂದಿಬ್ಬರು ಬಿಲ್ಡರುಗಳಿಗೆ ಮನೆಯನ್ನು ಿಸಿದ್ದರು. ಹಾಗೇ ಮನೆಯನ್ನು ದಿಸಲೆಂದು ಬಂದ ಯಾರೋ ಬಿಲ್ಡರ್ ಗಿನ ಹಂತಕನಿಗೆ ಬಾಗಿಲು ತೆರೆದಿರಬಹುದೇ? ದನಂತರ ಆತ ಒಳಗಿನಿಂದ ಬೋಲ್ಟ್ ಹಾಕಿ ಾಗಿಲ ಮೂಲಕ ಹೊರಬಿದ್ದನೇ?

ಇದು ಒಂದು ಲೆಕ್ಕಾಚಾರವಾಗಿದೆ. ಇಲ್ಲಿಗೆ ಹಿಂದಷ್ಟೆ ಕೆಲಸದ ಹೆಂಗಸೊಬ್ಬಳು ಕೇವಲ ು ದಿನದ ಮಟ್ಟಿಗೆ ರಂಗನ್ ಮನೆಗೆ ಬಂದು ಗಿದ್ದಾಳೆ. ಆಕೆ ಯಾರು? ಎಲ್ಲಿಯವಳು? ೇ ಮೂಲಕ ಕೆಲಸಕ್ಕೆ ಬಂದಳೆಂಬುದು ಾಗೂ ಗೊತ್ತಿಲ್ಲ. ತಮ್ಮ ಮನೆಯೆದುರಿಗೆ ಇದ್ದ ಕಲ್ ಸ್ಟೋರ್‌ನ ಆಸಾಮಿಯ ಜೊತೆ ್ ದಂಪತಿಗಳಿಗೆ ಸಂಪರ್ಕವಿತ್ತು. ಆತನಿಗೂ ದವಳ ಇತ್ಯೋಪರಿಗಳ ಪರಿವೆಯಿಲ್ಲ.

ರ್ಧ ತಿಂಗಳು ಕಳೆದುಹೋಗಿದೆ. ರಂಗನ್ ತಿಗಳ ಭೀಕರ ಜೋಡಿಕೊಲೆಗೆ ಂಧಪಟ್ಟಂತೆ ಸಣ್ಣದೊಂದು ಕ್ಲೂ ಕೂಡಾ ೀಸರಲ್ಲಿಲ್ಲ. ಇದಾಗಿ ಹತ್ತೇ ದಿನಕ್ಕೆ ನಡೆದದ್ದು ನಗರದ 'ಟಿ' ಬ್ಲಾಕ್ ಅಂದರೆ ತಿಲಕ್‌ನಗರದ ಕೊಲೆ. ಕೊಲೆಯಾದವರು ಎಂಬತ್ತೊಂದು ದ ಸತ್ಯಭಾಮಾ, ಅವರ ಮಗಳು ುಲಕ್ಷ್ಮೀ ಮತ್ತು ಸೊಸೆ ಜಯಶ್ರೀ. ಸೊಸೆ ಶ್ರೀಗೆ ಐವತ್ತು ವರ್ಷದ ಇಳಿವಯಸ್ಸಾದರೆ ು ವಿಜಯಲಕ್ಷ್ಮೀಗಾಗಲೇ ಅರವತ್ತೆರಡು . ಸಣ್ಣದೊಂದು ಪ್ರತಿರೋಧಕ್ಕೂ ಶಕ್ತಿಯಿಲ್ಲದ ಾಯಕ ವಯಸ್ಸಾದ ಹೆಂಗಸರಿವರು. ಜನವರಿ ಮಧ್ಯಾಹ್ನ ಮನೆಯ ಮುಖ್ಯ ದ್ವಾರದಿಂದಲೇ ಶಿಸಿದ ಹಂತಕ ಮೊದಲು ಮುದುಕಿ ಾಮಾರ ತಲೆಗೆ ಬಲವಾದ ಪ್ರಹಾರ ದ್ದಾನೆ. ನಂತರ ಸೊಸೆ ಜಯಶ್ರೀಯವರ), ತಲೆ, ಹಣೆ ಚಚ್ಚಿದ್ದಾನೆ. ನಂತರ ಮಗಳು ುಲಕ್ಷ್ಮೀ ತಲೆಗೂ ಅಷ್ಟೇ ಬಲವಾದ ಪ್ರಹಾರ ದ್ದಾನೆ. ಮಧ್ಯಾಹ್ನ ಎರಡು ಗಂಟೆಯ ಒಳಗೆ ೂ ಹೆಂಗಸರ ಕತೆ ಮುಗಿದುಹೋಗಿದೆ. ಒಂದು ಗಂಟೆಯ ತರುವಾಯ ಜಯಶ್ರೀ ಸಮೀಪದ ಸಂಬಂಧಿ ರಂಜಿತಾ ಎಂಬಾಕೆ ಹಾಕಲೆಂದು ಕೊಂಡೊಯ್ದಿದ್ದ ಸೀರೆಯನ್ನು ಕೊಡಲೆಂದು ಬಂದಾಗಲೇ ಕೊಲೆಯಾಗಿದ್ದು ಾಗುತ್ತದೆ.

ತ್ಯಭಾಮಾ ಮತ್ತು ಜಯಶ್ರೀಯವರ ಕೆಲ ಣಗಳನ್ನು ಬಿಚ್ಚಿಕೊಂಡ ಹಂತಕ ರೋಲ್ಡ್‌ಗೋಲ್ಡ್ ಆಭರಣಗಳನ್ನು ಹಾಗೇ ಬಿಟ್ಟುಹೋಗಿದ್ದಾನೆ. ಆದರೆ ವಿಜಯಲಕ್ಷ್ಮೀಯವರ ಯಾವುದೇ ಚಿನ್ನಾಭರಣಗಳನ್ನು ಮುಟ್ಟಿಲ್ಲ. ವಿಚಿತ್ರವೆಂದರೆ ಮನೆಯಲ್ಲಿದ್ದ ಎರಡೂ ಅಲ್ಮೇರಾಗಳನ್ನೂ ಹಂತಕ ಚೆಲ್ಲಾಪಿಲ್ಲಿ ಮಾಡಿ ಹುಡುಕಾಡಿದ್ದಾನೆ. ಹಾಗಾದರೆ ಇದು ಆಸ್ತಿಗಾಗಿ ಪರಿಚಿತರೇ ಎಸಗಿದ ಹತ್ಯಾಕಾಂಡವಾ?

ಹಾಗೊಮ್ಮೆ ಆಸ್ತಿಗಾಗಿಯೇ ಕೊಂದಿದ್ದರೆ ಕೊಂದವನಿಗೆ ಏನು ಲಾಭ? ಒಂದು ಪಕ್ಷ ಆಸ್ತಿ ಸಂಬಂಧಿ ದಾಖಲೆಗಳನ್ನು ಒಯ್ದರೂ ಅದರ ಹಕ್ಕುದಾರರು ಬದುಕಿಲ್ಲವೆಂದರೆ ಏನೇನೂ ಪ್ರಯೋಜನವಿಲ್ಲ. ಇವತ್ತಲ್ಲ ನಾಳೆ ಇದು ಆಸ್ತಿಗಾಗಿಯೇ ಮಾಡಿದ ಕೊಲೆಯೆಂದು ಗೊತ್ತಾಗಲೇಬೇಕು. ಇಲ್ಲಿ ಕೊಲೆ ನಡೆದದ್ದು ಆಸ್ತಿಗಾಗಿ ಎನ್ನುವುದಕ್ಕಿಂತಲೂ ದರೋಡೆಗಾಗಿ ಎಂಬುದಕ್ಕೆ ಹೆಚ್ಚು ಕ್ಲೂಗಳಿವೆ.

ಏಕೆಂದರೆ ಕೊಲೆಯಾದ ಮುದುಕಿ ಸತ್ಯಭಾಮಾ ಹೆಚ್‌ಎಎಲ್‌ನಲ್ಲಿ ಸೂಪರ್‌ವೈಸರ್ ಆಗಿದ್ದ ರಾಮಕೃಷ್ಣರವರ ಪತ್ನಿ. ರಾಮಕೃಷ್ಣ ಸತ್ತು ಹತ್ತು ವರ್ಷಕ್ಕೂ ಹೆಚ್ಚು ಕಾಲವಾಗಿದೆ. ಅವರ ನಾಲ್ವರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳ ಪೈಕಿ ಯಾರಿಗೂ ದುಡ್ಡು-ಕಾಸಿನ ದಾರಿದ್ರ್ಯವಾಗಲಿ, ಕೊಲ್ಲಿಸುವ ಮಟ್ಟದ ತಾಕತ್ತಾಗಲಿ ಇಲ್ಲ. ಕೊಂದ ರೀತಿಯಾದರೂ ಎಂಥಾದ್ದು? ಮೊದಮೊದಲು ಯಾರೋ ಕಲ್ಲಿನಿಂದ ಜಜ್ಜಿ ಕೊಂದಿರಬೇಕೆಂದು ಲೆಕ್ಕಹಾಕಿದ ಪೊಲೀಸರಿಗೆ ವಿಚಿತ್ರ ಕ್ಲೂ ಒಂದು ಸಿಕ್ಕಿತು. ಮೂವರ ತಲೆ, ಹಣೆ, ಮುಖಗಳಿಗಾದ ರಕ್ತ ಗಾಯಗಳಲ್ಲಿ ತೆಂಗಿನಕಾಯಿ ನಾರುಗಳಿದ್ದವು. ಕೊನೆಗೆ ಹುಡುಕುತ್ತಾ ಹೋದ ಜೆ.ಪಿ.ನಗರದ ಇನ್‌ಸ್ಪೆಕ್ಟರ್ ಎಸ್.ಕೆ. ಉಮೇಶ್‌ಗೆ ಪಾತ್ರೆಯೊಂದರಲ್ಲಿದ್ದ ತೆಂಗಿನ ಕಾಯೊಂದು ಕಣ್ಣಿಗೆ ಬಿತ್ತು. ಅದನ್ನು ತೆಗೆದು ನೋಡಿದರೆ ಅದಕ್ಕೆ ರಕ್ತ ಮತ್ತು ಮನುಷ್ಯ ಚರ್ಮದ ತುಣುಕುಗಳು ಮೆತ್ತಿಕೊಂಡಿದ್ದವು. ಅದರರ್ಥ ಹಂತಕ ಅದೇ ಮನೆಗೆ ಬರಿಗೈಯಲ್ಲಿ ಬಂದವನು ಅದೇ ಮನೆಯಲ್ಲಿದ್ದ ತೆಂಗಿನಕಾಯಿಯಿಂದ ಮೂರೂ ಹೆಂಗಸರ ತಲೆ ಚಚ್ಚಿ ಕೊಂದಿದ್ದಾನೆ. ತಿಲಕ್‌ನಗರದ ತ್ರಿಬಲ್ ಮರ್ಡರ್ ಮತ್ತು ಜಯನಗರದ ಡಬ್ಬಲ್ ಮರ್ಡರ್ ಎರಡಕ್ಕೂ ಕೆಲ ಸಂಬಂಧಗಳಿವೆ. ಈ ಎರಡೂ ಮನೆಗಳಲ್ಲಿದ್ದವರು ನಿವೃತ್ತ ವಯೋವೃದ್ಧ ನಿಸ್ಸಹಾಯಕರು. ಮನೆಗಳಲ್ಲಿ ಕಾವಲಿಗೆ ವಾಚ್‌ಮನ್‌ಗಳಾಗಲಿ ಸಾಕಿದ ನಾಯಿಗಳಾಗಲಿ



ಇರಲಿಲ್ಲ. ಹದಿಹರೆಯದ ಹುಡುಗರು ಮೊದಲೇ ಇಲ್ಲ.

ಇದರರ್ಥ ಹಂತಕ ಕಳೆದ ಅನೇಕ ದಿನಗಳಿಂದ ಇಂಥ ಮನೆ ಮೇಲೆ ಕಣ್ಣಿಟ್ಟಿದ್ದ. ಇಂತಿಂಥಾ ಮನೆಯಲ್ಲಿ ಇಂತಿಂಥವರೇ ಇದ್ದಾರೆಂಬುದು ಆತನಿಗೆ ಚೆನ್ನಾಗಿ ಗೊತ್ತು. ಅದರಲ್ಲಿ ಜಯನಗರದ ರಂಗನ್ ಯಾರೇ ಅಪರಿಚಿತರಿಗೆ ಯಾವತ್ತೂ ಬಾಗಿಲು ತೆರೆದವರಲ್ಲ. ತಿಲಕ್‌ನಗರದ ಸತ್ಯಭಾಮಾ ಕೂಡಾ ಅಷ್ಟೇ. ಯಾವತ್ತೂ ಅಪರಿಚಿತರಿಗೆ ಬಾಗಿಲು ತೆರೆಯುತ್ತಿರಲಿಲ್ಲ. ಸತ್ಯಭಾಮಾ ಇದ್ದ ಮನೆ ಕೂಡಾ ಮಾರಾಟಕ್ಕಿರಲಿಲ್ಲ. ಆದರೆ ಪಳಗಿದ ಹಂತಕನಿಗೆ ಅದೆಂಥವರ ಮನೆ ಬಾಗಿಲು ತೆರೆಸುವುದು ಕಷ್ಟವೇನಲ್ಲ.

ಕೇಬಲ್ ರಿಪೇರಿಗೆ ಬಂದಿದ್ದೇನೆಂದೂ ತಾನು ಕೇಬಲ್‌ನವನೆಂದೂ ಹೇಳಿಬಿಟ್ಟರೆ ಎಂಥವರೂ ಬಾಗಿಲು ತೆರೆಯುತ್ತಾರೆ. ಕೆಲವೊಮ್ಮೆ ತಾವು ಗ್ಯಾಸ್ ಸ್ಟವ್‌ನ ಸರ್ವೀಸ್‌ಗೆಂದು ಬಂದ ಕಂಪನಿಯ ಮೆಕ್ಯಾನಿಕ್ ಎಂದರೂ ಹಿಂದೆ ಮುಂದೆ ಯೋಚಿಸದೇ ಗೃಹಿಣಿಯರು ಬಾಗಿಲು ತೆರೆಯುತ್ತಾರೆ. ಹೀಗೆ ಬಾಗಿಲು ತೆರೆಸುವ ಮೂರನೇ ಸಾಧ್ಯತೆಯೆಂದರೆ ತಾವು ಕೊರಿಯರ್ ಸರ್ವೀಸ್‌ನವರೆಂದೂ, ನಿಮಗೊಂದು ಕೊರಿಯರ್ ಬಂದಿದೆ ಸಹಿ ಮಾಡೇ ಪಡೆದುಕೊಳ್ಳಬೇಕೆಂದು ಹೇಳುವುದು. ಸಾಮಾನ್ಯವಾಗಿ ಸೇಲ್ಸ್‌ಬಾಯ್‌ಗಳಿಗೂ ಬಾಗಿಲು ತೆರೆಯದ ವಯೋವೃದ್ಧರು ಮತ್ತು ಗೃಹಿಣಿಯರು ಕೇಬಲ್ ರಿಪೇರಿಗೋ ಗ್ಯಾಸ್‌ಸ್ಟವ್ ಪರೀಕ್ಷೆಗೋ ಅಥವಾ ಕೊರಿಯರ್ ಪಡೆದುಕೊಳ್ಳಲೋ ಮರು ಮಾತನಾಡದೇ ಬಾಗಿಲು ತೆರೆದುಬಿಡುತ್ತಾರೆ ಮತ್ತು ಅಕ್ಕಪಕ್ಕದವರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಬಹುಶಃ ಕೇಬಲ್ ರಿಪೇರಿಯ ನೆಪದಲ್ಲಿ ಮನೆ ಹೊಕ್ಕ ಹಂತಕ ಟಿವಿಯ ಸೌಂಡ್ ದೊಡ್ಡದು ಮಾಡಿ ಕೊಂದಿರಬಹುದೇ? ಅಥವಾ ಸಂಚಾರ ದಟ್ಟಣೆಯ ವಾಹನಗಳ ಕರ್ಕಶ ಶಬ್ದದ ಮಧ್ಯೆ ಬಲಿಯಾದವರ ಚೀರಾಟ ಕೇಳಿಸದೇ ಹೋಯಿತೇ? ಹಂತಕನಿಗೆ ಇಡೀ ಪ್ರದೇಶ ಚೆನ್ನಾಗಿ ಗೊತ್ತಿದ್ದು ಈ ಸುತ್ತಮುತ್ತಲೇ ಓಡಾಡಿಕೊಂಡಿದ್ದವನೇ? ಈ ಹಿಂದೆ ಸಣ್ಣಪುಟ್ಟ ರಾಬರಿ, ಮನೆಕಳವು ಮಾಡಿಕೊಂಡಿದ್ದ ಪಾತಕಿಗಳ ಮಧ್ಯೆಯೇ ಹಂತಕನೊಬ್ಬ ಹುಟ್ಟಿಕೊಂಡಿರಬಹುದೇ?

ಒಂದಂತೂ ಸತ್ಯ. ಇನ್ನು ಮುಂದೆ ಒಂಟಿ ಗೃಹಿಣಿಯರು, ಏಕಾಂಗಿಯಾಗಿರುವ ವೃದ್ಧರು, ಬ್ರಹ್ಮಚಾರಿಗಳು ಮತ್ತು ನಿವೃತ್ತರ ಪಾಲಿಗೆ ಬೆಂಗಳೂರೆಂಬುದು ಯಾವತ್ತಿಗೂ ಸುರಕ್ಷಿತವಲ್ಲ. ನಡುರಸ್ತೆಗೆ ಬಂದರೆ ರಾಬರಿಗಳ ಕಾಟ, ಮನೆಯೊಳಗೆ ಇದ್ದರೆ ಹಂತಕರ ಯಮಪಾಶ! ■

ಏನಾಗಿಹೋಯಿತು ಬೆಂಗಳೂರು?


ದಂಡುಪಾಳ್ಯದ ಲೇಟೆಸ್ಟ್ ಪೀಳಿಗೆ?

ದಂಡುಪಾಳ್ಯದ ಹಂತಕರ ಹೊಸ ಪೀಳಿಗೆಯ ಂಗರ ತಂಡವೊಂದು ಇಂಥ ಕೊಲೆಗಳ ಹಿಂದಿ ? ಅಥವಾ ಅವರ ಹೆಸರಲ್ಲಿ ಹೊಸದೊಂದು ್ ಹುಟ್ಟಿಕೊಂಡಿದೆಯೆ?

ಎರಡೂ ಸಾಧ್ಯತೆಗಳು ಢಿಪ್ಪೀಢಿಪ್ಪಿಯಷ್ಟಿದೆ. ತೇಕ ದಂಡುಪಾಳ್ಯದ ಗ್ಯಾಂಗ್ ಸದ್ಯ ಜೈಲಿನಲ್ಲಿದೆ ದರೂ ಇತ್ತೀಚೆಗಷ್ಟೇ ದಂಡುಪಾಳ್ಯದ ರಮೇಶ್ ್ ವೆಂಕಟೇಶ್ ಜೈಲಿಂದ ಹೊರಬಿದ್ದಿದ್ದಾನೆ. ಈತನ ದಂಡುಪಾಳ್ಯದ ಕೃಷ್ಣನ ಶಿಷ್ಯ ಪ್ರಕಾಶ ಉರ್ಫ್ ಾ ಎಂಬಾತ ಕೈಜಡಿಸಿರಲಿಕ್ಕೂ ಸಾಕು.

ಇದು ಒಂದು ಲೆಕ್ಕಾಚಾರವಾದರೆ ಬಿಲ್ಡಿಂಗ್ ಗಾರಿಗಳಿಗೆಂದು ಬಂದ ಬಿಹಾರಿಗಳ ತಂಡ ು ಈ ಕೃತ್ಯದ ಹಿಂದಿರಬೇಕೆಂಬುದು ಮತ್ತೊಂದು ಾರ. ಬಹುತೇಕ ರೌಡಿಗಳೆಲ್ಲ ಜೈಲಲ್ಲಿರುವುದರಿಂದ ಪೈಕಿ ಯಾರೋ ಒಬ್ಬನ ಅಂಕೆಗೊಳಪಟ್ಟ ಟೈಂ ರಾಬರಿಯೊಬ್ಬ ಇದೆಲ್ಲ ವನ್ನೂ ಕುತ್ತಿರಬಹುದೆ? ಆತ ಜಯನಗರದ ಾಸಿನವನೇ ಆಗಿರಬಹುದೆ? ನಿರ್ದಿಷ್ಟ ಮನೆ ಗುರುತಿಸಿಯೇ ಟಾರ್ಗೆಟ್ ಮಾಡುತ್ತಿದ್ದಾನಾ? ಸೀರಿಯಲ್ ಕಿಲ್ಲರ್ ಶ್ಯಾಮ್‌ನ ಶಿಷ್ಯರ ಕೃತ್ಯವೆ?

ಹಂತಕನ ಪತ್ತೆಯ ತನಕ ಇನ್ನೆಷ್ಟು ತಲೆಗಳುರುಳುತ್ತೋ?



ಮನುಷ್ಯ ಸ್ವಾರ್ಥದ ಮತ್ತೊಂದು ರೂಪವೇ ವೃದ್ಧಾಶ್ರಮ.

ಈಗೇನು ಏಕಾಂಗಿ ವಯೋವೃದ್ಧರ ಸರಣಿ ಹತ್ಯೆ ನಡೆಯುತ್ತಿದೆಯೋ ಅದಕ್ಕೂ ನಗರವಾಸಿ ಜನ ದಿನೇದಿನೇ ಸ್ವಾರ್ಥಿಗಳೂ ನಿರ್ದಯಿಗಳೂ ಆಗುತ್ತಿದ್ದಾರೆಂಬ ವರದಿಗೂ ಒಂದಲ್ಲಾ ಒಂದು ರೀತಿಯ ಸಂಬಂಧವಿದೆ.

ಕೊಲೆಯಾದ ಜಯನಗರದ ರಂಗನ್ ಡೆಪ್ಯೂಟಿ ಅಕೌಂಟೆಂಟ್ ಜನರಲ್‌ನಂಥ ಪ್ರಭಾವಿ ಹುದ್ದೆಯಲ್ಲಿದ್ದು ನಿವೃತ್ತರಾದವರು. ಅವರ ನಾಲ್ವರು ಮಕ್ಕಳ ಪೈಕಿ ಹಿರಿ ಮಗಳು ಉಷಾ ಜ್ಯೋತಿ ನಿವಾಸ್ ಕಾಲೇಜಿನಲ್ಲಿ ಉಪನ್ಯಾಸಕಿ. ಎರಡನೇ ಮಗಳು ಉಮಾಳ ಗಂಡ ಶೇಖರ್ ಭಾರೀ ಆಸ್ತಿವಂತ. ಒಬ್ಬ ಮಗ ಅಶ್ವಿನ್ ಅಮೆರಿಕಾದಲ್ಲಿ ಕನ್ಸಲ್ಟೆಂಟ್ ಕಂಪನಿ ನಡೆಸುತ್ತಾನೆ. ಇನ್ನೊಬ್ಬ ಮಗ ಪ್ರಸಾದ್ ಮೈಸೂರಿನಲ್ಲಿ ಟೈಲ್ಸ್ ಫ್ಯಾಕ್ಟರಿ ಇಟ್ಟಿದ್ದಾನೆ. ಇವರೆಲ್ಲರಿಗೆ ದುಡ್ಡು, ವಿದ್ಯೆ, ಶ್ರೀಮಂತಿಕೆ, ಸುಖ ಯಾವುದರಲ್ಲೂ ಕೊರತೆ ಇಲ್ಲ. ಆದರೂ ಅವರಲ್ಲಿ ಯಾರೂ ತಮ್ಮ ತಂದೆತಾಯಿಯೊಂದಿಗೆ ವಾಸಿಸುತ್ತಿರಲಿಲ್ಲ. ಹಾಗೆ ಮಕ್ಕಳೊಂದಿಗೆ ಇರುವುದು ರಂಗನ್ ದಂಪತಿಗಳಿಗೆ ಬೇಡವಿತ್ತೋ ಅಥವಾ ಮಕ್ಕಳಿಗೇ ತಮ್ಮ ಕುಟುಂಬದೊಂದಿಗೆ ತಂದೆ ತಾಯಿ ಇರುವುದು ಬೇಕಿರಲಿಲ್ಲವೋ. ಯಾರಿಗೆ ಗೊತ್ತು? ಪರಿಣಾಮವಾಗಿ ರಂಗನ್ ಮತ್ತು ಅವರ ಹೆಂಡತಿ ತಮ್ಮ ಈ ಇಳಿ ವಯಸ್ಸಿನಲ್ಲಿ ತಮ್ಮ ಮಕ್ಕಳಿಂದ ದೂರ ವಾಸಿಸುತ್ತಿದ್ದು ಕೊಲೆಗಡುಕರಿಗೆ ಬಲಿಯಾಗಿದ್ದಾರೆ.



ಇನ್ನು ತಿಲಕ್‌ನಗರದ ತ್ರಿವಳಿ ಕೊಲೆಯಲ್ಲಿ ಮೊದಲಿಗೆ ಬಲಿಯಾದ ಮುದುಕಿ ಸತ್ಯಭಾಮಾ ಮತ್ತವರ ಸೊಸೆ ಜಯಶ್ರೀಯದೂ ಇದೇ ಕತೆ.

ಎಚ್.ಎ.ಎಲ್.ನಲ್ಲಿ ಸೂಪರ್‌ವೈಸರ್ ಆಗಿದ್ದು ನಿವೃತ್ತರಾದ ರಾಮಕೃಷ್ಣ-ಸತ್ಯಭಾಮಾ ದಂಪತಿಗಳಿಗೆ ನಾಲ್ವರು ಗಂಡು ಮತ್ತು ಇಬ್ಬರು ಹೆಣ್ಣುಮಕ್ಕಳು. ಮೊದಲ ಮಗ ನಟರಾಜ್ ಮೈಕೋ ಲೇಔಟಿನಲ್ಲಿ ಸ್ವಂತ ಮನೆ ಕಟ್ಟಿಸಿಕೊಂಡು ಹಾಯಾಗಿದ್ದರೆ, ಎರಡನೇ ಮಗ ವೇಣು ಗೋಪಾಲ್ ಉತ್ತರಹಳ್ಳಿಯಲ್ಲೊಂದು ಬಂಗಲೆ ಕಟ್ಟಿಸಿ ಸುಖವಾಗಿದ್ದಾನೆ. ಮೂರನೇ ಮಗ ರಾಧಾಕೃಷ್ಣ ದೆಹಲಿಯ ದೇನಾ ಬ್ಯಾಂಕಿನ ಉನ್ನತಾಧಿಕಾರಿ. ಕೊನೇ ಮಗ ಮಂಜುನಾಥ್ ಕೆಲ ವರ್ಷಗಳ ಹಿಂದೆ ಹಾರ್ಟ್ ಅಟ್ಯಾಕ್ ಆಗಿ ಸತ್ತ. ಈಗ ಕೊಲೆಯಾದ ಜಯಶ್ರೀಯೇ ಮಂಜುನಾಥ್ ಪತ್ನಿ.

ಇಷ್ಟೆಲ್ಲ ಮಕ್ಕಳು ಮೊಮ್ಮಕ್ಕಳಿದ್ದೂ ವಿಧವೆ ಸೊಸೆಯೊಂದಿಗೆ ಬದುಕುತ್ತಿದ್ದ ಸತ್ಯಭಾಮಾ ಒಬ್ಬರೇ ಅಲ್ಲ ಅವರ ಪರಿಸ್ಥಿತಿಯಲ್ಲಿ ಬೇರೆ ಯಾರಿದ್ದರೂ ಹಂತಕರ ಕಣ್ಣು ಬೀಳದೇ ಇನ್ನೇನು?

ಹಿಂದೆ ಅನಾಥಾಶ್ರಮಗಳಿದ್ದವು ನಿಜ. ಯುದ್ಧದಲ್ಲಿ ಸತ್ತವರ ಮಕ್ಕಳು, ಅನಾಥರಾದವರು ಇತ್ಯಾದಿಗಳನ್ನು ತಂದು ಸಾಕುವುದೇ ಪುಣ್ಯಕಾರ್ಯವಾಗಿತ್ತು. ಪುರಾಣ ಜಾತಕ, ಇತಿಹಾಸ, ದಂತಕತೆಗಳಲ್ಲಿ ಅನಾಥಶ್ರಮಗಳ ಬಗ್ಗೆ ಕೇಳಿದ್ದೇವೆ. ಆದರೆ ವೃದ್ಧಾಶ್ರಮಗಳಿದ್ದವಾ? ಆದರೆ ಅವು ಈಗ ಎಲ್ಲೆಡೆ ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ಅವುಗಳಿಗೆ ಪ್ರವೇಶ ಪಡೆಯಲು ವೃದ್ಧರು ತಮ್ಮ ಹೆಸರನ್ನು ನೋಂದಾಯಿಸಿ ಕಾಯಲಾರಂಭಿಸಿದ್ದಾರೆ. ಅಷ್ಟೇ ಅಲ್ಲದೆ, ಬೆಂಗಳೂರಿನ ಅದೆಷ್ಟೋ ಮಧ್ಯಮ ವರ್ಗದ ಜನ ತಮ್ಮ ಮಕ್ಕಳನ್ನು ವಿದೇಶಕ್ಕೆ ಕಳುಹಿಸಿ ತಾವು ಮಾತ್ರ ಇಲ್ಲೇ ವಾಸಿಸುತ್ತಿದ್ದಾರೆ.

ಇಂತಹ ಬೆಳವಣಿಗೆಗೆ ಎರಡು ಕಾರಣಗಳಿವೆ. ಹಲವೊಮ್ಮೆ ವೃದ್ಧ ತಂದೆ ಮತ್ತು ತಾಯಿ ತಮ್ಮ ಮಕ್ಕಳ ಅಥವಾ ಸೊಸೆ/ಅಳಿಯನ ಹಂಗಿನಲ್ಲಿರುವ ಬದಲಾಗಿ ತಾವು ಪ್ರತ್ಯೇಕವಾಗಿ ಜೀವಿಸಲು ಬಯಸುತ್ತಾರೆ. ಹಾಗೆಯೇ ಕೆಲವೊಮ್ಮೆ, ಸೊಸೆ ಅಥವಾ ಮಗನಿಗೆ ತಂದೆ ತಾಯಿ ತಮ್ಮೊಂದಿಗೆ ಇರುವುದು ಬೇಕಿಲ್ಲವಾದ್ದರಿಂದ ಅವರನ್ನು ಅವರ ಮನೆಯಲ್ಲೇ ಬಿಟ್ಟು ತಾವು ಸ್ವಂತ ಮನೆ ಕಟ್ಟಿಸಿಕೊಂಡು ತಮ್ಮನ್ನು ಸಾಕಿಸಲುಹಿದ್ದವರ ಮನೆಯನ್ನು ತೊರೆದು ಹೋಗುತ್ತಾರೆ.

ಇನ್ನೂ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಯಾವ ತಾಯಿ ಒಂಬತ್ತು ತಿಂಗಳು ನೋವುಂಡು ತನ್ನನ್ನು ಭೂಮಿಗೆ ತಂದಳೋ, ಯಾವ ತಂದೆ ಹೊಟ್ಟೆಬಟ್ಟೆ ಕಟ್ಟಿ ತನ್ನನ್ನು ಸಾಕಿ ಸಲುಹಿದನೋ; ಅಂಥ ಮಾತಾಪಿತರನ್ನು ಅವರ ಅತ್ಯಂತ ಅಸಹಾಯಕ ಸ್ಥಿತಿಯಲ್ಲಿ ಅನಾಥರನ್ನಾಗಿ ಮಾಡಿರುತ್ತಾರೆ. ಬಹುಶಃ ಮೃಗಗಳು ಕೂಡ ಇಂಥ ದುಷ್ಟತನಕ್ಕಿಳಿಯುವುದಿಲ್ಲ. ಹೀಗೆ ತಮ್ಮ ತಂದೆ ತಾಯಿಯನ್ನು ತೊರೆಯುವವರು ಯಾರೂ ರೈತರಲ್ಲ, ಹಳ್ಳಿಗರಲ್ಲ, ಅನಕ್ಷರಸ್ಥರಾಗಲಿ ಬಡವರಾಗಲಿ ಅಲ್ಲ, ಸುಶಿಕ್ಷಿತ ಶ್ರೀಮಂತರು. ಹಲ್ಲುಬಿದ್ದು ಕಣ್ಣುಕಾಣದ ಮುದಿ ಸಿಂಹವೊಂದಕ್ಕೆ ಅದರ ಮಕ್ಕಳು ಮರಿಮಕ್ಕಳು ಬೇಟೆಯಾಡಿ ಒಂದು ಪಾಲನ್ನು ತಂದೊಪ್ಪಿಸುವ ದೃಶ್ಯವನ್ನು ಡಿಸ್ಕವರಿ ಚಾನಲ್ಲಿನಲ್ಲಿ ನೋಡಬಹುದು.

ಆದರೆ ಅಂತಹ ದೃಶ್ಯ ಸದ್ಯ ಬೆಂಗಳೂರಿನಲ್ಲಿ ಕಾಣಸಿಗುವುದು ಕಷ್ಟ ಎಂಬುದೇ ನಮ್ಮ ಸಮಾಜದ ದುರಂತ. ■

ಹುಬ್ಬಳ್ಳಿ: ಇದೆಂಥಾ ಕ್ರೌರ್ಯ!


ಕೃತ್ಯ ನಡೆದ ಸ್ಥಳ

ಈ ಫೋಟೋದಲ್ಲಿರುವ ಪುಟ್ಟ ಬಾಲೆಯನ್ನೊಮ್ಮೆ ನೋಡಿ. ವಯಸ್ಸಿನ್ನೂ ಐದೂವರೆ ವರ್ಷ ಕೂಡಾ ದಾಟಿಲ್ಲ. ನೋಡುವುದಕ್ಕೆ ಎಷ್ಟೊಂದು ಸುಂದರವಾಗಿದ್ದಾಳೆ. ಕೈತೊಳೆದುಕೊಂಡು ಮುಟ್ಟಬೇಕೆನ್ನುವಷ್ಟರ ಮಟ್ಟಿಗೆ ಸುಂದರವಾಗಿ ನಳನಳಿಸುತ್ತಿದ್ದಾಳೆ. ಪ್ರೀತಿಯಿಂದ ಜೋರಾಗಿ ಮುತ್ತಿಕ್ಕಿದರೂ ಆಕೆಗೆ ನೋವಾಗುತ್ತದೆಯೇನೋ ಎನ್ನುವಷ್ಟು ಸೂಕ್ಷ್ಮವಾಗಿದ್ದಾಳೆ. ಎಷ್ಟೊಂದು ಚೂಟಿಯಾಗಿರುವ ಇಂತಹ ಈ ಮುಗ್ಧ ಬಾಲೆಯನ್ನು ರೇಪ್ ಮಾಡಿ ಮರ್ಡರ್ ಮಾಡುತ್ತಾರೆಂದರೆ ಪಾತಕಿಗಳು ಇನ್ನೆಂಥ ಕ್ರೂರಿಗಳಿರಬೇಕು? ಅವರ ಹೃದಯ ಅದೆಷ್ಟು ಕಲ್ಲಾಗಿರಬೇಕು?

ಈ ಪುಟ್ಟ ಬಾಲೆಯ ಹೆಸರು ಕಲ್ಪನಾ. ಹುಬ್ಬಳ್ಳಿಯಿಂದ ಕೆಲವೇ ಮೈಲಿಗಳ ದೂರದಲ್ಲಿರುವ ಸಂಶಿ ಎಂಬ ಗ್ರಾಮದ ಶ್ರೀಮತಿ ರತ್ನವ್ವ ಮತ್ತು ಅಶೋಕ ರೊಟ್ಟಿಗವಾಡ ಎಂಬ ದಂಪತಿಗಳ ಏಕೈಕ ಮುದ್ದಿನ ಮಗಳು. ಬಡತನವನ್ನೇ ತಿಂದುಂಡು ಬದುಕುತ್ತಿರುವ ಕಲ್ಪನಾಳ ತಂದೆತಾಯಿಗಳು ಕೃಷಿಗಾಗಿ ತುಂಡು ಭೂಮಿಯಿಲ್ಲದೇ ಬೇರೆಯವರ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಾ ಜೀವನ ಸಾಗಿಸಿದ್ದರು. ಜೀವನ ಸಾಗಿಸುವುದೇ ಒಂದು ದೊಡ್ಡ ಸವಾಲಾಗಿದ್ದರೂ, ಭವಿಷ್ಯವೇ ಶೂನ್ಯದಂತಿದ್ದರೂ ಕಲ್ಪನಾಳಲ್ಲಿಯೇ ಬದುಕಿನ ಭರವಸೆಯನ್ನು ಕಂಡು ಬೆವರು ಹರಿಸುತ್ತಿದ್ದರು. ತಾವು ಅರೆಹೊಟ್ಟೆಯಲ್ಲಿ ಹಸಿವಿನೊಂದಿಗೆ ಬದುಕುತ್ತಿದ್ದರೂ ಮಗಳಿಗೆ ಯಾವ ಕೊರತೆಯನ್ನೂ ಮಾಡಿರಲಿಲ್ಲ. ಮಗಳಿಗಾಗಿ ಸರ್ವಸ್ವವನ್ನೇ ತ್ಯಾಗ ಮಾಡಲು ಸಿದ್ಧರಿದ್ದರು. ನಾಳೆ ಮಗಳು ಬೆಳೆದು ದೊಡ್ಡವಳಾಗಿ ತಮ್ಮ ಬದುಕಿನಲ್ಲಿ ಬೆಳಕು ತರುತ್ತಾಳೆಂದು ಕನಸು ಕಂಡಿದ್ದರು. ಆದರೆ, ಇಂತಹದ್ದೊಂದು ಕರಾಳ ದಿನ ಎದುರಾಗುತ್ತದೆಂದು ಪ್ರಾಯಶಃ ಅವರು ಎಂದೂ ಎಣಿಸಿರಲಿಕ್ಕಿಲ್ಲ. ಆ ದಿನ ಎದುರಾಗಿಬಿಟ್ಟಿತು.


ಕಲ್ಪನಾಳ ತಂದೆ-ತಾಯಿ

ಇದೇ ಜನವರಿ ಹದಿನಾಲ್ಕರಂದು ಇಡೀ ರಾಜ್ಯ ಸಂಕ್ರಾಂತಿಯ ಸಂಭ್ರಮದಲ್ಲಿದ್ದಾಗಲೇ ಅತ್ತ ಸಂಶಿ ಗ್ರಾಮದ ಗುಡಿಸಲ್ಲೊಂದರಲ್ಲಿ ಕಲ್ಪನಾ ಕಾಮುಕರ ಕೈಯಲ್ಲಿ ಛಿದ್ರವಾಗುತ್ತಿದ್ದಳು!

ಅಪ್ಪ-ಅವ್ವರ ಅಕ್ಕರೆಯಿಂದಾಗಿಯೇ ಆಕೆ ತನ್ನ ವಯಸ್ಸಿನ ಇತರ ಹುಡುಗಿಯರಿಗಿಂತ ತುಸು ಸುಂದರವಾಗಿಯೇ ಇದ್ದಳು. ಆಕೆಯ ಲವಲವಿಕೆಯಿಂದಾಗಿಯೇ, ಎಲ್ಲರೊಂದಿಗೆ ಸಲೀಸಾಗಿ ಬೆರೆಯುವ ಆಕೆಯ ಗುಣದಿಂದಲೇ ಸಂಶಿಯ ಅಗಸಿ ಪ್ಯಾಟಿಯಲ್ಲಿ ಆಕೆಯನ್ನು ಅರಿಯದವರಿಲ್ಲ ಎನ್ನುವಷ್ಟರಮಟ್ಟಿಗೆ ಎಲ್ಲರಿಗೂ ಚಿರಪರಿಚಿತಳಾಗಿಬಿಟ್ಟಿದ್ದಳು. ದಿನಾಲು ಅಂಗನವಾಡಿಗೆ ಹೋಗಿ ಅಕ್ಷರ ಕಲಿಯುವುದು, ಮನೆಗೆ ಮರಳಿ ಬಂದು ಅವ್ವ ತನಗಾಗಿ ತೆಗೆದಿಟ್ಟದ್ದ ರೊಟ್ಟಿ ತಿಂದು ಅಪ್ಪ-ಅವ್ವ ಹೊಲದಿಂದ ಮನೆಗೆ ಬರುವ ತನಕ ಅಕ್ಕಪಕ್ಕದ ಗೆಳೆಯ-ಗೆಳತಿಯೊಂದಿಗೆ ಆಟವಾಡಿಕೊಂಡಿರುವುದು ಆಕೆಯ ದಿನಚರಿ.

ಅವತ್ತು ಸಂಕ್ರಾಂತಿಯ ದಿನ. ಎಂದಿನಂತೆ ಆಕೆ ಮನೆಯಂಗಳದಲ್ಲಿ ಆಟವಾಡಿಕೊಂಡಿದ್ದಳು. ಸಂಕ್ರಾಂತಿಯ ಹಬ್ಬದಲ್ಲಿ ಹತ್ತಿರದ ಕೆರೆಗೋ, ಬಾವಿಗೋ, ನದಿಗೋ ಹೋಗಿ ವಿಶೇಷ ಸ್ನಾನ ಮಾಡಿಬರುವುದು ವಾಡಿಕೆ. ಅವತ್ತೂ ಕೂಡ ಸಂಶಿ ಗ್ರಾಮದ ಕೆಲ ಹುಡುಗರು ನದಿಗೆ ಈಜಾಡಲು ಹೋಗಿದ್ದಾಗ ಒಬ್ಬ ಆಕಸ್ಮಾತ್ತಾಗಿ ನೀರಿನಲ್ಲಿ ಮುಳುಗಿ ಸತ್ತು ಹೋಗಿದ್ದ. ಆತನ ಹೆಣವನ್ನು ಸಂಜೆ ಊರಿಗೆ ತಂದಾಗ ಊರಿನ ಜನರೆಲ್ಲರೂ ಅಲ್ಲಿ ನೆರೆದಿದ್ದರು. ಕಲ್ಪನಾಳ ಓಣಿಯವರೂ ಸಂಜೆ ನಾಲ್ಕೂವರೆಗೆ ಅಲ್ಲಿಗೆ ಹೋದವರು ಮರಳಿ ಬಂದಾಗ ಸಂಜೆ ಆರು ಗಂಟೆಯಾಗಿತ್ತು.

ಸಂಕ್ರಮಣದ ಸಂಧ್ಯಾಕಾಲದಲ್ಲಿ ಕಲ್ಪನಾ ಒಬ್ಬಂಟಿಯಾಗಿ ತನ್ನ ಪಾಡಿಗೆ ತಾನಿದ್ದ ಸಮಯದಲ್ಲಿಯೇ ಕ್ರೂರಿ ಕಾಮುಕ ಹಂತಕ ಅವಳ ಮೇಲೆರಗಿದ್ದಾನೆ. ಆಕೆಯನ್ನು ಹರಿದು ಮುಕ್ಕುವುದಕ್ಕೆ ಆತನಿಗೆ ಒಂದೂವರೆ ಗಂಟೆ ಬೇಕಾದಷ್ಟಾಗಿತ್ತು.

ಸಂಜೆಯ ಹೊತ್ತಿಗೆ ಹೊಲದಲ್ಲಿ ಕೂಲಿ ಕೆಲಸ ಮುಗಿಸಿಕೊಂಡು ಮಗಳ ಮುದ್ದಿನ ಮುಖವನ್ನು ನೋಡುವಾಸೆಯಿಂದ ಕಲ್ಪನಾಳ ಅಪ್ಪ ಅವ್ವ ಮನೆಗೆ ಬಂದರೆ ಕಲ್ಪನಾ ಪತ್ತೆಯೇ ಇಲ್ಲ. ಸಹಜವಾಗಿ ಗಾಬರಿಕೊಂಡ ಅವರು ಅಕ್ಕಪಕ್ಕದವರನ್ನು ಸೇರಿಸಿಕೊಂಡು ರಾತ್ರಿಯೆಲ್ಲಾ ಹುಡುಕಾಡಿದ್ದಾರೆ. ಎಲ್ಲಿಯೂ ಕಲ್ಪನಾ ಪತ್ತೆಯಿಲ್ಲ. ಮರುದಿನ ಬೆಳಗ್ಗೆ ಕಲ್ಪನಾಳ ಅವ್ವ ರತ್ನವ್ವ ಬಹಿರ್ದೆಸೆಗೆಂದು ಹಿತ್ತಲಿಗೆ ಹೋದಾಗಲೇ ಅವಳಿಗೆ ಕಲ್ಪನಾ ಸಿಕ್ಕಿದ್ದು, ಅದೂ ಶವದ ರೂಪದಲ್ಲಿ! ಭವಿಷ್ಯದ ಭರವಸೆಯ ಕುಡಿ ಅರೆಬೆತ್ತಲೆಯ ಆವಸ್ಥೆಯಲ್ಲಿ ಹೆಣವಾಗಿ ಸಿಕ್ಕರೆ ತಾಯಿಯಾದವಳ ಪರಿಸ್ಥಿತಿ ಹೇಗಿರಬೇಡ? ಅವಳ ರೋದನಕ್ಕೆ ಇಡೀ ಊರೇ ಸೇರಿಕೊಂಡುಬಿಟ್ಟಿತು. ಕಲ್ಪನಾಳನ್ನು ಎಲ್ಲರೂ ಎತ್ತಿಕೊಂಡು ಮುದ್ದಾಡಿಬಿಟ್ಟರು. ಇದರಿಂದ ಕಲ್ಪನಾಳ ಮೈಮೇಲೆ ಸಿಗಬಹುದಾಗಿದ್ದ ಹಂತಕನ ಬೆರಳಚ್ಚುಗಳೂ ನಾಶವಾಗಿ ಹಂತಕನ ಕನಿಷ್ಠ ಸುಳಿವೂ ಸಿಗದಂತಾಯಿತು.


ಕಲ್ಪನಾ

ಕಲ್ಪನಾಳ ದೇಹದ ಮೇಲಿದ್ದ ಪರಚಿದ ಗಾಯಗಳು, ಅರೆಬೆತ್ತಲಾಗಿ ಬಿದ್ದಿದ್ದ ಅವಳ ದೇಹ, ತಲೆಯ ಮೇಲೆ ಕಲ್ಲಿನಿಂದ ಜಜ್ಜಿದ್ದ ಗಾಯ, ಕುತ್ತಿಗೆಯ ಸುತ್ತ ವಿದ್ಯುತ್ ವೈರಿನಿಂದ ಬಿಗಿದ ಗುರುತು – ಹಂತಕನ ಕ್ರೌರ್ಯವನ್ನು ಬಿಚ್ಚಿ ಬಿಚ್ಚಿ ಹೇಳುತ್ತಿದ್ದವು; ಕಲ್ಪನಾ ಅನುಭವಿಸಿದ ನರಕಕ್ಕೆ ಜೀವಂತ ಸಾಕ್ಷಿಯಾಗಿದ್ದವು.

ಅಜ್ಜಿಯೂ ಸಾಥ್ ನೀಡಿದಳೆ?

ಸ್ವಂತ ಮಕ್ಕಳಿಗಿಂತಲೂ ಮೊಮ್ಮಕ್ಕಳನ್ನು ಕಂಡರೆ ಅಜ್ಜಅಜ್ಜಿಯರಿಗೆ ಪಂಚಪ್ರಾಣ. ಆದರೆ, ಕಲ್ಪನಾಳ ವಿಚಾರದಲ್ಲಿ ಅದು

ಚಿಕ್ಕಮಗಳೂರು: ಕಾಂಗ್ರೆಸ್ ಈಗಲಾದರೂ ಬುದ್ಧಿ ಕಲಿಯುತ್ತದೆಯೆ?

ಚಿಕ್ಕಮಗಳೂರಿನ ಜಿಲ್ಲಾ ಕಾಂಗ್ರೆಸ್‌ಗೆ ಅಂಟಿಕೊಂಡ ಶನಿ ಇನ್ನೂ ತೊಲಗಿಲ್ಲ. ನಾಲ್ಕು ಲೋಕಸಭಾ ಚುನಾವಣೆಗಳು, ಎರಡು ವಿಧಾನಸಭಾ ಚುನಾವಣೆ ಕಳೆದು ಹೋದರೂ ಕಾಂಗ್ರೆಸ್ ಆಕ್ಸಿಜನ್ ಇಲ್ಲದೇ ಒದ್ದಾಡುತ್ತಿದೆ. ಒಂದು ಕಾಲದಲ್ಲಿ ಇಲ್ಲಿನ ಎಲ್ಲಾ ಪಕ್ಷಗಳ ತೂಕ ಒಂದು ಕಡೆಗಿದ್ದರೆ, ಕಾಂಗ್ರೆಸ್‌ನ ತೂಕವೇ ಮತ್ತೊಂದು ಕಡೆಗೆ ವಿರಾಜಮಾನವಾಗಿರುತ್ತಿತ್ತು. ಅದೆಲ್ಲಾ ಈಗ ಬರೀ ನೆನಪು.


ಪಕ್ಷ ಯಾವುದೇ ಇರಲಿ, ಒಬ್ಬ ಪರಿಪಕ್ವ ಮತ್ತು ಸಮರ್ಥ ನಾಯಕನನ್ನು ಗುರುತಿಸಿ ಬೆಳೆಸಲು ಸಾಮೂಹಿಕವಾಗಿ ಪ್ರಯತ್ನಿಸಿದರೆ ಪಕ್ಷವೂ ತನ್ನಿಂದ ತಾನೇ ಬೆಳೆಯುತ್ತದೆ. ಆದರೆ, ಚಿಕ್ಕಮಗಳೂರಿನ ಜಿಲ್ಲಾ ಕಾಂಗ್ರೆಸ್‌ನಲ್ಲಿ ನಾಯಕರೇ ಜಾಸ್ತಿಯಿದ್ದು ಒಂಥರಾ 'ತಲೆಭಾರ' ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಒಬ್ಬರ ಕಾಲನ್ನು ಮತ್ತೊಬ್ಬರು ಎಳೆಯುವ ಕಾಂಗ್ರೆಸ್‌ನ ರಕ್ತಗತ ಗುಣವೇ ಇವತ್ತು ಆ ಪಕ್ಷ ಜಿಲ್ಲೆಯಲ್ಲಿ ಸಂಪೂರ್ಣ ನೆಲಕಚ್ಚುವಂತೆ ಮಾಡಿಬಿಟ್ಟಿದೆ.


ಚಂದ್ರೇಗೌಡ

ಡಿ.ಬಿ.ಚಂದ್ರೇಗೌಡ, ಡಿ.ಎಂ. ಪುಟ್ಟೇಗೌಡ, ಬಿ.ಎಲ್. ಶಂಕರ್, ಡಿ.ಕೆ.ತಾರಾದೇವಿ, ಮೋಟಮ್ಮ, ಸಗೀರ್ ಅಹಮ್ಮದ್, ಕೆ.ಬಿ.ಮಲ್ಲಿಕಾರ್ಜುನ, ಕೆ.ಎಂ. ಕೃಷ್ಣಮೂರ್ತಿ, ಶಿವಶಂಕರಪ್ಪ ಈಗಾಗಲೇ ಕಾಂಗ್ರೆಸ್‌ನ ನಾಯಕರೆಂದು ಲೇಬಲ್ ಹಚ್ಚಿಕೊಂಡಿದ್ದರೆ ಟಿ.ಡಿ.ರಾಜೇಗೌಡ, ಎ.ಎನ್. ಮಹೇಶ್, ಕೆ.ಮಹಮ್ಮದ್, ಬಿ.ಎಲ್. ರಾಮದಾಸ್, ಎಂ.ಎಲ್.ಮೂರ್ತಿಯಂಥವರೂ ಕೂಡ ತಾವೇನೂ ಕಡಿಮೆಯಿಲ್ಲ ಎಂದು ಕಾಲರ್ ಸರಿಪಡಿಸಿಕೊಳ್ಳುತ್ತಿದ್ದಾರೆ. ಐನೂರು ಓಟು ಪಡೆಯುವಷ್ಟು ತಾಕತ್ತಿರದ ಇಂಥ ಪುಟಗೋಸಿಗಳಿಂದಲೇ ಈಹೊತ್ತು ಕಾಂಗ್ರೆಸ್ ನೆಲಕಚ್ಚಿ ಇಡೀ ಜಿಲ್ಲೆ ಬಿಜೆಪಿಮಯವಾಗಿಹೋಗಿದೆ.

1978 ರಲ್ಲಿ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ತುರ್ತು ಪರಿಸ್ಥಿತಿಯ ನಂತರ ಸಂಕಟಕಾಲದಲ್ಲಿದ್ದ ಅವರನ್ನು ಇಲ್ಲಿನ ಜನ ಆಲಂಗಿಸಿಕೊಂಡೇ ಗೆಲ್ಲಿಸಿದ್ದರು. ಅವತ್ತಿನ ದಿನಗಳಲ್ಲಿ ಶ್ರೀಮತಿ ಇಂದಿರಾ ಗಾಂಧಿಗೆ ರಾಜಕೀಯ ಪುನರ್‌ಜನ್ಮ ನೀಡಿದ ಕ್ಷೇತ್ರ ಇದೆಂದು ಜನ ಮಾತಾಡಿಕೊಂಡಿದ್ದರು. ಜಿಲ್ಲೆಯಲ್ಲಿರುವ ಅಷ್ಟೂ ವಿಧಾನಸಭಾ ಕ್ಷೇತ್ರಗಳಲ್ಲೂ ತನ್ನ ಪಾರುಪತ್ಯ ಸಾಧಿಸಿ ಎಗ್ಗಿಲ್ಲದೆ ಮೆರೆದಾಡುತ್ತಿದ್ದ ಕಾಂಗ್ರೆಸ್ ಅಂದು ಚುನಾವಣೆಗಳಲ್ಲಿ ರಣತಂತ್ರ ಹೆಣೆಯಬೇಕಾಗಿಯೇ ಇರಲಿಲ್ಲ. ಗಾಂಧಿ ಮನೆತನದ ವರ್ಚಸ್ಸು ಜಿಲ್ಲೆಯನ್ನು ಆ ಮಟ್ಟದಲ್ಲಿ ಇಟ್ಟಿತ್ತು. ಕಾಂಗ್ರೆಸ್‌ನ ಅಭೇದ್ಯ ಭದ್ರಕೋಟೆಯಾಗಿ ಚಿಕ್ಕಮಗಳೂರು ರಾಷ್ಟ್ರೀಯ ವಲಯದಲ್ಲಿ ಹೆಸರುಗಳಿಸಿತ್ತು.

ಆದರ್ಬಾರು ಹಾಗೇ ಮುಂದುವರೆಯುತ್ತದೆಂದು ಪ್ರಾಯಶಃ ಕಾಂಗ್ರೆಸ್ಸಿನ ದಂಡಪಿಂಡಗಳು ಎಣಿಸಿರಬೇಕು. ಅದಕ್ಕಾಗಿಯೇ ಕಂಠಪೂರ್ತಿ ತಿಂದುಂಡು ಕುಂಭಕರ್ಣನಂತೆ ನಿದ್ರೆ ಮಾಡಲಾರಂಭಿಸಿದರು. ಇವರಿಗೆ ಎಚ್ಚರವಾಗುವುದರೊಳಗೆ ಬಿಜೆಪಿಯ ಚಡ್ಡಿಗಳು ಇಡೀ ಜಿಲ್ಲೆಯನ್ನು ಆಕ್ರಮಿಸಿಕೊಂಡು ಕಾಂಗ್ರೆಸ್ಸಿಗರನ್ನು ಫುಟ್‌ಪಾತ್‌ಗೆ ತಳ್ಳಿಬಿಟ್ಟರು.


ಬಿ.ಎಲ್.ಶಂಕರ್

1978ರ ನಂತರದಿಂದ ಕಾಂಗ್ರೆಸ್‌ನ ಮುಖಂಡರು ಪರಸ್ಪರ ಮುಖ ತಿರುಗಿಸಿಕೊಳ್ಳತೊಡಗಿದರು. 1996ರಲ್ಲಿ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿಯವರನ್ನು ತಂದು ಜಿಲ್ಲೆಯಲ್ಲಿ ಅಭ್ಯರ್ಥಿಯಾಗಿಸಿದ ಮೇಲಂತೂ ಕಾಂಗ್ರೆಸ್ ಜಿಲ್ಲೆಯಿಂದ ಹಂತಹಂತವಾಗಿ ಸಂಪೂರ್ಣ ಹಿಡಿತ ಕಳೆದುಕೊಳ್ಳತೊಡಗಿತು. ಅವತ್ತು ಡಿ.ಕೆ.ತಾರಾದೇವಿ ಸಿದ್ಧಾರ್ಥರಿಗೆ ಲೋಕಸಭಾ ಟಿಕೆಟ್ ಕೊಡುವುದಾಗಿ ನಂಬಿಸಿ ಧರಂಸಿಂಗ್ ವಂಚಿಸದೇ ಹೋಗಿದ್ದಿದ್ದರೆ ಬಹುಶಃ ಕಾಂಗ್ರೆಸ್ ಇವತ್ತು ಈ ಸ್ಥಿತಿಗಿಳಿಯುತ್ತಿರಲಿಲ್ಲ. ಡಿ.ಕೆ.ತಾರಾದೇವಿ ಬಿಜೆಪಿಗೆ ಹಾರಿದರು. ನಂತರ ಬಿಜೆಪಿಯನ್ನು ಹಿಡಿದು ನಿಲ್ಲಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಇಂದು ಕಾಂಗ್ರೆಸ್ ಹೇಳಿಕೊಳ್ಳಲಿಕ್ಕೆ ಜಿಲ್ಲೆಯಲ್ಲಿ ಇರುವುದು ಕೇವಲ ಒಂದೇ ಒಂದು ವಿಧಾನಸಭಾ ಕ್ಷೇತ್ರ. ಅದು ಕೂಡ ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗ ಕೆ.ಎಂ.ಕೃಷ್ಣಮೂರ್ತಿಯ ಕಡೂರು ಕ್ಷೇತ್ರ. ಒಂದು ವೇಳೆ ಸಿದ್ದರಾಮಯ್ಯ ಕಾಂಗ್ರೆಸ್ ತೆಕ್ಕೆಯಿಂದ ಬಿಡಿಸಿಕೊಂಡಿದ್ದೇ ಆದರೆ ಕೃಷ್ಣಮೂರ್ತಿ ರಾಜಿನಾಮೆ ಕಟ್ಟಿಟ್ಟಬುತ್ತಿ. ಆಗ ಕಾಂಗ್ರೆಸ್‌ಗೆ ಲಬೋ ಲಬೋ ಅನ್ನೋದು ಬಿಟ್ಟು ಬೇರೆ ಕೆಲಸ ಇರೋದಿಲ್ಲ.

ಈಗ ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದೆ. ಬಿಜೆಪಿ ಜಿಲ್ಲೆಯ ಮೇಲಿರುವ ಪಟ್ಟನ್ನು ಸಡಿಲಗೊಳಿಸಕೂಡದೆಂದು ರಣತಂತ್ರ ಹೆಣೆಯುತ್ತಿದ್ದರೆ ಕಾಂಗ್ರೆಸ್ ಅಂಗಾತ ಮಲಗಿ ಮಸಾಜ್ ಮಾಡಿಸಿಕೊಳ್ಳುತ್ತಿದೆ. ಬಿಜೆಪಿ ಹಿಂದೂ ಮುಸ್ಲಿಮರ ಭಾವೈಕ್ಯತೆಯನ್ನು ಕೆಡಿಸಿ, ಜನರಲ್ಲಿ ಕೋಮುದ್ವೇಷ ಹಚ್ಚಿ ಓಟುಗಳಿಸುವ ತಂತ್ರ ಹೆಣೆಯುತ್ತಿದ್ದರೆ ಕಾಂಗ್ರೆಸ್‌ನ ನಾಯಕರು ಚುನಾವಣೆಗಾಗಿ ಕನಿಷ್ಠ ತಯಾರಿ ಮಾಡಿಕೊಳ್ಳದೇ ಕನ್ನಡಿ ಮುಂದೆ ನಿಂತು ಮೇಕಪ್ ಮಾಡಿಕೊಳ್ಳುತ್ತಿದ್ದಾರೆ. ಬಿಜೆಪಿಗೆ ಕನಿಷ್ಠ ಜನಪರ ಕಾಳಜಿಯಿಲ್ಲ. ಗೊಬ್ಬರ ಕೇಳಿದ ಹಾವೇರಿ ರೈತನಿಗೆ ಗುಂಡು ಹೊಡೆದು ಕೊಂದದ್ದರಿಂದ ಹಿಡಿದು ಇಲ್ಲಿಯತನಕ ಬಿಜೆಪಿ ಸರ್ಕಾರ ಜನರ ಮೇಲೆ ಮಾಡಬಾರದಷ್ಟು ದೌರ್ಜನ್ಯ ಮಾಡಿದೆ, ನಡೆಸಬಾರದಷ್ಟು ಭ್ರಷ್ಟಾಚಾರಗಳನ್ನು ನಡೆಸಿದೆ, ಪ್ರಜಾತಾಂತ್ರಿಕ ಮೌಲ್ಯಗಳಿಗೆ ತಿಲಾಂಜಲಿಯಿಟ್ಟು ಜನಪ್ರತಿನಿಧಿಗಳನ್ನು ಮಾರ್ಕೆಟ್‌ನಲ್ಲಿರುವ ತರಕಾರಿಗಳಂತೆ ಖರೀದಿಸಿ ಸಂವಿಧಾನಕ್ಕೇ ಅಪಚಾರವೆಸಗಿದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಕಿಂಚಿತ್ತೂ ಯೋಚಿಸದೇ ಭಗವದ್ಗೀತೆ ಪಠಣ ಮಾಡುತ್ತಿದೆ. ಕಾಂಗ್ರೆಸ್ ಒಂದು ಸಮರ್ಥ ಪಕ್ಷವಾಗಿದಿದ್ದರೆ ಇದನ್ನೆಲ್ಲಾ ಸರಿಯಾಗಿ ಬಳಸಿಕೊಂಡು ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಮಣ್ಣು ತಿನ್ನಿಸಬಹುದಿತ್ತು. ಆದರೆ, ಆ ಗಡಸುತನ, ಬಿರುಸುತನ, ಡೈನಾಮಿಸಂ ಅದಕ್ಕೆ ಬೇಕಲ್ಲ?


ತಾರಾದೇವಿ

ಈ ಸಲದ ಲೋಕಸಭಾ ಚುನಾವಣೆಯು ಜಿಲ್ಲೆಯಲ್ಲಿ ಎಲ್ಲಾ ಪಕ್ಷಗಳಿಗೂ ಡೋಲಾಯಮಾನ ಸ್ಥಿತಿ ತರಬಹುದು. ಯಾಕೆಂದರೆ ಕ್ಷೇತ್ರ ಪುನರ್ ವಿಂಗಡಣೆಯಿಂದ ಕಡೂರು ವಿಧಾನಸಭಾ ಕ್ಷೇತ್ರವನ್ನು ಹಾಸನಕ್ಕೆ ಸೇರಿಸಿ ಉಡುಪಿ ಜಿಲ್ಲೆಯ ಕಾಪು, ಕುಂದಾಪುರ, ಕಾರ್ಕಳ, ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೊತೆಗೆ ಚಿಕ್ಕಮಗಳೂರು, ಶೃಂಗೇರಿ, ಮೂಡಿಗೆರೆ ಮತ್ತು ತರೀಕೆರೆ ಒಟ್ಟು ಸೇರಿಸಿ ಎಂಟು ವಿಧಾನಸಭಾ ಕ್ಷೇತ್ರಗಳಿರುವ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರವನ್ನು ಅಸ್ತಿತ್ವಕ್ಕೆ ತರಲಾಗಿದೆ. ಇಲ್ಲಿ ಸ್ಪರ್ಧಿಸಿ ಗೆಲ್ಲಬೇಕೆಂದರೆ ಸ್ವಂತ ವರ್ಚಸ್ಸಿನೊಂದಿಗೆ ಪಕ್ಷದ ಮತವೂ ಅಮೂಲ್ಯವೆನಿಸುತ್ತದೆ.

ಜಿಲ್ಲೆಯಲ್ಲಿ ಇಂದು ಕಾಂಗ್ರೆಸ್‌ನಲ್ಲಿ ಎರಡು, ಮೂರು ಬಣಗಳಿವೆ. ಒಂದು ಡಿ.ಕೆ. ತಾರಾದೇವಿಯವರದು ಇನ್ನೊಂದು ಡಿ.ಎಂ. ಪುಟ್ಟೇಗೌಡರದು ಮತ್ತೊಂದು ಬಿ.ಎಲ್. ಶಂಕರ್‌ರವರದು. ಈ ಮೂವರೊಂದಿಗೆ ಡಿ.ಬಿ. ಚಂದ್ರೇಗೌಡ ಕೂಡ ಈ ಬಾರಿಯ ಲೋಕಸಭಾ ಟಿಕೆಟ್ ಆಕಾಂಕ್ಷಿ ಪಟ್ಟಿಯಲ್ಲಿದ್ದಾರೆ. ಅದಲ್ಲದೆ ಉಡುಪಿ ಭಾಗದಿಂದ

ುಗುಮುರುಗಾಗಿತ್ತು. ಕಲ್ಪನಾಳಂಥ ಚೋಟಿ ುಡುಗಿಯನ್ನು ಕಂಡು ಇಡೀ ಸಂಶಿ ಗ್ರಾಮಕ್ಕೆ ುಮವೇ ಅತ್ಯಂತ ಅಕ್ಕರೆಯಿಂದ ನೋಡುತ್ತಿತ್ತು ುಬುದು ಎಷ್ಟು ಸತ್ಯವೋ ಕಲ್ಪನಾ ತನ್ನ ಸ್ವಂತ ್ಜಗೆ ಬೇಡವಾಗಿದ್ದಳು ಎಂಬುದೂ ಅಷ್ಟೇ ಸತ್ಯ. ೀರಾಗಿ ಮುತ್ತಿಕ್ಕಿದರೂ ೀವಾಗುತ್ತದೆಯೇನೋ ಎಂಬಷ್ಟು ನಾಜೂಕಾಗಿದ್ದ ್ಪನಾಳಿಗೆ ಅಜ್ಜಿ ಗೌರಮ್ಮ ದನಕ್ಕೆ ಬಡಿಯುವಂತೆ ಡಿಯುತ್ತಿದ್ದುದು ಇದಕ್ಕೆ ಜೀವಂತ ಸಾಕ್ಷಿಯಾಗಿತ್ತು. ಷ್ಟು ಸತ್ಯವೋ, ಎಷ್ಟು ಮಿಥ್ಯವೋ ಗೊತ್ತಿಲ್ಲ. ್ಪನಾಳನ್ನು ಹರಿದು ಮುಕ್ಕುವ ಕಾಮುಕನೊಂದಿಗೆ ರಮ್ಮಳೂ ಸಾಥ್ ನೀಡಿದ್ದಳೆಂಬುದು ರಾಡುವ ಮಾತು.

ಕಲ್ಪನಾ ಕೊಲೆಯಾಗುವ ಹದಿನೈದು ದಿನಗಳ ುದಷ್ಟೇ ತಾಯಿ ರತ್ನವ್ವಳ ಬಂಗಾರದ ಸರ ುವಾಗಿತ್ತು. ಅದರಲ್ಲಿ ರಮ್ಮಳೂ ಮೀಲಾಗಿದ್ದಾರೆಂಬುದು ್ಪವಾಗಿದ್ದ ಕಾರಣ ಕಲ್ಪನಾಳ ದೆ-ತಾಯಿ ಪೊಲೀಸರಿಗೆ ್ಲೇಂಟ್ ಕೂಡ ಟ್ಟಿರಲಿಲ್ಲ. ಅದೂಅಲ್ಲದೇ ್ನೊಂದಿಗೆ, ತನ್ನ ಡತಿಯೊಂದಿಗೆ ಾವಾಗಲೂ ಜಗಳವಾಡುತ್ತಿದ್ದ ರಮ್ಮನಿಂದ ಮುಕ್ತಿ ೆಯುವುದಕ್ಕಾಗಿ ಕಲ್ಪನಾಳ ್ಪ ಅಶೋಕ ಆ ಪುಟ್ಟ ನೆಯಲ್ಲಿಯೇ ಬೇರೆ ಸಂಸಾರ ಡಿಕೊಂಡಿದ್ದರು.



ಕಲ್ಪನಾಳ್ ಮನೆ

ಗೌರಮ್ಮ ಕೂಡ ಮಧ್ಯ ವಯಸ್ಸಿನವಳೆ. ಗಂಡ ುಬ್ಬಳ್ಳಿಯ ಪೆಟ್ರೋಲ್ ಬಂಕ್ ಒಂದರಲ್ಲಿ ಚ್‌ಮನ್ ಆಗಿ ಕೆಲಸ ಮಾಡುತ್ತಿದ್ದಾನೆ. ಅವಳ ಳಗಂಟತನಕ್ಕೆ ರೋಸಿಹೋದ ಆತ ಊರು ದಿನ ಬಂದು ಹೋಗಬಹುದಾದಷ್ಟು ್ತರವಿದ್ದರೂ ಆತ ಬರುತ್ತಿದ್ದುದು ಗಳಿಗೊಮ್ಮೆಯೋ ಅಥವ ಎರಡು ಗಳಿಗೊಮ್ಮೆಯೋ? ಸೊಸೆಯ ಬಂಗಾರದ ವನ್ನು ಗೌರಮ್ಮ ಕದ್ದಿರುವುದನ್ನು ಕಲ್ಪನಾ ೀಡಿರುವ ಸಾಧ್ಯತೆಯಿದ್ದು ಈ ಕಾರಣಕ್ಕಾಗಿಯೇ ರಿನ ಯಾವುದೋ ಕಾಮುಕನೊಂದಿಗೆ ುಲಾಗಿ ಕಲ್ಪನಾಳನ್ನು ಹೊಸಕಿಹಾಕಿದ್ದಾಳೆ ುಬುದು ಜನರ ತರ್ಕ. ಇದಕ್ಕೆ ಪುಷ್ಠಿ ಡುವಂತೆ ಗೌರಮ್ಮನ ರೂಮಿನಲ್ಲಿ ಕಲ್ಪನಾಳ ದ ಕಲೆಗಳು ಕಾಣಿಸುತ್ತವೆ. ಪೊಲೀಸರು ತನಿಖೆಗಾಗಿ ತಂದಿದ್ದ ಶ್ವಾನಗಳೂ ಕೂಡ ಗೌರಮ್ಮನ ರೂಮಿನ ಸುತ್ತಲೇ ತಿರುಗಾಡಿವೆ. ಅದೂಅಲ್ಲದೇ, ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಅಂಗನವಾಡಿಯಿಂದ ಬಂದಿದ್ದ ಕಲ್ಪನಾಳನ್ನು ಅಕ್ಕಪಕ್ಕದವರು ನೋಡಿದ್ದಾರೆ. ತನ್ನ ಓರಗೆಯವರೊಂದಿಗೆ ಆಟವಾಡುತ್ತಿದ್ದುದನ್ನು ಕಂಡವರಿದ್ದಾರೆ. ಅವರೆಲ್ಲಾ ನದಿಯಲ್ಲಿ ಬಿದ್ದು ಹೆಣವಾಗಿ ಬಂದಿದ್ದ ದುರಂತ ನೋಡಲು ಹೋಗುತ್ತಿದ್ದಂತೆಯೇ ಇತ್ತ ಈ ದುರಂತ ನಡೆದಿದೆ.

ಈ ಕ್ರೂರ ಅಪರಾಧಕ್ಕೆ ಗೌರಮ್ಮನೇ ಪ್ರತ್ಯಕ್ಷ ಸಾಕ್ಷಿಯಾಗಿದ್ದುದು ಬಹುತೇಕ ಖಚಿತ. ಅದರಲ್ಲಿ ಅವಳ ಪಾಲೆಷ್ಟಿದೆ ಎಂಬುದು ತನಿಖೆಯಿಂದ ಗೊತ್ತಾಬೇಕಿತ್ತು. ಅವಳು ಅಪರಾಧಿಯೋ, ನಿರಪರಾಧಿಯೋ ಎಂಬುದು ಸಾಬೀತಾಗಬೇಕಿತ್ತು. ನಿರಪರಾಧಿಯಾಗಿದ್ದರೆ ಕನಿಷ್ಠ ಅಪರಾಧಿಗಳನ್ನು ಹಿಡಿಯುವುದಕ್ಕಾದರೂ ಅವಳು ಸಹಕರಿಸಬಹುದಿತ್ತು. ಅದಕ್ಕಾಗಿಯೇ ಪೊಲೀಸರು ಆಕೆಯನ್ನು ಕರೆದು ವಿಚಾರಣೆ ನಡೆಸಿದ್ದರು.

ಆದರೆ ಆದಾಗುವಷ್ಟರಲ್ಲಿ ಮತ್ತೊಂದು ದುರಂತ ನಡೆದುಹೋಯಿತು. ಎರಡು ವಾರ ಕಳೆಯುವ ಮೊದಲೇ ಗೌರಮ್ಮ ಕೂಡ ಈಗ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಸ್ವಂತ ಮೊಮ್ಮಗಳನ್ನೇ ಅಮಾನುಷವಾಗಿ ಕೊಂದ ಪಾಪಪ್ರಜ್ಞೆಯೇ ಆಕೆಯನ್ನು ನೇಣಿಗೆ ಕೊರಳೊಡ್ಡುವಂತೆ ಪ್ರೇರೇಪಿಸಿತೆ? ಹಂತಕ ತಾನು ಬಚಾವಾಗುವುದಕ್ಕೆ ಇದ್ದ ಒಂದು ಸಾಕ್ಷಿಯನ್ನೂ ನೇಣಿಗೇರಿಸಿದನೆ? ಇವುಗಳಿಗಿನ್ನೂ ಉತ್ತರ ಸಿಕ್ಕಿಲ್ಲ.

ಆದರೆ, ಕರುಳಿನ ಕುಡಿ ಕಲ್ಪನಾಳಲ್ಲೇ ಭವಿಷ್ಯದ ಬೆಳಕನ್ನು ಕಂಡಿದ್ದ ರತ್ನವ್ವ-ಅಶೋಕ ದಂಪತಿಗಳ ಬದುಕೀಗ ಸಂಪೂರ್ಣವಾಗಿ ಕತ್ತಲಾಗಿ ಹೋಗಿದೆ. ತಮ್ಮ ಇಡೀ ಜೀವನದಲ್ಲಿ ಯಾರಿಗೂ ಅನ್ಯಾಯ ಮಾಡಿರದ ಆ ಶುದ್ಧ ದಂಪತಿಗಳಿಗೇಕೆ ಈ ಶಿಕ್ಷೆ?

■ ಹುಬ್ಬಳ್ಳಿಯಾಂವ

ಸ್ಕರ್ ಫರ್ನಾಂಡಿಸ್, ಬಿಜೆಪಿ ತೆಕ್ಕೆಯಿಂದ ವಾಪಸ್ಸು ಗ್ರೆಸ್‌ಗೆ ಹಿಂದಿರುಗಿರುವ ಮನೋರಮ ಮಧ್ವರಾಜ್ ರತ್ತು ನಡೆಸುತ್ತಿದ್ದಾರೆ. ಇದೀಗಷ್ಟೇ ಒಂದೆಡೆ ೋರಮಾರವರ ಪುತ್ರ ಪ್ರಮೋದ್ ಮಧ್ವರಾಜ್ ಗೂ ಇನ್ನೊಂದೆಡೆ ಮಾಜಿ ಮುಖ್ಯಮಂತ್ರಿ ಎಂ.ಕೃಷ್ಣರವರ ಸುಪುತ್ರಿ ಹಾಗೂ ಎ.ಬಿ.ಸಿ. ಕಂಪನಿಯು ್ಧಾರ್ಥರವರ ಪತ್ನಿಯೂ ಟಿಕೆಟ್‌ಗಾಗಿ ಕಸರತ್ತು ನಡೆಸಿದ್ದಾರೆ ದು ಕೇಳಿಬರುತ್ತಿದೆ. ಈಗಾಗಲೇ ಬಿಜೆಪಿ ನಿರ್ಧರಿಸಿರು ಿ ಅದರ ರಾಜ್ಯಾಧ್ಯಕ್ಷ ಸದಾನಂದಗೌಡ ಈ ಕ್ಷೇತ್ರದಿಂದ ್ಧಿಸುವುದು ಖಚಿತವಾದರೆ ಅವರಿಗೆ ಪ್ರಬಲ ಪೋಟಿ ಕೊಡುವ ಉತ್ಸಾಹಿಯನ್ನೇ ಕಾಂಗ್ರೆಸ್ ಆಯ್ಕೆ ಡಬೇಕಾಗುತ್ತದೆ ಮತ್ತು ಒಂದೇ ಪಕ್ಷದಲ್ಲಿದ್ದು ಹಲವು ಗಳಾಗಿರುವ ನಾಯಕರೆಲ್ಲರೂ ಒಗ್ಗೂಡಿ ಕೆಲಸ ಡಬೇಕಾದ ಅವಶ್ಯಕತೆ ಇದೆ. ಹೀಗಾಗಿ ಇವರೆಲ್ಲರನ್ನು ವೆಡೆ ಕುಳ್ಳಿರಿಸಿ ಒಮ್ಮತದ ತೀರ್ಮಾನ ಮಾಡಬೇಕಾಗಿರು ು ಮುಖ್ಯ ನಾಯಕರ ಕರ್ತವ್ಯವಾಗಿದೆ.

ಕೆಲವು ತಿಂಗಳುಗಳಿಂದ ಡಿ.ಕೆ. ತಾರಾದೇವಿ ಜನರ ವೆ ಗುರುತಿಸಿಕೊಳ್ಳುವ ಪ್ರಯತ್ನ ನಡೆಸತೊಡಗಿದ್ದಾರೆ. ರೆ ಉಳಿದ ಯಾರೊಬ್ಬರು ಕೂಡ ಜನಮತ ಕೊಳ್ಳುವ ಯಾವುದೇ ಪ್ರಯತ್ನವನ್ನು ಮಾಡುತ್ತಿಲ್ಲ. ಲ ತಮ್ಮ ಐಷಾರಾಮಿ ಕಾರುಗಳಲ್ಲಿ ತಿರುಗಾಡಿ ಮಾಂಡ್‌ನಲ್ಲಿ ಪಿತೂರಿ ನಡೆಸಿ ಟಿಕೆಟ್ ತಂದು ಬಹುದಾದ ಹುಂಬ ಸಾಹಸದಲ್ಲಿ ತೊಡಗಿಕೊಂಡಿದ್ದಾರೆ. ುಲ್ಲಿ ಕಾಂಗ್ರೆಸ್ ಇಂದು ಅತ್ಯಂತ ಸಂಕಟ ಮತ್ತು ಮಣ ಘಟ್ಟದಲ್ಲಿರುವುದು ಸತ್ಯ. ಕಾಂಗ್ರೆಸ್ಸಿನೊಳಗೇ ುಕರ ಕಚ್ಚಾಟ ಹೀಗೇ ಮುಂದುವರೆದರೆ ಮುಂದಿನ ವರ್ಷ ಮೇಲೇಳಲಾಗದಂತೆ ಮಕಾಡೆ ಮಲಗುತ್ತ ುದೂ ಅಷ್ಟೇ ಸತ್ಯ. ಲಿಂಗಾಯತ ನಾಯಕರೂ ನ ಜನರಿಗೆ ಪರಿಚಿತನೂ ಅಲ್ಲದ ಕೆ.ಬಿ. ಮಲ್ಲಿಕಾರ್ಜುನ ಪ್ರದರ್ಶನದ ಗೊಂಬೆಯನ್ನು ಜಿಲ್ಲಾಧ್ಯಕ್ಷರ ಗಾದಿಯಲ್ಲಿ ಿಸಲಾಗಿದೆ. ಈತ ಕಳೆದ ವಿಧಾನಸಭಾ ಚುನಾವಣೆ ಯಲ್ಲಿ ಚಿಕ್ಕಮಗಳೂರು ಕ್ಷೇತ್ರದಿಂದ ಸ್ಪರ್ಧಿಸಿ ಸಿ.ಟಿ. ರವಿ ಎಂಬ ಪುಟಗೋಸಿಯ ಮುಂದೆ ಸೋತು ಸುಣ್ಣವಾಗಿರುವ ದೊಡ್ಡ ಮನುಷ್ಯ.

ಡಿ.ಎಂ.ಪುಟ್ಟೇಗೌಡ ಹಾಗೂ ಡಿ.ಬಿ. ಚಂದ್ರೇಗೌಡರ ವರ್ಚಸ್ಸೂ ಕೂಡ ಮೊದಲಿದ್ದಂತಿಲ್ಲ. ಬಿ.ಎಲ್. ಶಂಕರ್, ಆಸ್ಕರ್ ಫರ್ನಾಂಡಿಸ್, ಮನೋರಮಾ ಮಧ್ವರಾಜ್ ಇವರಿಗೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಂಪರ್ಕವೇ ಸಿಕ್ಕಿಲ್ಲ. ಹೊಸ ಮುಖಗಳಿಗೆ ಎರಡು ಜಿಲ್ಲೆಯ ಜನರ ಪರಿಚಯವೇ ಇಲ್ಲ. ಇರುವವರಲ್ಲಿ ಎದ್ದು ಕಾಣಿಸುತ್ತಿರುವುದು ಶ್ರೀಮತಿ ಡಿ.ಕೆ. ತಾರಾದೇವಿ ಸಿದ್ಧಾರ್ಥ ಮಾತ್ರ. ಬಿಜೆಪಿಯಂಥ ಕೋಮುವಾದಿ ಪಕ್ಷಕ್ಕೆ ಲೋಕಸಭಾ ಚುನಾವಣೆಯಲ್ಲಿ ಹೆಡೆಮುರಿ ಕಟ್ಟುವುದಕ್ಕೆ, ಸದಾನಂದಗೌಡನಂಥ ಅರಳುಹುರಿ ಚಡ್ಡಿ ನಾಯಕನನ್ನು ಸದೆ ಬಡಿಯುವುದಕ್ಕೆ ಮಹಿಳಾ ರಾಜಕಾರಣಿ ತಾರಾದೇವಿ ಸಮರ್ಥ ಅಭ್ಯರ್ಥಿಯಾಗಬಲ್ಲರು.

ಹಿಂದೆ ತಾರಾದೇವಿ ಕೇಂದ್ರ ಆರೋಗ್ಯ ಸಹಾಯಕ ಮಂತ್ರಿಯಾಗಿದ್ದಾಗ ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಉತ್ತಮ ಕೆಲಸಗಳನ್ನೇ ಮಾಡಿದ್ದರು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ರಾಜಕೀಯ ಪಗಡೆ ಆಟದಲ್ಲಿ ಆಕೆ ದಾಳವಾಗಿ ಕಂಡುಬಂದಿದ್ದನ್ನು ಇವತ್ತಿಗೂ ಇಲ್ಲಿನ ಜನ ನೆನಪಿಸಿಕೊಳ್ಳುತ್ತಾರೆ.

ಹೀಗಾಗಿ ಕಾಂಗ್ರೆಸ್ ಈಗಲಾದರೂ ಕುಂಭಕರ್ಣ ನಿದ್ರೆಯಿಂದ ಎಚ್ಚರಗೊಳ್ಳಬೇಕಾಗಿದೆ. ತಮ್ಮೊಳಗಿರುವ ಕಚ್ಚಾಟವನ್ನು ನಾಯಕರು ನಿಲ್ಲಿಸಬೇಕಿದೆ. ಮುಂದಿನ ಲೋಕಸಭಾ ಚುನಾವಣೆಗೆ ಸೂಕ್ತ ರಣತಂತ್ರ ಹೆಣೆಯಬೇಕಿದೆ. ಕಳೆದುಕೊಂಡ ಕೋಟೆಯನ್ನು ಮತ್ತೆ ಬಿಜೆಪಿಯಿಂದ ಮರಳಿ ಪಡೆಯಬೇಕಿದೆ. ಇಲ್ಲದಿದ್ದರೆ ಕನಿಷ್ಠ ಮುಂದಿನ ಹತ್ತು ವರ್ಷ ಬೆಡ್‌ರೂಮ್ ಸೇರಿಕೊಳ್ಳಬೇಕಾಗುತ್ತದೆ.


■ ಅಜೀಜ್ ಕಿರುಗುಂದ

ಅಡ್ವಾಣಿ ಎಂಬುದು ಭಾರತದ ಸಮಸ್ಯೆ ಕಣ್ರಿ

ಇದ್ದಕ್ಕಿದ್ದಂತೆ ಎಡ್ಯೂರಪ್ಪನಿಗೆ ದೇವೇಗೌಡರ ಭೂತ ಅಮರಿಕೊಂಡಿದೆಯಂತಲ್ಲಾ, ಶಿವಮೊಗ್ಗ ಲೋಕಸಭಾ ಚುನಾವಣೆಗಾಗಿ ಆಯನೂರ್ ಮಂಜುನಾಥ್, ಭಾನುಪ್ರಕಾಶ್ ಎಂಬ ಸವಕಲು ಚಡ್ಡಿಗಳು ತಯಾರಿಯ ತಾಲೀಮು ನಡೆಸುತ್ತಿರುವಾಗಲೇ ತನ್ನ ಮಗನ ಹೆಸರು ಲೋಕಸಭಾ ಅಭ್ಯರ್ಥಿಯಾಗಿ ಚಲಾವಣೆಗೆ ಬರುವಂತೆ ಮಾಡಿಕೊಂಡಿದ್ದಾರಂತಲ್ಲಾ, ಆಯನೂರ್‌ಗೆ ಹೋರಾಟದ ಹಿನ್ನೆಲೆಯಿದೆ. ಒಮ್ಮೆ ಸಂಸತ್ ಸದಸ್ಯನಾದ ಅನುಭವವಿದೆ. ಶಾಸಕನಾಗಿದ್ದ ಅನುಭವವಿದೆ. ಭಾನುಪ್ರಕಾಶ್‌ನಿಗಂತೂ ಯಾರಿಗೂ ತಾಗದಂತೆ ಲಾಟಿ ಬೀಸಿದ ಅನುಭವವಿದೆ. ಇಂತಹ ದೊಡ್ಡ ಚಡ್ಡಿಗಳ ಎದುರು ಅನನುಭವಿ ಮಗನನ್ನು ಮುಂದೆ ನೂಕಿ, ಚುನಾವಣೆ ಪ್ರಚಾರವನ್ನೇ ಆರಂಭಿಸಿರುವ ಯಡ್ಡಿ ಕ್ಷೇತ್ರದ ಮಹಿಳೆಯರಿಗೆ ಎರಡು ಸಾವಿರ ರೂಪಾಯಿ ಬೆಲೆಬಾಳುವ ಸೀರೆ ಹಂಚಿದ್ದಾರಂತಲ್ಲಾ, ಶಿಕಾರಿಪುರದ ಕೆಲ ಮಹಿಳೆಯರು "ನಮ್ಮ ಮನೆಯಲ್ಲೂ ಸೀರೆಗಳಿವೆ. ಮೈತ್ರಾದೇವಿಯ ಹಳೆಯ ಸೀರೆ ಬೇಡ" ಎನ್ನಲಾಗಿ ಎಡೂರಿಯ ಚಡ್ಡಿ ಪಟಾಲಂ "ಇದು ಹಳೆ ಸೀರೆಯಲ್ಲ, ಕಾನ್ಪುರದಿಂದ ತರಿಸಿದ ಸೀರೆ. ಇದರ ಮೂಲ ಬೆಲೆ ಮೂರು ಸಾವಿರ ರೂಪಾಯಿ. ನಾವು ಸಾರಾಸಗಟು ಎಪ್ಪತ್ತು ಸಾವಿರ ಸೀರೆ ಕೊಳ್ಳಲಾಗಿ ಎರಡು ಸಾವಿರಕ್ಕೆ ಒಂದು ಸೀರೆ ಸಿಕ್ಕಿದೆ. ಇದು ಸಂಕ್ರಾಂತಿ ಉಡುಗೊರೆ" ಎಂದು ಕೊಟ್ಟುಹೋದರಂತಲ್ಲಾ, ಥೂತ್ತೇರಿ!

****

ಹೀಗೆ ಎಡೂರಪ್ಪ ಮನೆಮನೆಗೆ ಸೀರೆ ಹಂಚ ಹೋದ ಸುದ್ದಿ ಕೇಳಿದ ಕಾಗೋಡು ತಿಮ್ಮಪ್ಪ ಕಂಗಾಲಾಗಿದ್ದಾರಂತಲ್ಲಾ, "ನಾವೇನು ಕೊಡುವುದು? ಈ ಹಾಳು ಕಾಂಗ್ಯೆನಲ್ಲಿ ಬಿಜೆಪಿ, ಜೆಡಿಎಸ್‌ಗೆ ಸವಾಲೊಡ್ಡಿ ಖರ್ಚು ಮಾಡುವವರೇ ಇಲ್ಲವಲ್ಲಾ, ಎಡೂರಪ್ಪ ಎರಡು ಸಾವಿರ ರೂ.ಗಳ ಸೀರೆ ಕೊಟ್ಟರೆ ನಾವು ಕನಿಷ್ಠ ಒಂದು ರವಿಕೆಯನ್ನಾದರೂ ಕೊಡಬೇಕು. ಇಲ್ಲ ಬ್ರಾಗಳನ್ನಾದರೂ ಕೊಡದಿದ್ದರೆ ಹೇಗೆ?" ಎಂದು ಚಿಂತಾಕ್ರಾಂತರಾಗಿರುವಾಗಲೇ 'ಬಂ' ಇದ್ಯಾವುದಕ್ಕೂ ಕೇರ್ ಮಾಡದೆ "ಎಡೂರಪ್ಪನಿಂದ ಭಿಕ್ಷೆಪಡೆದವರನ್ನ ಕೆರಳಿಸಿ, ಸ್ವಾಭಿಮಾನ ಉಕ್ಕುವಂತೆ ಮಾಡಿ. ಅದನ್ನೆ ಓಟಾಗಿ ಪರಿವರ್ತಿಸಬೇಕೆ ಹೊರತು ಸೀರೆ ಬದಲು ರವಿಕೆ ಕೊಡಲು ಹೋಗಬಾರದು" ಎಂದು ತಮ್ಮ ಸುತ್ತಲೂ ಮುತ್ತಿದ್ದ ಮಾಜಿ ಸಾರಾಯಿ ಕಂಟ್ರಾಕ್ಟರ್ಸ್‌ಗಳಿಗೆ ಸಾಂತ್ವನ ಹೇಳಿದರಂತಲ್ಲಾ, ಇದರಿಂದ ಖುಷಿಯಾದ ಸಾರಾಯಿಗಳು "ಸಾಹೇಬರೇಳದು ಸರಿ" ಎಂದು ತಲೆದೂಗಿದವಂತಲ್ಲಾ, ಥೂತ್ತೇರಿ!



****

ವಿಶ್ವಮಾನವ ಸಂದೇಶದ ಕುವೆಂಪು ಯೂನಿವರ್ಸಿಟಿಯಲ್ಲಿ ಶಾನೆ ಸ್ವಾರಸ್ಯಕರವಾದ ಚರ್ಚೆಗಳು ನಡೆದಿವೆಯಂತಲ್ಲಾ, ಭಾರತದ ಜಾತಿಪದ್ಧತಿಯ ಉಗಮದಿಂದ ಹಿಡಿದು ಇವತ್ತಿನವರೆಗೆ ಎಲ್ಲಾ ಕಡತಗಳನ್ನು ಬೆಲ್ಜಿಯಂನಲ್ಲಿ ಕುಳಿತು, ಅರೆದು ಕುಡಿದುಕೊಂಡು ಬಂದಿರುವ ಅಗಸ್ತ್ಯಮುನಿಯಂತಹ ಬಾಲಗಂಗಾಧರ್ ಎತ್ತುವ ಪ್ರಶ್ನೆಗಳಿಗೆ ಎಲ್ಲಾ ವಿದ್ವಾಂಸರು ತತ್ತರಿಸಿ "ಇವನ ಸಹವಾಸವೇ ಬೇಡ" ಎಂದು ಪೇರಿ ಕೀಳುತ್ತಿದ್ದಾರಂತಲ್ಲಾ, ಆದರೆ ಕೃಷ್ಣಭಟ್ಟನೆಂಬ ಅಡ್ಡಿಡಿದ ಲಾರಿಯೊಂದು "ನಾನು ಬಾಲಗಂಗಾಧರನ ಬಾಯಿಮುಚ್ಚಿಸಿದೆ" ಎಂದು ಹೇಳಿಕೊಂಡು ತಿರುಗುತ್ತಿದ್ದಾನಂತಲ್ಲಾ, "ಹೇಗೆ ಆತನ ಬಾಯಿ ಮುಚ್ಚಿಸಿದ್ದಿರಿ ಭಟ್ಟರೆ?" ಎಂದು ಕೇಳಿದರೆ "ಏನಿಲ್ಲ, ಬಾಲಗಂಗಾಧರ ನಿಮ್ಮಲ್ಲಿ ಬುದ್ಧಿಜೀವಿಗಳೂ ಇಲ್ಲ, ವಿದ್ವಾಂಸರೂ ಇಲ್ಲ, ತತ್ವಜ್ಞಾನಿಗಳೂ ಇಲ್ಲ" ಎಂದರು. ಅದಕ್ಕೆ ನಾನು ನಮ್ಮ ಸಂಘದ ಪ್ರತಿಕಾರ್ಯಕರ್ತನೂ ಬುದ್ಧಿಜೀವಿ.

ಥೂತ್ತೇರಿ

■ ಯಾಹೂ

ನಮ್ಮ ಎಸ್.ಎಲ್. ಭೈರಪ್ಪ ಭಾರತ ಈವರೆಗೂ ಕಂಡರಿಯದ ವಿದ್ವಾಂಸ. ಗೋಳವಲ್‌ಕರ್ ತತ್ವಜ್ಞಾನಿ ಎಂದು ಹೇಳಿದ ಕೂಡಲೇ ಬಾಲಗಂಗಾಧರ ಬಾಲ ಅದುಮಿಕೊಂಡು ಓಡಿದ" ಎಂದು ಹೇಳುತ್ತ ತಿರುಗುತ್ತಿದ್ದಾರಂತಲ್ಲಾ, ಥೂತ್ತೇರಿ!!

******

ಇದರಿಂದ ಕೆಂಡಮಂಡಲವಾಗಿರುವ ದಲಿತ ಧ್ವನಿಗಳು "ಅಲ್ರೀ ಆ ಕೃಷ್ಣಭಟ್ಟ ಯಾರು? ಅವನ ಯೋಗ್ಯತೆ ಏನು? ತನ್ನ ಬದುಕಿನುದ್ದಕ್ಕೂ ವಿದ್ಯಾರ್ಥಿಗಳಿಂದ ಉಗಿಸಿಕೊಂಡು ಕಾಲಹಾಕಿರುವ ಅವನನ್ನು ಕುವೆಂಪು ಯೂನಿವರ್ಸಿಟಿಯ ವಿದ್ವತ್‌ಗೋಷ್ಠಿಗೆ ಕರೆಸಿ, ಅವನ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಕಳುಹಿಸಬೇಕಾದರೆ, ಈ ಬಾಲಗಂಗಾಧರ ಟೈಲ್ ಗಂಗಾಧರನಲ್ಲ, ಸ್ಟಿಕ್ ಗಂಗಾಧರ" ಎಂದರಂತಲ್ಲಾ, ಕುವೆಂಪು ಯೂನಿವರ್ಸಿಟಿ ಆವರಣದಲ್ಲೇ "ದಲಿತ ಹಿಂದುಳಿದ ಬುದ್ಧಿಜೀವಿಗಳೆಂದು" ಬೋರ್ಡು ಹಾಕಿಕೊಂಡಿರುವವರು ಗಲಭೆ ಎಬ್ಬಿಸಿಕೊಂಡು ಸುಮ್ಮನಾದರಂತಲ್ಲಾ, ಸದರಿ ಬಾಲಗಂಗಾಧರ ಬಾಲಗಳು "ದಲಿತರು ತಮ್ಮ ಬಗ್ಗೆ ಪೂರ್ವಗ್ರಹದಿಂದ ಕುದಿಯುತ್ತಿವೆ. ತಾವು ಇನ್ನು ಮುಂದಾದರೂ ತಮ್ಮ ಉದ್ದೇಶ, ಪರಿಣಾಮ ಇವುಗಳನ್ನು ವಿವರವಾಗಿ ತಿಳಿಸಿ ಗುರುಗಳೆ" ಎಂದು ಹೇಳಿದರಂತಲ್ಲಾ, ಇದನ್ನು ಕೇಳಿದ ಟೈಲ್ ಗಂಗಾಧರ್ ಶಾನೆ ಸಿಟ್ಟಿನಿಂದ "ಇವುರ್‍ಯಾವ ಸೀಮೆ ದಲಿತರ್ರಿ? ದೆಹಲಿಯಲ್ಲಿ ಕಕ್ಕಸ್ ಕ್ಲೀನ್ ಮಾಡ್ತಾಯಿರೊ ಜನಗಳಲ್ಲಿ ಎಂಭತ್ತು ಪರಸೆಂಟ್ ಬ್ರಾಹ್ಮಣರೇ ಇದ್ದಾರೆ. ಅವರನ್ನ ಏನಂತ ಕರಿಬೇಕು?" ಎಂದು ಕೆಂಡಮಂಡಲವಾದರಂತಲ್ಲಾ, ಥೂತ್ತೇರಿ!!

****

21 ನೇ ಶತಮಾನದ ವಾಲ್ಮೀಕಿ ವೀರಪ್ಪ ಮೊಯ್ಲಿಯವರನ್ನು ಮಾತನಾಡಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

ರಿಂಗ್‌ಟೋನ್: ದಶರಥನಂದನ ರಾಮಾ ಶ್ರೀರಾಮ ರಘುರಾಮ....

"ಹಲೋ ಯಾರು?"

"ನಾನು ಸಾರ್ ಯಾಹು ಅಂತ, ಪತ್ರಕರ್ತ."

"ಯಾವ ಪತ್ರಿಕೆ?"

"ಲಂಕೇಶ್."

"ನನಗೆ ಆ ಹೆಸರು ತುಂಬ ಇಷ್ಟ. ರಾವಣನಿಂದ ಕಲಿಯಬೇಕಾದ್ದು ತುಂಬವುಂಟು."

"ಅದಕ್ಕೆ ಸಾರ್ ಫೋನ್ ಮಾಡಿದ್ದು. ರಾವಣನಿಂದ ಕಲಿಯೋ ಅಂತದ್ದೇನು?"

"ಆತ ರಾಮನ ಹೆಂಡತಿ ಸೀತಾದೇವಿಯನ್ನು ತೆಕ್ಕೊಂಡು ಹೋಗಿ ಗೌರವದಿಂದ ನೋಡಿಕೊಂಡದ್ದು ಸಾಮಾನ್ಯ ವಿಷಯವಾ?"

"ಅವನಿಗೆ ರೇಪ್ ಇಷ್ಟ ಇರಲಿಲ್ಲ, ಅವಳಾಗೆ ಒಲಿಲಿ ಅಂತ ಸುಮ್ಮನಿದ್ದ."

"ಅದನ್ನೆ ನಾನು ಹೇಳುವುದು. ಅವನೆಷ್ಟು ವಿವೇಕವಂತ ಎನ್ನುವುದು ಇದರಿಂದ ತಿಳಿಯುತ್ತದೆ."

"ರಾವಣ ಖಳನಾಯಕ ಅಂತಿರಿ, ವಿದ್ವಾಂಸ ಅಂತಿರಿ, ವೀಣೆ ನುಡುಸ್ತಿದ್ದ ಅಂತಿರಿ, ಕಂಡವನ ಹೆಂಡತಿ ಕದ್ದುಕಂಡೋಗಿ ತಾನಾಗಿ ಒಲಿದು ಬರಲಿ ಅಂತ ಕಾದ ಅಂತಿರಿ, ಏನ್ಸಾರ್ ಇಂತ ಗೊಂದಲ?"

"ಗೊಂದಲ ಏನಿಲ್ಲ, ಗೊಂದಲ ಇರುವುದು ನಮ್ಮ ತಲೆಯಲ್ಲಿ, ರಾಮಾಯಣ ತುಂಬ ಚಂದವುಂಟು."

"ಚಂದವುಂಟು ಅಂತಿರಿ, ತಿರಗ ಯಾಕದ ಬರಿಯಕ್ಕೋದ್ರಿ?"

"ನಾನು ಕೆಲವೊಂದು ವಿಷಯ ಹೇಳುವುದಿತ್ತು, ಅದಕ್ಕಾಗಿ ಬರೆದೆ." "ಏನೇಳದಿತ್ತು ಸಾರ್?"

"ಈ ಬಿಜೆಪಿಗಳು ಹಠಾತ್ತನೆ ರಾಮನನ್ನು ಹಿಡಿದು ಬೀದಿಗೆ ತಂದುಬಿಟ್ಟರು. ಅವನನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಿ ಬಾಬರಿ ಮಸೀದಿ ಹೊಡೆದು ಹಾಕಿದರು. ಈ ಕೃತ್ಯವನ್ನು ಖಂಡಿಸಬೇಕಿತ್ತು, ಅದಕ್ಕಾಗಿ ಬರೆದದ್ದು."

"ನಿಮ್ಮ ರಾಮಾಯಣದಲ್ಲಿ ಅಡ್ವಾಣಿದು ಯಾವ ಪಾತ್ರ?"

"ಅಡ್ವಾಣಿಯಂತವರಿಗೆ ನಮ್ಮ ಪುರಾಣದಲ್ಲಿ ಯಾವ ಪಾತ್ರವೂ ಹೋಲಿಕೆಯಾಗುವುದಿಲ್ಲ. ಅದೊಂದು ಭಾರತದ ಸಮಸ್ಯೆ."

"ಥೂತ್ತೇರಿ!!!" ■



ಹಿಂದೂ ರಾಷ್ಟ್ರ ಹೆಂಗಿರುತ್ತೆ ಗೊತ್ತಾ?

ಭಜರಂಗಿಗಳು, ಆರೆಸ್ಸೆಸ್ಸಿಗರು, ಬಿಜೆಪಿಗಳು, ಎಬಿವಿಪಿಗಳು ಮಾತೆತ್ತಿದರೆ 'ಹಿಂದೂ ರಾಷ್ಟ್ರ' ಅಂತೆಲ್ಲಾ ಬೊಂಬಡಾ ಹೊಡೆಯುತ್ತಾರಲ್ಲವೆ? ಆದರೆ, ಅವರ ಕಲ್ಪನೆಯ ಹಿಂದೂ ರಾಷ್ಟ್ರ ಹೆಂಗಿರುತ್ತೆ ಅನ್ನೋದನ್ನು ಅವರು ಬಿಚ್ಚಿಟ್ಟಿದ್ದು ಬಹಳ ಕಡಿಮೆ. ಮಹಾರಾಷ್ಟ್ರದ ಮಾಲೇಗಾಂವ್ ಸ್ಫೋಟ ಪ್ರಕರಣವನ್ನು ತನಿಖೆ ನಡೆಸುತ್ತಿರುವ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಆ ಕೆಲಸ ಮಾಡಿದೆ. ದೇಶದಾದ್ಯಂತ ನಡೆದ ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದಂತೆ ಎಟಿಎಸ್ ಬಂಧಿಸಿರುವ ಸಾಧ್ವಿ ಪ್ರಗ್ಯಾಸಿಂಗ್ ಠಾಕೂರ್, ಕರ್ನಲ್ ಶ್ರೀಕಾಂತ್ ಪುರೋಹಿತ್, ದಯಾನಂದ್ ಪಾಂಡೆ ಮತ್ತಿತರ ಹಿಂದೂತ್ವವಾದಿಗಳು ಅದೆಂಥಾ ಹಿಂದೂ ರಾಷ್ಟ್ರ ಕಟ್ಟಲು ಹೊರಟಿದ್ದಾರೆ ಎಂಬುದನ್ನು ಮೋಕಾ ((Maharashtra Control of Organised Crime Act - MOCCA)) ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ 4500 ಪುಟಗಳ ಚಾರ್ಜ್‌ಶೀಟ್‌ನಲ್ಲಿ ದಾಖಲೆ ಸಮೇತ ವಿವರಿಸಿದೆ.



ಈ ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ಸಾಕಾರಗೊಳಿಸುವುದಕ್ಕಾಗಿ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ನೇತೃತ್ವದಲ್ಲಿ 'ಅಭಿನವ ಭಾರತ್' ಎಂಬ ಸಂಘಟನೆಯನ್ನು ಕಟ್ಟಿಕೊಳ್ಳಲಾಗಿದೆ. ಆ ಸಂಘಟನೆಗೂ ಒಂದು ಸಂವಿಧಾನ ಅಂತ ಇರಲಿ ಎಂದು ಮಾಲೆಗಾಂವ್‌ನಲ್ಲಿ ಬಾಂಬ್ ಸ್ಫೋಟಿಸಿದ ಭಯೋತ್ಪಾದಕ ಕರ್ನಲ್ ಶ್ರೀಕಾಂತ್ ಪುರೋಹಿತ್ ಅದಕ್ಕೊಂದು ಸಂವಿಧಾನ ಬರೆದುಕೊಟ್ಟಿದ್ದಾನೆ. ಎಲ್ಲಾ ಅಂದುಕೊಂಡಂತೆ ಆದರೆ 2024ರ ವೇಳೆಗೆ ಇಡೀ ಭಾರತವನ್ನು ಅಭಿನವ್ ಭಾರತ್ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದೆಂದು ಈ 'ಸಂವಿಧಾನ ಶಿಲ್ಪಿ'ಯು ಅಂದಾಜಿಸಿದ್ದಾನೆ. ಇಡೀ ಭಾರತವನ್ನು ಕಂಟ್ರೋಲಿಗೆ ತೆಗೆದುಕೊಳ್ಳುತ್ತಾನೋ ಅಥವಾ ಇವನು ಬಾಂಬ್ ಸ್ಫೋಟಿಸಿದ್ದು ಮೋಕಾ ನ್ಯಾಯಾಲಯದಲ್ಲಿ ಸಾಬೀತಾಗಿ 2024ರ ತನಕ ಲಾತೂರ್ ಜೈಲಿನಲ್ಲಿ ಭಜನೆ ಮಾಡುತ್ತಾ ಕುಳಿತಿರುತ್ತಾನೋ ಅನ್ನೋದು ಬೇರೆ ವಿಚಾರ.

■ ಕುಮಾರ್ ಬುರಡಿಕಟ್ಟಿ

ಈ 'ಸಂವಿಧಾನ ಶಿಲ್ಪಿ' ಹಿಂದೂ ರಾಷ್ಟ್ರ ಹೆಂಗಿರುತ್ತೆ ಅನ್ನೋದನ್ನು ಅಭಿನವ ಭಾರತದ ಸಂವಿಧಾನದಲ್ಲಿ ಬರೆದಿಟ್ಟಿದ್ದಾನಲ್ಲ, ಆ ವಿಚಾರವನ್ನಷ್ಟೇ ನೋಡೋಣ. ಇಡೀ ಭಾರತ ಅಭಿನವ ಭಾರತದ ಕಂಟ್ರೋಲಿಗೆ ಬಂದಾಗ ಭಾರತದ ಸೈನ್ಯದ ಬಲವನ್ನು ಈಗಿರುವ 14 ಲಕ್ಷದಿಂದ ಒಂದು ಕೋಟಿಗೆ ಏರಿಸುತ್ತಾರಂತೆ! ಯಾಕೆಂದರೆ, ಭಾರತ ನಿರಂತರವಾಗಿ ನೆರೆಹೊರೆಯ ದೇಶಗಳೊಂದಿಗೆ ಯುದ್ಧ ಮಾಡುತ್ತಿರಬೇಕಂತೆ. ಈಗ ವಿದೇಶಾಂಗ ವ್ಯವಹಾರಗಳ ಸಚಿವಾಲಯವಿದೆಯಲ್ಲ, ಅದನ್ನು ಯುದ್ಧ ಸಚಿವಾಲಯ ಅಂತ ಪುನರ್ನಾಮಕರಣ ಮಾಡಬೇಕಂತೆ, ವಿದೇಶಾಂಗ ವ್ಯವಹಾರಗಳ ಸಚಿವನನ್ನು ಯುದ್ಧ ಸಚಿವ ಅಂತ ಕರೆಯಬೇಕಂತೆ. ಪಾಕಿಸ್ತಾನ ಅನ್ನೋ ಒಂದು ದೇಶವೇ ಇಲ್ಲವಂತೆ. ಈಗಿರುವ ಪಾಕಿಸ್ತಾನ, ಅಫಘಾನಿಸ್ತಾನ, ನೇಪಾಳ, ಚೀನಾ, ಶ್ರೀಲಂಕಾ, ಬಾಂಗ್ಲಾ, ಬರ್ಮಾ - ಹೀಗೆ ನೆರೆಹೊರೆಯ ಎಲ್ಲಾ ದೇಶಗಳನ್ನೂ ಒತ್ತುವರಿ ಮಾಡಿಕೊಂಡು ಭದ್ರವಾದ ಬೇಲಿ ಹಾಕಿಕೊಂಡು ಅದನ್ನು 'ಅಖಂಡ ಭಾರತ' ಅಂತ ಕರೆಯಬೇಕಂತೆ!

ಇದಕ್ಕೆಂಥಾ ತಿಕ್ಕಲು ಅನ್ನಬೇಕೋ ಗೊತ್ತಿಲ್ಲ, ಮೊದಲನೆಯದಾಗಿ ಈಗ ಹದಿನೈದು ಇಪ್ಪತ್ತು ಲಕ್ಷದಷ್ಟಿರುವ ನಮ್ಮ ಸೈನಿಕರನ್ನೇ ಸಾಕುವುದಕ್ಕೆ ನಮ್ಮಿಂದಾಗುತ್ತಿಲ್ಲ, ನೂರು ಕೋಟಿ ಭಾರತೀಯರು ತಮ್ಮ ಬೆವರು ರಕ್ತ ಹರಿಸಿ ದುಡಿದ ದುಡ್ಡಿನಲ್ಲಿ ಬಹಳಷ್ಟು ಪಾಲು ದೇಶದ ಅಭಿವೃದ್ಧಿಗೆ ಹೋಗದೇ ಈ ಸೈನಿಕರನ್ನು ಸಾಕುವುದಕ್ಕೇ ಪೋಲಾಗುತ್ತಿದೆ. ಕೇಂದ್ರದ ವಾರ್ಷಿಕ ಬಜೆಟ್ಟನ್ನು ನೋಡಿದರೇನೇ ಇದರ ಅರಿವಾಗುತ್ತದೆ. ದೇಶದಲ್ಲಿ ಕೃಷಿಯನ್ನೇ ನಂಬಿಕೊಂಡು ಬದುಕುತ್ತಿರುವ ಅನ್ನದಾತರ ಅಭಿವೃದ್ಧಿಗೆ ನೀಡುವ ದುಡ್ಡಿನ ಹತ್ತು ಪಟ್ಟನ್ನು ಮಿಲಿಟರಿ ಖರ್ಚಿಗೆ ನೀಡಲಾಗುತ್ತಿದೆ. ಇನ್ನು ಈ ಸಂಖ್ಯೆ ಒಂದು ಕೋಟಿಗೇರಿದರೆ ಬಡ ಭಾರತೀಯನ ಕತೆಯೇನಾಗಬೇಕು? ಅದೆಲ್ಲಾ ಚಿಂತೆ 'ಸಂವಿಧಾನ ಶಿಲ್ಪಿ'ಗಿಲ್ಲ. ಮಿಲಿಟರಿ ಸಾಕುವ ಹೊಣೆಗಾರಿಕೆಯನ್ನು ಅವನೇನು ವಹಿಸಿಕೊಳ್ಳುವುದಿಲ್ಲವಲ್ಲ?

■ ಭಾರತ ನಿರಂತರವಾಗಿ ನೆರೆಹೊರೆಯ ದೇಶಗಳೊಂದಿಗೆ ಯುದ್ಧ ಮಾಡುತ್ತಿರಬೇಕಂತೆ. ಈಗ ವಿದೇಶಾಂಗ ವ್ಯವಹಾರಗಳ ಸಚಿವಾಲಯವಿದೆಯಲ್ಲ, ಅದನ್ನು ಯುದ್ಧ ಸಚಿವಾಲಯ ಅಂತ ಪುನರ್ನಾಮಕರಣ ಮಾಡಬೇಕಂತೆ, ವಿದೇಶಾಂಗ ವ್ಯವಹಾರಗಳ ಸಚಿವನನ್ನು ಯುದ್ಧ ಸಚಿವ ಅಂತ ಕರೆಯಬೇಕಂತೆ. ಪಾಕಿಸ್ತಾನ ಅನ್ನೋ ಒಂದು ದೇಶವೇ ಇಲ್ಲವಂತೆ. ಈಗಿರುವ ಪಾಕಿಸ್ತಾನ, ಅಫಘಾನಿಸ್ತಾನ, ನೇಪಾಳ, ಚೀನಾ, ಶ್ರೀಲಂಕಾ, ಬಾಂಗ್ಲಾ, ಬರ್ಮಾ - ಹೀಗೆ ನೆರೆಹೊರೆಯ ಎಲ್ಲಾ ದೇಶಗಳನ್ನೂ ಒತ್ತುವರಿ ಮಾಡಿಕೊಂಡು ಭದ್ರವಾದ ಬೇಲಿ ಹಾಕಿಕೊಂಡು ಅದನ್ನು 'ಅಖಂಡ ಭಾರತ' ಅಂತ ಕರೆಯಬೇಕಂತೆ! ■

ಭಾರತಕ್ಕಿಂತ ಎಷ್ಟೋ ಪಟ್ಟು ಅಭಿವೃದ್ಧಿ ಸಾಧಿಸಿರುವ ಅನೇಕ ದೇಶಗಳನ್ನು, ಅವರ ಮಿಲಿಟರಿ ಶಕ್ತಿಯನ್ನು ನೋಡಿದರೆ ಆಶ್ಚರ್ಯ ಆಗುತ್ತೆ. ಜಪಾನ್‌ನ ಮಿಲಿಟರಿಯಲ್ಲಿ ಎರಡೂವರೆ ಲಕ್ಷಕ್ಕಿಂತ ಕಡಿಮೆ ಸೈನಿಕರಿದ್ದಾರೆ, ಜರ್ಮನಿಯಲ್ಲಿ ಎರಡೂವರೆ ಲಕ್ಷ ಸೈನಿಕರಿದ್ದಾರೆ. ಫ್ರಾನ್ಸ್‌ನಲ್ಲಿ ಎರಡು ಲಕ್ಷದ ಅರವತ್ತು ಸಾವಿರ ಇದ್ದಾರೆ, ಇಟಲಿಯಲ್ಲಿ ಮೂರು ಲಕ್ಷ ಇದ್ದಾರೆ. ಯಾಕೆಂದರೆ ಅವರೆಲ್ಲ ಬುದ್ಧಿವಂತರು. ಯಥೇಚ್ಛ ಹಣವನ್ನು ಯುದ್ಧ ಮಿಲಿಟರಿ ಅಂತ ವೇಸ್ಟ್ ಮಾಡದೇ ತಮ್ಮ ದೇಶದ ಅಭಿವೃದ್ಧಿಗಾಗಿ ಉಪಯೋಗಿಸಿದ್ದಾರೆ. ಅದಕ್ಕಾಗಿಯೇ ಅವರ ದೇಶಗಳು ಅಷ್ಟೊಂದು ಮುಂದುವರೆದಿವೆ. ನಮ್ಮಲ್ಲಿ ಈ 'ಸಂವಿಧಾನ ಶಿಲ್ಪಿ'ಯಂಥವರು ಇರೋದ್ರಿಂದ ನಾವು ಹೀಗಿದ್ದೇವೆ. ಇನ್ನು ನಮ್ಮ ಸೈನ್ಯವನ್ನು ಒಂದು ಕೋಟಿಗೆ ಏರಿಸಿಬಿಟ್ಟರೆ ಇನ್ನೆಲ್ಲಿಗೆ ಹೋಗುತ್ತೇವೋ?



ಇನ್ನು ನಿರಂತರವಾಗಿ ನೆರೆಹೊರೆಯ ರಾಷ್ಟ್ರಗಳೊಂದಿಗೆ ಭಾರತ ಯುದ್ಧ ಮಾಡುತ್ತಲೇ ಇರಬೇಕೆಂದು 'ಸಂವಿಧಾನ ಶಿಲ್ಪಿ' ಹೇಳುತ್ತಿದ್ದಾರಲ್ಲ, ಇದಕ್ಕೆ ಹುಚ್ಚು ಎನ್ನಬೇಕೋ ಅಥವಾ ಯುದ್ಧ ಸನ್ನಿ ಎನ್ನಬೇಕೋ ಅರ್ಥವಾಗುತ್ತಿಲ್ಲ. ಪ್ರಾಯಶಃ ಯುದ್ಧ ಮಾಡುವುದೆಂದರೆ ಆರ್‌ಎಸ್‌ಎಸ್‌ನ ಅಡ್ಡೆಯಲ್ಲಿ ಕೂತು ಭಗವದ್ಗೀತೆ ಪಠಿಸಿದಂತೆ ಎಂದು ಅಂದುಕೊಂಡಿರಬೇಕು. ಯುದ್ಧಕ್ಕಾಗಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು, ಯುದ್ಧೋಪಕರಣಗಳನ್ನು ಖರೀದಿಸಬೇಕಾಗುತ್ತದೆ. ಅದಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಅದನ್ನೇನು ಅಭಿನವ ಭಾರತ ಕೊಡುತ್ತದೆಯೆ? ಆರೆಸ್ಸೆಸ್ಸಿಗರು ಚೆಡ್ಡಿ ಹಾಕಿಕೊಂಡು ದುಡಿದು ಕೊಡುತ್ತಾರೆಯೆ? 'ಸಂವಿಧಾನ ಶಿಲ್ಪಿ' ತನ್ನ ಜೇಬಿನಿಂದ ಭರಿಸುತ್ತಾನೆಯೆ? ಭರತಖಂಡದ ಜನ ತಮ್ಮ ಬೆವರು ರಕ್ತ ಹರಿಸಿ ದುಡಿದ ಈ ದುಡ್ಡು ಅವರ ಅಭಿವೃದ್ಧಿಗಾಗಿಯಲ್ಲ, ಯುದ್ಧಕ್ಕಾಗಿ ಪೋಲು ಮಾಡುವಂತಹ ವಂಡರ್‌ಫುಲ್ ಐಡಿಯಾವನ್ನು ಇವರು ಕೊಡುತ್ತಾರೆಂದರೆ ಇವರಿಗೆ ಏನೆನ್ನಬೇಕು?

ಇಷ್ಟೆಲ್ಲಾ ಯುದ್ಧಮಾಡಿ ರಕ್ತ ಹರಿಸುವ ಯೋಚನೆಯಾದರೂ ಯಾತಕ್ಕೆ ಎಂಬ ಪ್ರಶ್ನೆಗೆ 'ಅಖಂಡ ಭಾರತ ನಿರ್ಮಾಣಕ್ಕೆ', 'ಕಳೆದುಕೊಂಡಿರುವ ನಮ್ಮ ನೆಲವನ್ನು ಮತ್ತೆ ಪಡೆದುಕೊಳ್ಳುವುದಕ್ಕೆ' ಎಂಬ ಉತ್ತರಗಳನ್ನೂ ಅವರ ಸಂವಿಧಾನ ಕೊಡುತ್ತದೆ. ಅಂದರೆ, ಆಕ್ಕಪಕ್ಕದಲ್ಲಿರುವ ಪಾಕಿಸ್ತಾನ, ಅಫಘಾನಿಸ್ತಾನ, ಬಾಂಗ್ಲಾ, ಭರ್ಮಾ, ಚೀನಾ, ನೇಪಾಳ ದೇಶಗಳೆಲ್ಲವನ್ನೂ ಒತ್ತುವರಿ ಮಾಡಿಕೊಂಡು ಬೇಲಿ ಹಾಕಿಕೊಳ್ಳಬೇಕು.



ಇನ್ನೊಂದಿಷ್ಟು ದಿನ ಹೀಗೇ ಬಿಟ್ಟರೆ ಆಫ್ರಿಕ, ಯೂರೋಪ್‌ಗಳಿಗೂ ಬೇಲಿ ಹಾಕಿಕೊಳ್ಳಬೇಕೆನ್ನುತ್ತಾರೆ ಈ ಒತ್ತುವರಿದಾರರು. ಇವರು ಅವರ ನೆಲಕ್ಕೆ ಬೇಲಿ ಹಾಕಿಕೊಳ್ಳಲು ಹೋದರೆ ಅವರೇನು ಕಳ್ಳೇಪುರಿ ತಿನ್ನುತ್ತಿರುತ್ತಾರೆಯೇ?

'ಸಂವಿಧಾನ ಶಿಲ್ಪಿ' ಶ್ರೀಕಾಂತ್ ಪುರೋಹಿತ್ ಇನ್ನೊಂದು ವಿಚಾರವನ್ನು ಬರೆದಿದ್ದಾನೆ. ಅದೇನೆಂದರೆ, ಭಾರತದ ಮುಸ್ಲಿಮರು ಇದೇ ನಾಡಿನ ಮೂಲನಿವಾಸಿಗಳಲ್ಲವಂತೆ, ಅವರೆಲ್ಲಾ ಹೊರಗಿನಿಂದ ಆಕ್ರಮಣ ಮಾಡಿ ಇಲ್ಲಿ ನೆಲೆಯೂರಿಬಿಟ್ಟಿದ್ದಾರಂತೆ, ಹಾಗಾಗಿ ಅವರನ್ನೆಲ್ಲಾ ಇಲ್ಲಿಂದ ಒದ್ದೋಡಿಸಬೇಕಂತೆ. ಅದು ಹೌದೆಂದೇ ಒಪ್ಪಿಕೊಳ್ಳೋಣ. ಹೊರಗಿನ ಯಾವುದೋ ದೇಶದಿಂದ ಇಲ್ಲಿಗೆ ಬಂದು ನಮ್ಮ ಮೇಲೆಯೇ ದೌರ್ಜನ್ಯ ನಡೆಸುತ್ತಾರೆಂದರೆ ಅವರನ್ನು ಒದ್ದೋಡಿಸಲೇಬೇಕು. ಬ್ರಿಟಿಷರನ್ನು ಒದ್ದೋಡಿಸಿಲ್ಲವೇ ಹಾಗೆಯೆ. ಆದರೆ, ಅದಕ್ಕೂ ಮುಂಚೆ ಇನ್ನೊಂದು ವಿಚಾರವನ್ನು ನೋಡಿ. ಮುಸ್ಲಿಮರು ಭರತಖಂಡದ ಮೇಲೆ ಆಕ್ರಮಣ ಮಾಡುವ ನೂರಾರು ವರ್ಷಗಳ ಮುಂಚೆಯೇ ಹೊರಗಿನಿಂದ ಬಂದ ಆರ್ಯರು ಈ ನಾಡಿನ ಮೂಲನಿವಾಸಿಗಳಾದ ದ್ರಾವಿಡರ ಮೇಲೆ ಆಕ್ರಮಣ ಮಾಡಿದರು; ದ್ರಾವಿಡರು ಕಟ್ಟಿದ್ದ ಹರಪ್ಪಾ-ಮೊಹಂಜದಾರೋ ನಾಗರಿಕತೆಯನ್ನೇ ನಾಶಮಾಡಿದರು. ದ್ರಾವಿಡರ ಮೇಲೆ ಹೇಳತೀರದ ದೌರ್ಜನ್ಯಗಳನ್ನು ನಡೆಸಿದರು. ಇದನ್ನು ಬಹುತೇಕ ಎಲ್ಲಾ ಚರಿತ್ರಕಾರರೂ ಒಪ್ಪಿಕೊಂಡಿದ್ದಾರೆ. ಹಾಗಿದ್ದ ಮೇಲೆ ಮೊದಲು ಆರ್ಯರನ್ನೇ ಇಲ್ಲಿಂದ ಓಡಿಸಬೇಕಲ್ಲವೆ? ಶ್ರೀಕಾಂತ್ ಪುರೋಹಿತ್ ಎಂಬ 'ಸಂವಿಧಾನಶಿಲ್ಪಿ' ಕೂಡ ಆರ್ಯರ ಪ್ರತಿನಿಧಿಯೇ ಆಗಿದ್ದರಿಂದ ಅವನ ಚೆಡ್ಡಿ ಕಳಚಿ ಮೊದಲು ಅವನನ್ನೇ ಅರಬ್ಬೀ ಸಮುದ್ರಕ್ಕೆ ಹಾಕುವ ಮೂಲಕವೇ ಈ ಕಾರ್ಯ ಶುರುವಾಗಬೇಕಲ್ಲವೆ?


'ಅಭಿನವ ಭಾರತ'ದ ಸಂವಿಧಾನದಲ್ಲಿ ಈ ದೇಶದ ಆರ್ಥಿಕತೆಯ ಬಗ್ಗೆ ಬಹಳ ರಂಜಕವಾಗಿ ಬರೆದಿದ್ದಾರೆ. ಕೃಷಿಯೇ ದೇಶದ ಆರ್ಥಿಕತೆಯ ಬೆನ್ನೆಲುಬಾಗಬೇಕಂತೆ, ವಿಶೇಷ ಆರ್ಥಿಕ ವಲಯಗಳು ರೈತರ ಜಮೀನಿನಲ್ಲಿ ತಲೆಯೆತ್ತದಂತೆ ನೋಡಿಕೊಳ್ಳುತ್ತಾರಂತೆ, ಬಿಪಿಓಗಳನ್ನು ಭಾರತದಿಂದ ಓಡಿಸುತ್ತಾರಂತೆ ಇತ್ಯಾದಿ.... ಇತ್ಯಾದಿ....

ಈಗ ಅಲ್ಪ ಸ್ವಲ್ಪ ಅಧಿಕಾರ ಸಿಕ್ಕಾಗಲೇ ಗೊಬ್ಬರ ಕೇಳಿದ ರೈತನಿಗೆ ಬಂದೂಕಿನ ಗುಂಡು ಕೊಡುತ್ತಿರುವ ಜನ ಇವರು. ಇನ್ನು ಇವರ ಕೈಗೆ ಪೂರ್ತಿ ಅಧಿಕಾರ ಸಿಕ್ಕರೆ ಇನ್ನೇನು ಕೊಡಬಲ್ಲರು ಎಂಬುದನ್ನು ಇಲ್ಲಿ ▶▶▶

ಸುವುದು ಅನವಶ್ಯಕ. ಅರ್ಥಂಬರ್ಥ ಅಧಿಕಾರ
ಇಲೇ ರೈತರ ಜಮೀನುಗಳನ್ನು ಕಿತ್ತುಕೊಂಡು
ವ ಆರ್ಥಿಕ ವಲಯಗಳನ್ನು ರೂಪಿಸಿ
ಡಾಳಶಾಹಿಗಳ ಪಾದಗಳಿಗರ್ಪಿಸಿದ ಜನ
. ಇಂಥವರ ಕೈಗೆ ಪೂರ್ತಿ ಅಧಿಕಾರ ಸಿಕ್ಕರೆ
ಬಟ್ಟೆಯನ್ನೂ ಬಿಚ್ಚಿಕೊಂಡು ಅವರಿಗೊಂದು
ಚಡ್ಡಿ
ಸದಿರುತ್ತಾರೆಯೆ?
ೀಕರಣದ ಈ
ಗಳಲ್ಲಿ ಯಾವ್ಯಾವುದೋ
ದ ಕೆಲಸಗಳನ್ನು
ಯೇ ಕುಳಿತು
ಸುವಂಥ ಬಿಪಿಓಗಳು
ುತ್ತಿವೆ. ಸರಿಯೋ
ಉದ್ಯೋಗವಿಲ್ಲದೇ
ುತ್ತಿದ್ದ ಜನರಿಗೆ ಒಂದಿಷ್ಟು
್ಯೋಗವನ್ನಾದರೂ ಕೊಟ್ಟಿವೆ. ಅವುಗಳನ್ನೂ
ಮಾಡುತ್ತಾರೆಂದರೆ ಅಲ್ಲಿರುವ
್ಯೋಗಿಗಳನ್ನು ಎಲ್ಲಿಗೆ ಕಳಿಸುತ್ತಾರೆ? ಪ್ರಾಯಶಃ
ಗೆಲ್ಲರಿಗೂ ಖಾಕಿ ಚಡ್ಡಿ ತೊಡಿಸಿ ನೆರೆಹೊರೆಯ
ಯೊಂದಿಗೆ ಯುದ್ಧ ಮಾಡುವುದಕ್ಕೆ ಸೈನ್ಯಕ್ಕೆ
ಕೊಳ್ಳುತ್ತಾರೆನೋ? ಮಹಿಳೆಯರಾದರೆ ಖಾಕಿ
ತೊಡಿಸಿ ಅಡುಗೆಮನೆಯಲ್ಲಿ ಕಸ ಮುಸರೆ
ಕೆಲಸಕ್ಕೆ ನೇಮಿಸಬಹುದು.



ಭ್ರಷ್ಟಾಚಾರ ಮತ್ತು ಅಪರಾಧಗಳನ್ನು ಹೇಗೆ
ಸಲಾಗುತ್ತದೆ ಎಂಬುದಕ್ಕೂ 'ಸಂವಿಧಾನ
ಯು ಬಳಿ ಉತ್ತರವಿದೆ. 2024ರ ಹೊತ್ತಿಗೆ
ೂ ರಾಷ್ಟ್ರ ಸ್ಥಾಪನೆಯಾಗುತ್ತಿದ್ದಂತೆಯೇ ಭ್ರಷ್ಟ
ಾರಿಗಳಿಗೆ, ಅಪರಾಧಿಗಳಿಗೆ ಮರಣದಂಡನೆ
ಲಾಗುತ್ತದಂತೆ. ಸಾರ್ವಜನಿಕವಾಗಿಯೇ
ವನ್ನು ಕೊಡಲಾಗುತ್ತದಂತೆ. ಸ್ವಲ್ಪ ಕಣ್ಣು ಬಿಟ್ಟು
ುವುದಾದರೆ, ನಮ್ಮ ಭರತಖಂಡದಲ್ಲಿ
ಚಾರಿಗಳ ದೊಡ್ಡ ಹಿಂಡೇ ಇದೆ.
ಾಧಿಗಳ ಸಂಖ್ಯೆಯಂತೂ
ನೇ ಏರುತ್ತಿದೆ. ಕರ್ನಾಟಕದ
ಹರಣೆಯನ್ನೇ
ುವುದಾದರೆ, ಯಡ್ಡಿ, ಸಿ.ಟಿ.ರವಿ,
ಅಶೋಕ್, ಜನಾರ್ದನರೆಡ್ಡಿ,
ನಾಯ್ಡುಗಳಂಥ ಬಿಜೆಪಿಯ
ಭಕ್ತ ರಾಜಕಾರಣಿಗಳು ಒಂದು
ವಲ್ಲಿ ಹೆಂಗಿದ್ದವರು ಈಗ
ಗಿ ಹೋಗಿದ್ದಾರೆ. ಮಾಡಬಾರದ
ಾಧಗಳನ್ನು ಮಾಡಿ
ಗಳಾಗಿದ್ದಾರೆ. ಮಾಡಬಾರದಷ್ಟು
ಚಾರಗಳನ್ನು ಮಾಡುತ್ತಾ ದೇಶದ
ತ್ತನ್ನು ಕೊಳ್ಳೆಹೊಡೆಯುತ್ತಿದ್ದಾರೆ.
ಂಗದಳದವರಂತೂ ಇಡೀ
ಘಟ್ಟದ ಸಮೃದ್ಧ ಸಹ್ಯಾದ್ರಿ
ವನ್ನು ಕಳ್ಳತನದಿಂದ ಕಡಿದು ಪ್ರಕೃತಿ ಸಂಪತ್ತನ್ನೇ
ಹೊಡೆಯುತ್ತಿದ್ದಾರೆ. ಇಂಥವರೆಲ್ಲರಿಗೂ
ಣದಂಡನೆ ಶಿಕ್ಷೆ ಕೊಡುತ್ತಾರೆಯೆ? ಹಾಗಿದ್ದ
2024ರ ತನಕ ಯಾಕೆ ಕಾಯಬೇಕು?
ಗಲೇ ಶುರು ಮಾಡಿದರೆ ಒಳ್ಳೆಯದಲ್ಲವೆ?



ಭರತಖಂಡದಲ್ಲಿ ಬಹುಸಂಸ್ಕೃತಿಯ ಜನ ಇದ್ದಾರೆ.
ಧರ್ಮಗಳ, ಜಾತಿಗಳ, ಸಮುದಾಯಗಳ,
ಭಾಷೆಗಳನ್ನಾಡುವ ಜನ ಕೂಡಿ
ಕುತ್ತಿದ್ದಾರೆ. ಈ ವೈವಿಧ್ಯತೆಗಳು ಹಿಂದೂ
ದಲ್ಲಿ ಹೇಗಿರುತ್ತವೆ? ಹಿಂದೂ ರಾಷ್ಟ್ರದ
ಧಾನ ಶಿಲ್ಪಿ'ಯ ಪ್ರಕಾರ ಭರತಖಂಡದಲ್ಲಿ
ವುದೇ ವೈವಿಧ್ಯತೆಗಳಿರುವುದಿಲ್ಲ, ಎಲ್ಲರೂ
ೂ ಧರ್ಮವೊಂದನ್ನೇ ಅನುಸರಿಸಬೇಕು, ಒಂದೇ
ತಿಯನ್ನು ಬೆಳೆಸಿಕೊಳ್ಳಬೇಕು, ಒಂದೇ
ಯನ್ನು ಮಾತನಾಡಬೇಕು! ಇಸ್ಲಾಮ್,
ಯಾನಿಟಿ ಧರ್ಮಿಯರನ್ನೇನೋ ಹೊಡೆದು
ು ಹಿಂದೂಗಳನ್ನಾಗಿ ಕನ್ವರ್ಟ್
ಬಹುದೇನೋ. ಆದರೆ, ಹಿಂದೂ ಎಂದು
ಕೊಳ್ಳುತ್ತಿರುವ ಧರ್ಮದಲ್ಲೇ ಇಷ್ಟೊಂದು
ಧ್ಯತೆಯಿದೆಯಲ್ಲ, ಅದಕ್ಕೇನು ಮಾಡುತ್ತಾರೆ?
-ಶಿವರನ್ನು ಪೂಜೆ ಮಾಡೋ ಜನರದ್ದೇ ಒಂದು
ತಿಯಿದೆ. ಈ ದೇವತೆಗಳಂತೆಯೇ ಅವರನ್ನು
ಜಿಸುವವರೂ ಕೂಡ ನೀಟಾಗಿ ಬಟ್ಟೆ
ಕೊಂಡಿರುತ್ತಾರೆ, ಸಸ್ಯಾಹಾರ ಸೇವನೆ
ುತ್ತಾರೆ, ಆ ದೇವತೆಗಳಿಗೊಂದು ಸುಂದರ
ಲಯವಿರುವಂತೆ ಅವರನ್ನು
ಜಿಸುವವರಿಗೂ ಒಂದು ಉತ್ತಮ
ುರುತ್ತದೆ. ಆ ದೇವತೆಗಳಿಗೂ ದಿನಾಲೂ ಸ್ನಾನ
ಸಿ ತಾವೂ ಸ್ನಾನ ಮಾಡುತ್ತಾರೆ.
ದ್ದೊಂಥರ ಅಚ್ಚುಕಟ್ಟಾದ ನಾಗರಿಕ ಸಂಸ್ಕೃತಿ.

ಅವರ ದೇವತೆಗಳಂತೆಯೇ. ಇದರ ಜೊತೆ ಜೊತೆಗೆ ಇನ್ನೊಂದು ಅನಾಗರಿಕ ಸಂಸ್ಕೃತಿಯೂ ಇದೆ! ಶಿವ, ವಿಷ್ಣುರಂತೆ ನೀಟಾಗಿ ಬಟ್ಟೆ ಹಾಕಿಕೊಂಡಿರದ, ಮೇಕಪ್ ಮಾಡಿಕೊಂಡಿರದ, ತಲೆ ಬಾಚಿಕೊಂಡಿರದ, ಶಿವ-ವಿಷ್ಣುಗಿರುವಂತೆ ವಾಸಕ್ಕೊಂದು ಸುಂದರವಾದ ದೇವಸ್ಥಾನವಿಲ್ಲದೇ ಹಾದಿಬೀದಿಯಲ್ಲಿರುವ, ಮಾಂಸ ಮದ್ಯ ಸೇವನೆ ಮಾಡುವ ಚೌಡವ್ವ, ಕಾಳವ್ವ, ಭರಮಪ್ಪನಂಥ ನಾನ್‌ವೆಜ್ ದೇವತೆಗಳನ್ನು ಪೂಜಿಸುವ ದಲಿತ ಮತ್ತು ಶೂದ್ರ ಸಮುದಾಯದ ಸಂಸ್ಕೃತಿಯದು. ಇನ್ನು ಆದಿವಾಸಿಗಳ ಸಂಸ್ಕೃತಿಯೂ ಇದೆ. ಅವರದ್ದು ಕಾಡು, ಬೆಟ್ಟ, ಗುಡ್ಡ ನದಿಗಳಂಥ ಪ್ರಕೃತಿಯನ್ನೇ ದೇವರೆಂದು ಪೂಜಿಸುವ ಸಂಸ್ಕೃತಿ. ಹೀಗೇ ಭಾರತದಲ್ಲಿ ಒಂದು ಸಂಸ್ಕೃತಿ ಅಂತ ಏನಿಲ್ಲ, ಅನೇಕ ಸಂಸ್ಕೃತಿಗಳಿವೆ. ಈ ವೈವಿಧ್ಯ ಸಂಸ್ಕೃತಿಯ ಜಾಗದಲ್ಲಿ ಏಕ ಸಂಸ್ಕೃತಿಯನ್ನು ಹೇಗೆ ತರುತ್ತಾರೆ?

ಮೇಲ್ನೋಟಕ್ಕೇ ಕಾಣಿಸುವಂತೆ ಹಿಂದೂ ರಾಷ್ಟ್ರದ 'ಸಂವಿಧಾನ ಶಿಲ್ಪಿ' ನಾಗರಿಕ ಸಂಸ್ಕೃತಿಗೆ ಸೇರಿದವನು. ಕ್ರಿಶ್ಚಿಯನ್, ಮುಸ್ಲಿಮರ ಮೇಲೆ ದಾಳಿ ಮಾಡುವಂತೆ ಹಿಂದೂ ಧರ್ಮದೊಳಗೇ ಇರುವ ಅನಾಗರಿಕರ ಸಂಸ್ಕೃತಿಯ ಜನರ ಮೇಲೂ ದಾಳಿ ಮಾಡಿ, ಅವರಿಗೂ ಜನಿವಾರ ತೊಡಿಸಿ ಅವರನ್ನು ನಾಗರಿಕರನ್ನಾಗಿ ಮಾಡುತ್ತಾರೆಯೆ? ಏಕ ಸಂಸ್ಕೃತಿಯನ್ನೇ ರೂಪಿಸಬೇಕೆಂದಾದರೆ, ದೇಶದ ಮುಕ್ಕಾಲು ಭಾಗದಷ್ಟು ಜನ ದಲಿತ-ಶೂದ್ರರೇ ಆಗಿರುವುದರಿಂದ ಅವರ 'ಅನಾಗರಿಕ' ಸಂಸ್ಕೃತಿಯನ್ನು ನಾಗರಿಕ ಸಂಸ್ಕೃತಿಯಾಗಿ ಪರಿವರ್ತನೆ ಮಾಡುವುದಕ್ಕಿಂತ ಬೆರಳೆಣಿಕೆಯಷ್ಟು ಬ್ರಾಹ್ಮಣಶಾಹಿಗಳು ತಮ್ಮ ನಾಗರಿಕ ಸಂಸ್ಕೃತಿಯನ್ನು ಬಿಟ್ಟು ದಲಿತ-ಶೂದ್ರರ ಅನುಸರಿಸುತ್ತಿರುವ 'ಅನಾಗರಿಕ' ಸಂಸ್ಕೃತಿಯನ್ನೇ ಅನುಸರಿಸುವಂತೆ ಮಾಡುವುದು ಸುಲಭವಲ್ಲವೆ? 'ಸಂವಿಧಾನ ಶಿಲ್ಪಿ'ಗಳು ಒಂದಿಷ್ಟು ಯೋಚಿಸಬೇಕಿತ್ತು.

ಹಿಂದೂ ರಾಷ್ಟ್ರ ಸ್ಥಾಪನೆಗೆ ಯಾರಾದರೂ ವಿರೋಧ ವ್ಯಕ್ತಪಡಿಸಿದರೆ ಏನು ಮಾಡಬೇಕು? ಅದಕ್ಕೂ ಸಂವಿಧಾನಶಿಲ್ಪಿಗಳಲ್ಲಿ ಉತ್ತರವಿದೆ. ಹಿಂದೂ ರಾಷ್ಟ್ರ ಅಸ್ತಿತ್ವಕ್ಕೆ ಬರುವುದನ್ನು ಯಾರೇ ವಿರೋಧಿಸಲಿ, ವಿರೋಧಿಸುವವರು ಹಿಂದೂಗಳೇ ಆಗಿದ್ದರೂ ಹಿಂದು ಮುಂದು ನೋಡದೆ **physically eliminate** ಮಾಡಬೇಕು.

ಸಾರಾಂಶದಲ್ಲಿ ಹಿಂದೂ ರಾಷ್ಟ್ರದ 'ಸಂವಿಧಾನ ಶಿಲ್ಪಿ' ಶ್ರೀಕಾಂತ್ ಪುರೋಹಿತ್‌ರವರು ಅಫಘಾನಿಸ್ತಾನದಲ್ಲಿದ್ದಂತೆ 'ತಾಲಿಬಾನ್ ಮಾದರಿಯ ಸರ್ಕಾರ' ಭಾರತಕ್ಕೆ ಅಗತ್ಯವಿದೆ ಎಂದು ಹೇಳಿದ್ದಾರೆ! ತಾಲಿಬಾನ್ ಪ್ರಭುತ್ವ ಹೇಗಿತ್ತೆಂಬುದನ್ನು ಪ್ರಾಯಶಃ ವಿವರಿಸುವ ಅಗತ್ಯವಿಲ್ಲ ಎನಿಸುತ್ತದೆ. ಯಾಕೆಂದರೆ, ಅದನ್ನಾಗಲೇ ಇದೇ ಹಿಂದುತ್ವವಾದಿಗಳು ಬೇಕಾದಷ್ಟು ಪ್ರಚಾರ ಮಾಡಿಯಾಗಿದೆ. ಈಗ ಅದೇ ಮಾದರಿಯ ಪ್ರಭುತ್ವವನ್ನು ಭಾರತದಲ್ಲಿ ಪ್ರತಿಷ್ಠಾಪಿಸುವುದಕ್ಕೆ ಹೊರಟಿದ್ದಾರೆ. ಒಂದೇ ವ್ಯತ್ಯಾಸ ಎಂದರೆ ಅಲ್ಲಿ ಮುಸ್ಲಿಮ್ ಭಯೋತ್ಪಾದಕರ ಸರ್ವಾಧಿಕಾರ, ಇಲ್ಲಿ ಹಿಂದೂ ಭಯೋತ್ಪಾದಕರ ಸರ್ವಾಧಿಕಾರ!

ಕೊನೆಯದಾಗಿ ಒಂದು ವಿಚಾರ. ಅಭಿನವ ಭಾರತದ ಸಂವಿಧಾನದ ಪ್ರಕಾರ ಹಿಂದೂವಾಗಿ ಹುಟ್ಟಿದ ಪ್ರತಿಯೊಬ್ಬನೂ ಆ ಸಂಘಟನೆಯ ಸದಸ್ಯನಂತೆ! ಅವರೆಲ್ಲರೂ ಈ ಸಂವಿಧಾನವನ್ನು ಎತ್ತಿಹಿಡಿಯಬೇಕಂತೆ. ತಾಲಿಬಾನ್ ರೀತಿಯ ಸರ್ವಾಧಿಕಾರಿ ಪ್ರಭುತ್ವವನ್ನು ಅಸ್ತಿತ್ವಕ್ಕೆ ತರುವುದಕ್ಕಾಗಿ ಹೋರಾಡಬೇಕಂತೆ. ನೀವೂ ಹಿಂದೂಗಳಾಗಿದ್ದರೆ, ನೀವು ಹುಟ್ಟುವ ಮೊದಲೇ ನಿಮ್ಮ ತಂದೆತಾಯಿಗಳೇನಾದರೂ ನಿಮ್ಮ ಹೆಸರಿನಲ್ಲಿ ಅಭಿನವ ಭಾರತ ಸಂಘಟನೆಗೆ, ಸಂವಿಧಾನಶಿಲ್ಪಿಗೆ ಸದಸ್ಯತ್ವ ಕೋರಿ ಅರ್ಜಿ ಬರೆದುಕೊಟ್ಟಿದ್ದಾರೋ ಏನೋ ಕೇಳಿ ನೋಡಿ. ಇಲ್ಲವಾದರೆ, ಕನಿಷ್ಠ ದೇಶದ ಎಲ್ಲಾ ಹಿಂದೂಗಳನ್ನು ಯಾವಾಗ ಈ ಹಿಂದುತ್ವ ಭಯೋತ್ಪಾದಕರು ಗುತ್ತಿಗೆ ಹಿಡಿದುಕೊಂಡರು ಎಂಬುದನ್ನಾದರೂ ಕೇಳಲೇಬೇಕಲ್ಲವೆ? ■

ಬೆಳಗಾವಿ ಅಧಿವೇಶನ

ಬೆಟ್ಟ ಅಗೆದು ಇಲೀನೂ ಹಿಡಿಯಲಿಲ್ಲ



ಇದು ಪ್ರಜಾಪ್ರಭುತ್ವದ ಅಣಕವಲ್ಲದೆ ಮತ್ತೇನೂ ಅಲ್ಲ. ಬೆಳಗಾವಿಯಲ್ಲಿ ನಡೆದ ವಿಶೇಷ ವಿಧಾನಸಭಾ ಅಧಿವೇಶನ ಈಗತಾನೆ ಮುಗಿದಿದೆ. ದೊಡ್ಡ ಬೆಟ್ಟ ಅಗೆಯುವಂತೆ ವಿಪರೀತ ಪ್ರಚಾರ ಮಾಡಿಕೊಂಡು ಬೆಳಗಾವಿಗೆ ಹೋಗಿದ್ದ ನಮ್ಮ ಶಾಸಕ ಮಹಾಶಯರು ಕೊನೆಗೆ ಒಂದು ಇಲಿಯನ್ನೂ ಹಿಡಿಯದೆ ವಾಪಸ್ ಬಂದಿದ್ದಾರೆ. ಮಜಾ ಅಂದರೆ ಇಲಿಗಳಿರಲಿ ಕರ್ನಾಟಕವನ್ನೇ ಬಗೆದು ತಿನ್ನುತ್ತಿರುವ ಬಳ್ಳಾರಿ ರೆಡ್ಡಿಗಳೆಂಬ ಹೆಗ್ಗಣಗಳೇ ಈ ಅಧಿವೇಶನದುದ್ದಕ್ಕೂ ಮೆರೆದಿದ್ದು. ಅಷ್ಟೇ ಅಲ್ಲ ಸರ್ಕಾರಿ ಖಜಾನೆಯಲ್ಲಿ ನಯಾ ಪೈಸೆ ಹಣವಿರದಿದ್ದರೂ ಯಡ್ಡಿ ಸರ್ಕಾರ ಹೆಚ್ಚುಕಡಿಮೆ ಮೂರೂವರೆ ಸಾವಿರ ಕೋಟಿ ರೂಪಾಯಿಗಳ ಹೊಸ ಯೋಜನೆಗಳನ್ನು ಉತ್ತರ ಕರ್ನಾಟಕಕ್ಕೆ ಘೋಷಿಸಿಬಿಟ್ಟಿದೆ. ಡಿ.ಕೆ. ಶಿವಕುಮಾರ್ ಸರಿಯಾಗಿ ಗುರುತಿಸಿದಂತೆ ಗಡಿ ವಿವಾದದ ಮೂಲಕ ಶಿವಸೇನೆಯು ಮಹಾರಾಷ್ಟ್ರದಲ್ಲಿ ಇನ್ನಷ್ಟು ಪ್ರಬಲವಾಗುವಂತೆಯೂ ಇಲ್ಲಿನ ಬಿಜೆಪಿಗಳು ಒಂದು ಅವಕಾಶ ಸೃಷ್ಟಿಸಿ ಕೊಟ್ಟಿದ್ದಾರೆ. ಈ ಗದ್ದಲದಲ್ಲಿ ನಿಜಕ್ಕೂ ಚರ್ಚೆಯಾಗಬೇಕಿದ್ದ ಶ್ರೀರಾಮ ಸೇನೆಯವರ ಕೇಸರಿ ಭಯೋತ್ಪಾದನೆಯ ವಿಚಾರ ಸದನದಲ್ಲಿ ಚರ್ಚೆಗೆ ಬರಲೇ ಇಲ್ಲ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ವಿಶ್ವಾಸಮತ ಕೋರಿದಾಗಿನ ಅಧಿವೇಶನದ ನಂತರ ಅಂದರೆ ಕಳೆದ ಆರು ತಿಂಗಳಿಂದ ಒಂದು ಪೂರ್ಣಾವಧಿ ವಿಧಾನಸಭಾ ಅಧಿವೇಶನ ನಡೆದೇ ಇರಲಿಲ್ಲ, ಈಗ ನೋಡಿದರೆ ಮೊನ್ನಿನ 8 ದಿನಗಳ ಅಧಿವೇಶನದಲ್ಲೂ ಶಾಸಕರು ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇತ್ತು, ಕೆಳಮನೆಯಲ್ಲಿ ಶೇ. ಐವತ್ತರಷ್ಟು ಹಾಗೂ ಮೇಲ್ಮನೆಯಲ್ಲಿ ಶೇ. ಅರವತ್ತು ಶಾಸಕರ ಅಟೆಂಡೆನ್ಸ್ ಮಾತ್ರ ಇತ್ತು ಎಂಬುದೇ ನಮ್ಮ ಜನಪ್ರತಿನಿಧಿಗಳ ಉಡಾಫೆ ಮನೋಭಾವಕ್ಕೆ ಸಾಕ್ಷಿಯಾಗಿದೆ.

ರೆಡ್ಡಿಗಳ ರೌಡಿಸಂ

ಡೆಮಾಕ್ರಸಿಯೆಂಬ ಮೌಲ್ಯಗಳ ತಲೆಬುಡ ತಿಳಿದಿರದ ಮುಠ್ಠಾಳರು ವಿಧಾನಸಭೆಗೆ ಹೋದರೆ ಏನಾಗಬಹುದು ಎಂಬುದಕ್ಕೆ ಬಳ್ಳಾರಿ ರೆಡ್ಡಿಗಳೇ ಸಾಕ್ಷಿ.

ಶಾಸಕಾಂಗದ ಘನತೆ-ಗಾಂಭೀರ್ಯಗಳ ಗಂಧವೇ ಇರದ ಜನಾರ್ದನ ರೆಡ್ಡಿ 'ಬಳ್ಳಾರಿಗೆ ಬನ್ನಿ, ನೋಡ್ಕೋತೀವಿ' ಎಂದು ವಿರೋಧ ಪಕ್ಷದವರಿಗೆ ಬೆದರಿಕೆ ಹಾಕಿದ ಮೇಲೂ ಮುಖ್ಯಮಂತ್ರಿ ಯಡ್ಡಿ ತನ್ನ ಭಂಟ ಸಚಿವರನ್ನು ಸಮರ್ಥಿಸಿಕೊಂಡು ಮಾತನಾಡಿದ್ದು ಶಾಸಕಾಂಗದ ಇತಿಹಾಸದಲ್ಲಿ ಮೊದಲ ಘಟನೆ ಇರಬೇಕು.

ಒಂದೆಡೆ ಈ ರೀತಿಯ ಗೂಂಡಾಗಿರಿಯ ಪ್ರದರ್ಶನ ನಡೆದರೆ ಮತ್ತೊಂದೆಡೆ ಯಡ್ಡಿಯ ಅಭಿವೃದ್ಧಿ ಪ್ಯಾಕೇಜ್‌ನ ಪ್ರಹಸನ ನಡೆದದ್ದೇ ಬೆಳಗಾಂ ಅಧಿವೇಶನದ ಹೈಲೈಟ್.

ನಕಲಿ ಪ್ಯಾಕೇಜ್

ಈ ಬಿಜೆಪಿಗಳ ಬರಿದೆ ಭರವಸೆಗಳಿಗೆ ಲಂಗುಲಗಾಮು ಒಂದೂ ಇರುವಂತೆ ಕಾಣುತ್ತಿಲ್ಲ.

ಮೊನ್ನೆ ಯಡ್ಡಿ ಉತ್ತರ ಕರ್ನಾಟಕಕ್ಕೆ ಘೋಷಿಸಿದ ವಿಶೇಷ ಅಭಿವೃದ್ಧಿ ಪ್ಯಾಕೇಜ್ ವಿಚಾರವನ್ನೇ ನೋಡಿ. ಹತ್ತಾರು ಅಭಿವೃದ್ಧಿ ಕಾಮಗಾರಿಗಳಿಗೆ ಬಿಜೆಪಿ ಸರ್ಕಾರ ನೀಡಿರುವ ಭರವಸೆಯ ಮೊತ್ತ ಹೆಚ್ಚುಕಡಿಮೆ ಸಾವಿರದಿನ್ನೂರು ಕೋಟಿ ರೂ.ಗಳಾಗುತ್ತವೆ. ಕೆಲವು ಬಿಜೆಪಿಗಳು ಈ ಮೊತ್ತ ಮೂರೂವರೆ ಸಾವಿರ ಕೋಟಿ ಎನ್ನುತ್ತಿದ್ದಾರೆ. ಅಸಲಿಗೆ ಇವತ್ತು ಖಜಾನೆಯಲ್ಲಿ ಸಾಕಷ್ಟು ಹಣವೇ ಇಲ್ಲ ಎಂಬುದೊಂದು ವಾಸ್ತವವಾದರೆ ಈ ಪ್ಯಾಕೇಜ್ ಮೊತ್ತ ನಿಜಕ್ಕೂ ಸಾವಿರದಿನ್ನೂರು ಕೋಟಿಯಷ್ಟಿದೆಯಾ ಎಂಬುದು ಅನುಮಾನ ಹುಟ್ಟಿಸುತ್ತಿವೆ.

ಈ ಕಾರ್ಯಕ್ರಮಗಳ ವಿವರಗಳನ್ನು ನೋಡಿದರೂ ಕೂಡಾ ದೇವದಾಸಿಯರಿಗಾಗಿ ಎರಡೂವರೆ ಸಾವಿರ ಮನೆ ನಿರ್ಮಿಸಲು 10 ಕೋಟಿ, ಹಿಡಕಲ್ ಡ್ಯಾಂ ಉದ್ಯಾನಕ್ಕೆ 5.5 ಕೋಟಿ, ಗದಗ ವೆಟರ್ನರಿ ಆಸ್ಪತ್ರೆಗೆ 195 ಕೋಟಿ (5 ವರ್ಷದಲ್ಲಿ), ಬೀದರ್, ಬೆಳಗಾವಿ ಆಸ್ಪತ್ರೆಗಳಿಗೆ 3.2 ಕೋಟಿ, ಉತ್ತರ ಕರ್ನಾಟಕ ಜಿಲ್ಲೆಗಳ ರಸ್ತೆ ಅಭಿವೃದ್ಧಿಗೆಂದು 500 ಕೋಟಿ (3 ಹಂತಗಳಲ್ಲಿ ಆದರೆ ಅವಧಿ ನಿಗದಿಯಾಗಿಲ್ಲ).... ನೀಡುವುದಾಗಿ ಯಡ್ಡಿ ಹೇಳಿಕೊಂಡಿದ್ದಾರೆ. ಮೇಲ್ನೋಟಕ್ಕೆ ಇದೆಲ್ಲದರ ಒಟ್ಟು ಮೊತ್ತ ಸಾವಿರಾರು ಕೋಟಿಗಳಂತೆ ಭಾಸವಾದರೂ ಒಳಹೊಕ್ಕು ಲೆಕ್ಕ ಹಾಕಿದರೆ ಈ ವರ್ಷ ಈ ಬಾಬ್ತುಗಳಿಗಾಗಿ ಕನಿಷ್ಠ ನೂರು ಕೋಟಿಯೂ ಸಿಗುತ್ತಿಲ್ಲ.

ಉತ್ತರ ಕರ್ನಾಟಕದ ಜನರಿಗೆ ಮಂಕುಬೂದಿ ಎರಚುವುದು ಬಿಟ್ಟರೆ ಈ ಪ್ಯಾಕೇಜ್‌ನಲ್ಲಿ ಬೇರೇನೂ ಇಲ್ಲ. ಈ ಬಿಜೆಪಿಗಳಿಗೆ ಉತ್ತರ ಕರ್ನಾಟಕದ ಬಗ್ಗೆ ಎಷ್ಟು ಕಾಳಜಿ ಇದೆ ಎಂದು ತಿಳಿಯಲು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬೇಕು. ಈ ವರ್ಷದ ಬಜೆಟ್‌ನಲ್ಲಿ ಎಚ್‌ಕೆಡಿಬಿಗೆ ಸರ್ಕಾರ ಹತ್ತಿರತ್ತಿರ 33 ಕೋಟಿ ಅನುದಾನ ಪ್ರಕಟಿಸಿತ್ತಾದರೂ ಕೊನೆಗೆ ಅದನ್ನು ಇಪ್ಪತ್ತು ಚಿಲ್ಲರೆ ಕೋಟಿಗೆ ಇಳಿಸಲಾಗಿದೆ. ಆದರೆ 2008ರ ಡಿಸೆಂಬರ್ ಕೊನೆಯಲ್ಲೂ ಬಿಡುಗಡೆಯಾದ ಹಣ ಜುಜುಬಿ ಮೂರು ಕೋಟಿ ಮಾತ್ರ. ಎಚ್‌ಕೆಡಿಬಿಗೆ ಬಜೆಟ್‌ನಲ್ಲೇ ನಿಗದಿಯಾಗಿದ್ದ ಹಣ ಒದಗಿಸಲಾಗದವರು ಈಗ ಅದೇ ಭಾಗಕ್ಕೆ ಸಾವಿರಾರು ಕೋಟಿ ರೂ.ಗಳ ಹೊಸ ಯೋಜನೆಗಳನ್ನು ಪ್ರಕಟಿಸುತ್ತಿದ್ದಾರೆ!

ಜನ ಇದನ್ನು ಹೇಗೆ ನಂಬಬೇಕು?

ಈ ಪ್ಯಾಕೇಜ್‌ನೊಳಗೇ ಸೇರಿರುವ ಸಾವಿರದಿನ್ನೂರು ಹಾಲು ಉತ್ಪಾದಕರ ಸಂಘಗಳ ಸ್ಥಾಪನೆಯ ಘೋಷಣೆಯಲ್ಲಿ ಬಿಜೆಪಿ ರಾಜಕೀಯ ಹಿತಾಸಕ್ತಿ ಬಿಟ್ಟರೆ ಬೇರೇನೂ ಇಲ್ಲ.

■ ಪಾರ್ವತೀಶ


ಲೋಕಾಯುಕ್ತರ ಕಾಲೆಳೆದ ಯಡ್ಡಿ

ಬಳ್ಳಾರಿ ರೆಡ್ಡಿಗಳ ಅಕ್ರಮ ಗಣಿಗಾರಿಕೆ ಕುರಿತಂತೆ ವರದಿ ನೀಡಿದ್ದ ಲೋಕಾಯುಕ್ತರಿಗೆ ಯಡಿಯೂರಪ್ಪ ಕೈಕೊಟ್ಟಿದ್ದಾರೆ. ಮಾನವಂತನೊಬ್ಬ ಮುಖ್ಯಮಂತ್ರಿ ಸ್ಥಾನದಲ್ಲಿದ್ದಿದ್ದರೆ ಲೋಕಾಯುಕ್ತರ ವರದಿ ಆಧರಿಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಂಡಿರುತ್ತಿದ್ದರು. ಅಷ್ಟೇ ಅಲ್ಲ, ರೆಡ್ಡಿ ಬ್ರದರ್ಸ್ ಅನ್ನು ಮಂತ್ರಿ ಸ್ಥಾನದಿಂದ ವಜಾ ಮಾಡುತ್ತಿದ್ದರು. ಆದರೆ ರೆಡ್ಡಿಗಳ ಕೊಳ್ಳೆ ಹಣದಲ್ಲೇ ತನ್ನ ಸಿಎಂ ಸ್ಥಾನ ಭದ್ರಪಡಿಸಿಕೊಳ್ಳುತ್ತಿರುವ ಯಡ್ಡಿ ಈಗ ರೆಡ್ಡಿಗಳ ಎಲ್ಲಾ ಅಕ್ರಮಗಳಿಗೂ ಕಾವಲು ಬಂಟನಂತೆ ಆಗಿಹೋಗಿದ್ದಾರೆ. ಬೆಳಗಾವಿ ಅಧಿವೇಶನದ ಮುಕ್ಕಾಲು ಅವಧಿ ಗಣಿ ಹಗರಣದ ಸುತ್ತಲೇ ಗಿರಕಿ ಹೊಡೆದರೂ ಯಡ್ಡಿ ಮಾತ್ರ ರೆಡ್ಡಿಗಳನ್ನು ಬಿಟ್ಟುಕೊಡಲಿಲ್ಲ. ಲೋಕಾಯುಕ್ತ ವರದಿಗೆ ಪ್ರತಿಯಾಗಿ ಅರಣ್ಯ ಇಲಾಖೆಯ ಮೂಲಕ ಇನ್ನೊಂದು ನಕಲಿ ವರದಿ ಸಿದ್ಧಪಡಿಸಿ ರೆಡ್ಡಿಗಳಿಗೆ ಕ್ಲೀನ್ ಚೀಟ್ ಕೊಡಿಸಿದ್ದಾರೆ ಯಡ್ಡಿ. ಇಲಾಖಾ ಮುಖ್ಯಸ್ಥ ದಿಲೀಪ್ ಕುಮಾರ್ ಆ ವರದಿಗೆ ಸಹಿ ಮಾಡಲು ನಿರಾಕರಿಸಿದರೆಂದು ರಾತ್ರೋರಾತ್ರಿ ಎತ್ತಂಗಡಿ ಮಾಡಿ ಎಸ್. ನಾಗರಾಜನೆಂಬ ಬೆನ್ನೆಲುಬಿಲ್ಲದ ಅಧಿಕಾರಿಯನ್ನು ಆ ಸ್ಥಾನಕ್ಕೆ ತಂದು ಸಹಿ ಮಾಡಿಸಿಕೊಂಡಿದ್ದಾರೆ.

ಲೋಕಾಯುಕ್ತರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿಯೂ, ಭ್ರಷ್ಟಾಚಾರ ಮಟ್ಟ ಹಾಕುವುದಾಗಿಯೂ ಬೊಗಳುತ್ತಿದ್ದ ಯಡ್ಡಿ ಈಗ ರೆಡ್ಡಿಗಳನ್ನು ಪಾರು ಮಾಡಲು ಏನು ತಿಂದಿರಬಹುದು? ಎಷ್ಟು ತಿಂದಿರಬಹುದು?

‘ಬಂ’ ಬಲಿಗೆ ಯಡ್ಡಿಯ ‘ದಂಡಾ

ಮತ್ತೆ ಕಾಂಗ್ರೆಸ್ ಸೇರಿ ಬಲಗೊಳ್ಳುತ್ತಿರುವ ಬಂಗಾರಪ್ಪನವರನ್ನು ಬಲಿ ತೆಗೆದುಕೊಳ್ಳಲು ಮುಖ್ಯಮಂತ್ರಿ ಯಡಿಯೂರಪ್ಪ ‘ದಂಡಾ’ ಬೀಸಿದ್ದಾರೆ. ಈ ದಂಡಾ ಬೇರಾವುದೂ ಅಲ್ಲ, ಈಗ ವಾದವಿವಾದಗಳ ಕೇಂದ್ರ ಬಿಂದುವಾಗಿರುವ ದಂಡಾವತಿ ನೀರಾವರಿ ಯೋಜನೆ. “ಈ ಯೋಜನೆಯೇ ದಂಡಾ. ಇದರಿಂದ ಇಲ್ಲಿನ ಜನರಿಗೆ ಏನೂ ಪ್ರಯೋಜನವಿಲ್ಲ” ಎಂದು ಸೊರಬದ ಸ್ಥಳೀಯರು ಬಾಯಿಬಾಯಿ ಬಡಿದುಕೊಳ್ಳುತ್ತಿದ್ದರೂ ಅವರ ಪ್ರತಿಭಟನೆಗೆ ಮೂರುಕಾಸಿನ ಬೆಲೆ ಕೊಟ್ಟಿಲ್ಲ ಯಡ್ಡಿ. ಬದಲಾಗಿ ಜನರ ಆಶಯದ ವಿರುದ್ಧ ತಾನು ಇಚ್ಛಿಸಿದ್ದನ್ನು ಮಾಡಿಯೇ ತೀರುತ್ತೇನೆಂಬ ಕೆಟ್ಟ ಹಠದಿಂದ ಇತ್ತೀಚೆಗೆ ಪೊಲೀಸರ ರಕ್ಷಣೆಯಲ್ಲಿ ಹೋಗಿ, ಯೋಜನೆಗೆ ಸಂಬಂಧ ಪಡದೇ ಇರುವ ಜಾಗದಲ್ಲಿ ಶಂಕುಸ್ಥಾಪನೆ ಮಾಡಿ ಹೆಲಿಕಾಪ್ಟರ್‌ನಲ್ಲಿ ಎಸ್ಕೇಪ್ ಆಗಿ ಬಂದಿದ್ದಾರೆ.



ಯಡ್ಡಿಯ ಈ ಎಲ್ಲ ಕ್ರಮಗಳ ಹಿಂದ ರೈತರ ಹಿತಾಸಕ್ತಿಯಾಗಲಿ, ಅಭಿವೃದ್ಧಿಯ ಬಯಕೆಯಾಗಲಿ, ಜನಸಾಮಾನ್ಯರ ಬಗೆಗಿನ ಕಾಳಜಿಯಾಗಲಿ ಇಲ್ಲವೇ ಇಲ್ಲ, ಬದಲಾಗಿ ಇದರ ಹಿಂದೆ ಅವರ ರಾಜಕೀಯ ದುರುದ್ದೇಶ, ಹಣದ ದುರಾಶೆ ಮತ್ತು ಅಪಾರವಾದ ಪುತ್ರ ವ್ಯಾಮೋಹಗಳು ಅಡಗಿವೆ!

ಈ ಯೋಜನೆಯನ್ನು ‘ಬಂ’ ವಿರೋಧಿಸುತ್ತಿರುವುದರಿಂದ ಅದನ್ನು ಅವರ ತವರಿನಲ್ಲೇ ಅನುಷ್ಠಾನಕ್ಕೆ ತಂದು ‘ಬಂ’ಗೆ ಸೆಡ್ಡು ಹೊಡೆಯುವುದು ಯಡ್ಡಿಯ ಮೊದಲನೆ ಗುರಿ. ಬರಲಿರುವ ಲೋಕಸಭಾ ಚುನಾವಣೆಯಲ್ಲಿ ತಮ್ಮ ಮಗ ರಾಘವೇಂದ್ರನಿಗೆ ಟಿಕೆಟ್ ಕೊಡಿಸಿ ಈ ಯೋಜನೆಯ ಮೂಲಕ ಆತನ ಓಟ್‌ಬ್ಯಾಂಕ್ ಗಟ್ಟಿಗೊಳಿಸುವುದು ಎರಡನೆಯ ಉದ್ದೇಶ. ಇವೆರಡರ ನಡುವೆ ಬರೋಬ್ಬರಿ 272 ಕೋಟಿ ರೂಪಾಯಿ ವೆಚ್ಚದ ಈ ನೀರಾವರಿ ಯೋಜನೆಯ ಹೆಸರಿನಲ್ಲಿ ಕಮಿಷನ್ ಹೊಡೆದು ತಮ್ಮ ‘ಅಭಿವೃದ್ಧಿ’ ಮಾಡಿಕೊಳ್ಳುವುದು ಅಸಲಿ ಹುನ್ನಾರ! ಇಲ್ಲವೆಂದರೆ ಕೇವಲ 14 ಕೋಟಿ ರೂ. ವೆಚ್ಚದ ಮತ್ತು ಹೆಚ್ಚು ಉಪಯುಕ್ತವಾಗಿರುತ್ತಿದ್ದ ದಂಡಾವತಿ ನದಿ ತಿರುವು ನಾಲಾ ಯೋಜನೆಯನ್ನು ಕೈ ಬಿಡುತ್ತಿದ್ದರೆ? ಪ್ರಸ್ತುತ ಯೋಜನೆಯನ್ನು ವಿರೋಧಿಸಿ ಶಿವಣ್ಣ ಎಂಬ ರೈತ ಆತ್ಮಹತ್ಯೆ ಮಾಡಿ ಕೊಂಡಿದ್ದರೂ ಆತನ ಸಮಾಧಿಯ ಮೇಲೆ ಶಂಕುಸ್ಥಾಪನೆ ಮಾಡುತ್ತಿದ್ದರೆ? ‘ಬಂ’ಗೆ ಪಾಠ ಕಲಿಸಿ ಶಿವಮೊಗ್ಗೆಯಲ್ಲಿ ಬಿಜೆಪಿಗೆ ಅಪಥ್ಯವಾದ ವಂಶಪಾರಂಪರ್ಯ ರಾಜಕೀಯಕ್ಕೆ ಬುನಾದಿ ಹಾಕಲು ಮುಂದಾಗುತ್ತಿದ್ದರೆ? ಖಂಡಿತವಾಗಿಯೂ ಇಲ್ಲ!!

“ಈ ಯೋಜನೆಯೇ ದಂಡಾ. ಇದರಿಂದ ಇಲ್ಲಿನ ಜನರಿಗೆ ಏನೂ ಪ್ರಯೋಜನವಿಲ್ಲ” ಎಂದು ಸೊರಬದ ಸ್ಥಳೀಯರು ಬಾಯಿಬಾಯಿ ಬಡಿದುಕೊಳ್ಳುತ್ತಿದ್ದರೂ ಅವರ ಪ್ರತಿಭಟನೆಗೆ ಮೂರುಕಾಸಿನ ಬೆಲೆ ಕೊಟ್ಟಿಲ್ಲ ಯಡ್ಡಿ. ಬದಲಾಗಿ ಜನರ ಆಶಯದ ವಿರುದ್ಧ ತಾನು ಇಚ್ಛಿಸಿದ್ದನ್ನು ಮಾಡಿಯೇ ತೀರುತ್ತೇನೆಂಬ ಕೆಟ್ಟ ಹಠದಿಂದ ಇತ್ತೀಚೆಗೆ ಪೊಲೀಸರ ರಕ್ಷಣೆಯಲ್ಲಿ ಹೋಗಿ, ಯೋಜನೆಗೆ ಸಂಬಂಧ ಪಡದೇ ಇರುವ ಜಾಗದಲ್ಲಿ ಶಂಕುಸ್ಥಾಪನೆ ಮಾಡಿ ಹೆಲಿಕಾಪ್ಟರ್‌ನಲ್ಲಿ ಎಸ್ಕೇಪ್ ಆಗಿ ಬಂದಿದ್ದಾರೆ.

ಏನಿದು ದಂಡಾವತಿ ಯೋಜನೆ?

ದಂಡಾವತಿ ಅಣೆಕಟ್ಟು ನಿನ್ನೆ ಮೊನ್ನೆಯ ಯೋಜನೆಯೇನಲ್ಲ, 1895ರಲ್ಲಿಯೇ ಬ್ರಿಟಿಷ್ ಸರ್ಕಾರವಿದ್ದಾಗ ಈ ಯೋಜನೆಯ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಆನಂತರ ಹಲವಾರು ಬಾರಿ ಇದು ಹೊಸ, ಹೊಸ ರೂಪ ಪಡೆದುಕೊಂಡಿತ್ತು. ಸ್ವಾತಂತ್ರ್ಯದ ನಂತರವೂ 1952–52ರಲ್ಲಿ ಸುಮಾರು 20 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಯೋಜನೆ ರೂಪಿಸಿ, ಸರ್ಕಾರಕ್ಕೆ ಸಲ್ಲಿಸಲಾಗಿತ್ತು, ಆದರೆ ಈ ಯೋಜನೆಯಿಂದಾಗಿ ನಿರಾಶ್ರಿತರಾಗುವ ಜನ ತೀವ್ರವಾಗಿ ವಿರೋಧಿಸಿದ್ದರಿಂದ ಈ ಯೋಜನೆ ನೆನೆಗುದಿಗೆ ಬಿದ್ದಿತ್ತು.

ಕೇವಲ 55 ಕಿ.ಮೀ. ಉದ್ದವಿರುವ ದಂಡಾವತಿ ಎಂಬುದು ವರದಾ ನದಿಯ ಚಿಕ್ಕ ಉಪ ನದಿ. ಬೇಸಿಗೆಯಲ್ಲಿ ಸಂಪೂರ್ಣವಾಗಿ ಬತ್ತಿಹೋಗುವ ಇದನ್ನು ನದಿ ಎನ್ನುವುದಕ್ಕಿಂತ ದೊಡ್ಡ ಹಳ್ಳ ಎಂದೇ ಕರೆಯಬಹುದು. ಈ ಹಳ್ಳ ಹುಟ್ಟಿ ಮೂರು ಕಿ.ಮೀ. ಹರಿಯುವುದರೊಳಗೆ ಒಂದು ಅಣೆಕಟ್ಟು ಕಟ್ಟಿದರೆ ಅದರಲ್ಲಿ ಇನ್ನೆಷ್ಟು ನೀರು ಸಂಗ್ರಹವಾಗಬಹುದು?


ಆದರೆ ಯಡ್ಡಿ ಬಳಿ ಇಂತಹ ಯಾವ ಪ್ರಶ್ನೆಗಳಿಗೂ ಉತ್ತರವಿಲ್ಲ, ಬದಲಾಗಿ “ದಂಡಾವತಿಯಲ್ಲಿ ನೀರಿಲ್ಲದಿದ್ದರೆ ಏನಾಯಿತು? ಇನ್ನೊಂದು ನದಿ ಮಾವಿನ ಹೊಳೆಗೆ ಮತ್ತೊಂದು ಅಣೆಕಟ್ಟು ನಿರ್ಮಿಸಿ ಅಲ್ಲಿಂದ ಈ ಅಣೆಕಟ್ಟೆಗೆ ನೀರು ಹರಿದುಬರುವಂತೆ ಮಾಡುತ್ತೇವೆ” ಎನ್ನುತ್ತಾರೆ. ಇಂತಹ ಮೂರ್ಖತನವನ್ನು ಕೇಳಿ ಯಾವ ಕಡೆಯಿಂದ ನಗಬೇಕೆಂದು ಸೊರಬದ ಜನ ಯೋಚಿಸುತ್ತಿದ್ದಾರೆ!

ಆದರೆ ಅಂಕಿಅಂಶಗಳನ್ನು ಉದಾರತೆಯಿಂದ ಉದುರಿಸುತ್ತಿದೆ ಯಡ್ಡಿ ಪಟಾಲಂ. ಅವರ ಪ್ರಕಾರ “ದಂಡಾವತಿ ಯೋಜನೆಯಲ್ಲಿ ಮರೂರು ಎಂಬಲ್ಲಿ ದಂಡಾವತಿ ನದಿಗೆ ಅಣೆಕಟ್ಟು ಕಟ್ಟಲಾಗುತ್ತದೆ. ಈ ಮೂಲಕ 1.88 ಟಿಎಂಸಿ ನೀರು ಸಂಗ್ರಹಿಸಲಾಗುತ್ತದೆ. ಈ ನೀರನ್ನು ಒಟ್ಟು 31 ಗ್ರಾಮಗಳ 17,174 ಎಕರೆ ಕೃಷಿ ಭೂಮಿಗೆ ಉಣಿಸಲಾಗುತ್ತದೆ.”

“ಅಲ್ಲೀ 1.88 ಟಿಎಂಸಿ ನೀರು ಸಂಗ್ರಹಿಸಲು 1,345 ಎಕರೆ ಕೃಷಿ ಭೂಮಿ ಮುಳುಗಡೆಯಾಗಲಿದೆ. ಜೊತೆಗೆ 112 ಎಕರೆ ಅರಣ್ಯ ಭೂಮಿ, ನಾಲ್ಕು ಹಳ್ಳಿಗಳು ಸಂಪೂರ್ಣವಾಗಿ ಮತ್ತು 11 ಹಳ್ಳಿಗಳು ಭಾಗಶಃವಾಗಿ ಮುಳುಗಡೆಯಾಗಲಿವೆ. ನೂರಾರು ಕುಟುಂಬಗಳು ನಿರಾಶ್ರಿತರಾಗಲಿವೆ. ಈ ಯೋಜನೆಯಿಂದ ಯಾರಿಗೆ ಪ್ರಯೋಜನ?” ಎಂದು ಸವಾಲು ಹಾಕಿದರೆ, “ಇಲ್ಲ ಕೇವಲ 100 ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಳ್ಳಲಿದ್ದಾರೆ” ಎಂದು ಭೂಸಾ ಬಿಡುತ್ತಾರೆ. ವಾಸ್ತವವಾಗಿ ಈ ಅಣೆಕಟ್ಟು ನಿರ್ಮಾಣವಾಗಲಿರುವ ಜಾಗದಲ್ಲಿ ಸಾವಿರಾರು ರೈತರು ಬಗರ್‌ಹುಕುಂ ಮಾಡಿಕೊಂಡಿದ್ದು, ಅವರನ್ನು ಸರ್ಕಾರ ಲೆಕ್ಕಕ್ಕೇ ತೆಗೆದುಕೊಂಡಿಲ್ಲ.

ಇದೆಲ್ಲದರ ಅರ್ಥ ಇಷ್ಟೇ: ಈ ಅಣೆಕಟ್ಟನಲ್ಲಿ ಅಕಸ್ಮಾತ್ ಒಂದಿಷ್ಟು ನೀರು ಸಂಗ್ರಹವಾದರೂ ಅದು ಉದ್ದೇಶಿತ ಪ್ರದೇಶಕ್ಕೆ ತಲುಪುವ ಗ್ಯಾರಂಟಿ ಇಲ್ಲ. ಮಾತ್ರವಲ್ಲ ಇದರಿಂದ ಆನವಟ್ಟಿ ಪ್ರದೇಶಕ್ಕೆ ಅಗತ್ಯವಿರುವಷ್ಟು ನೀರು ಹರಿಯುವುದಿಲ್ಲ, ಆದರೆ ಯಡ್ಡಿ ಮಾತ್ರ 272 ಕೋಟಿ ರೂ. ವೆಚ್ಚ ಮಾಡಿ, ನೀರೇ ಇಲ್ಲದಿದ್ದರೂ ಅಣೆಕಟ್ಟು ಕಟ್ಟಲು ಹೊರಟಿದ್ದಾರೆ!

ಇಂತಹ ಪೆದ್ದು ಗಿರಾಕಿ ತನ್ನನ್ನು ರೈತ ನಾಯಕ ಎಂದು ಬಿಂಬಿಸಿಕೊಳ್ಳುತ್ತಾನೆ?! ಇದು ವ್ಯಂಗ್ಯವೋ, ಕರ್ನಾಟಕದ ದುರಂತವೋ ಕನ್ನಡಾಂಬೆಯೇ ಉತ್ತ...



ರಾಜಕೀಯಕ್ಕೆ ‘ದಂಡಾ’ವತಿ

ಈಗ ಈ ಯೋಜನೆಯನ್ನು ವಿರೋಧಿಸಿ ‘ಹೋ... ಕ್ಕಿಳಿದಿರುವ ಬಂ, 1989ರಲ್ಲಿ ಈ ಯೋಜನೆ... ಜಾರಿಗೆ ತರಬೇಕೆಂದು ಪಟ್ಟು ಹಿಡಿದಿದ್ದರು! ... ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆಯ ಸ... ಆದೇಶ ಕೂಡ ನೀಡಿದ್ದರು. ಆದರೆ ಸಮೀಕ್ಷೆ ... ನೀರಾವರಿ ಇಲಾಖೆಯ ಅಧಿಕಾರಿಗಳು ಈ ಯೋ... ಆರ್ಥಿಕವಾಗಿ ಮತ್ತು ತಾಂತ್ರಿಕ... ಕಾರ್ಯಸಾಧುವಲ್ಲ ಎಂದು ... ನೀಡಿದ್ದರು.

ಕಳೆದ ವಿಧಾನಸಭಾ ಚು... ವಣೆಯ ಸಂದರ್ಭದಲ್ಲಿ ತ... ಮುಖ್ಯ ಮಂತ್ರಿಯಾದರೆ ... ಯೋಜನೆಯನ್ನು ಜಾರಿಗೆ ತ... ದಾಗಿ ಯಡ್ಡಿ ಪ್ರಚಾರ ನಡೆಸಿ ಸೊ... ದಲ್ಲಿ ಬಿಜೆಪಿ ಗೆಲ್ಲುವಂತೆ ಮಾಡಿ... ಆನಂತರ ಇದಕ್ಕೆಂದು ಬಜೆಟ್... ಒಂದಿಷ್ಟು ಹಣ ತೆಗೆದಿರಿಸಿ ಫಲಾ... ಭವಿಗಳ ಮೂಗಿಗೆ ತುಪ್ಪ ಸವರಿ... ಈಗ ಶಂಕುಸ್ಥಾಪನೆ ನೆರವೇ... ಲೋಕಸಭಾ ಚುನಾವಣೆಯಲ್ಲಿ ತ... ಮಗನ ಮತಬ್ಯಾಂಕ್ ಗಟ್ಟಿಮ... ಕೊಳ್ಳಲು ಹೊರಟಿದ್ದಾರೆ. ಇ... ಹಿಂದೆಯೂ ಯಡ್ಡಿಯ ಸ್ವಾ... ಮತ್ತು ಜಾತಿರಾಜಕಾರಣ ಅಡಗಿ... ಮೊದಲನೆಯದಾಗಿ ಈ ಯೋ... ನೆಯ ಫಲಾನುಭವಿಗಳ ಗ್ರಾಮಗಳ ಪಟ್ಟಿಯಲ್ಲಿ ಶಿಕಾರಿ... ಕ್ಷೇತ್ರದ ಒಂದಿಷ್ಟು ಭಾಗವೂ ಸೇರಿದೆ. ಎರಡನೆಯದ... ಆನವಟ್ಟಿ ಮತ್ತು ಜಡೆ ಹೋಬಳಿಯ ಫಲಾನುಭವಿಗ... ಲಿಂಗಾಯತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ!

ಆದರೆ ಈ ಯೋಜನೆಯಿಂದ ತಮ್ಮ ಭೂಮಿಯ... ಕಳೆದುಕೊಳ್ಳಲಿರುವವರಲ್ಲಿ ಹೆಚ್ಚಿನ ಜನ ಈ... ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ. ಮಾತ್ರ... ಅವರೊಂದಿಗೆ ಬಗರ್ ಹುಕುಂ ಮಾಡಿಕೊಂಡು ಜೀ... ಸಾಗಿಸುತ್ತಿದ್ದವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿಂದು... ವರ್ಗದವರೇ ಇದ್ದಾರೆ. ಈಗ ಇವರನ್ನೆಲ್ಲ ಹೊರದೂ... ತಮ್ಮ ಕ್ಷೇತ್ರ, ಜಾತಿಯ ಜನ ಮತ್ತು ಮಗನ ಉದ್ಧಾರಕ್ಕಾ... ಯಡ್ಡಿ ನಿಂತಿದ್ದಾರೆ.

ಆದರೆ ಯಡ್ಡಿ ವಿರುದ್ಧ ಬಂಗಾರಪ್ಪ ಯೋಜನೆಯಿಂ... ನಿರಾಶ್ರಿತರಾಗಲಿರುವ ಜನರೊಂದಿಗೆ ಹೋರಾಟ... ನಿಂತಿದ್ದಾರೆ. ಇದರ ಹಿಂದೆ ‘ಬಂ’ ಅವರ ರಾಜಕೀ... ದುರಾಲೋಚನೆಯೂ ಅಡಗಿದೆ ಎಂಬುದನ್ನು ಒಪ್ಪಿಕೊಳ್ಳ...


ಎಲ್ಲಾ ಮಗನಿಗಾಗಿ!

ದಂಡಾವತಿ ನದಿಯಲ್ಲಿ ನೀರೇ ಇಲ್ಲ, ಇನ್ನು ಯೋಜನೆ ಕುರಿತಂತೆ ಸಮೀಕ್ಷೆ ನಡೆಸಿಲ್ಲ, ಕೇಂದ್ರದ ಅನುಮತಿಯಂತೂ ಸಿಕ್ಕಿಲ್ಲ, ಆದರೂ ಮುಖ್ಯಮಂತ್ರಿ ಯಡಿಯೂರಪ್ಪ ತರಾತುರಿಯಲ್ಲಿ ದಂಡಾವತಿ ನೀರಾವರಿ ಯೋಜನೆಯನ್ನು ಘೋಷಿಸುತ್ತಾರೆಂದರೆ, ಜನರ ಪ್ರತಿಭಟನೆ ಕಂಡು ಹೆದರಿ ಬೇರಾವುದೋ ಜಾಗದಲ್ಲಿ ಶಂಕುಸ್ಥಾಪನೆ ಮಾಡಿ ಪರಾರಿಯಾಗುತ್ತಾರೆಂದರೆ, ಈ ಯೋಜನೆಗೆ ಸಂಬಂಧಪಟ್ಟಂತೆ ಓರ್ವ ರೈತ ಆತ್ಮಹತ್ಯೆ ಮಾಡಿಕೊಂಡಿದ್ದರೂ ಅದನ್ನು ಮಾಡೇ ತೀರುತ್ತೇನೆಂದು ಶಪಥಗೈಯ್ಯುತ್ತಾರೆಂದರೆ ಏನರ್ಥ?

ಈ ಪ್ರಶ್ನೆಗೆ ಉತ್ತರ ಸ್ಪಷ್ಟ.

ಯಡ್ಡಿಗೂ ಸನ್ ಸ್ಟ್ರೋಕ್ ರೋಗ ಬಡಿದಿದ್ದು ತನ್ನ ಪುತ್ರ ರಾಘವೇಂದ್ರನನ್ನು ಬರಲಿರುವ ಲೋಕಸಭೆ ಚುನಾವಣೆಯಲ್ಲಿ ಶಿವಮೊಗ್ಗದಿಂದ ನಿಲ್ಲಿಸಿ ಗೆಲ್ಲಿಸುವ ಹುನ್ನಾರ ನಡೆಸಿದ್ದಾರೆ. ಈಗಾಗಲೇ ರಾಘವೇಂದ್ರನನ್ನು ಗೆಲ್ಲಿಸಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ ಯಡ್ಡಿ. ಮೊನ್ನೆ ಸಂಕ್ರಾಂತಿಯಂದು ಶಿಕಾರಿಪುರದ ಪ್ರತಿ ಮನೆಗೂ ಎಳ್ಳು-ಬೆಲ್ಲ, ಕ್ಯಾಲೆಂಡರ್ ಕಳುಹಿಸಿರುವ ಯಡ್ಡಿ ಕ್ಷೇತ್ರದಾದ್ಯಂತ 70 ಸಾವಿರಕ್ಕೂ ಹೆಚ್ಚು ಸೀರೆಗಳನ್ನು ವಿತರಿಸಿ ಮಗನ ಪರವಾಗಿ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿದ್ದಾರೆ. ರಾಘವೇಂದ್ರನ ಗೆಲುವಿಗಾಗಿ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ಮಾಡಿ ಎಂದು ತಮ್ಮ ಹಿಂಬಾಲಕರಿಗೆ ಆದೇಶಿಸಿದ್ದಾರೆ. ಹೀಗಾಗಿ ಹರತಾಳು ಹಾಲಪ್ಪ ಮತ್ತು ಇತರೆ ಚೆಡ್ಡಿಗಳು ಇನ್ನಿಲ್ಲದ ಉತ್ಸಾಹದಿಂದ ಓಡಾಡುತ್ತಿದ್ದಾರೆ.

ಆದರೆ ಯಡ್ಡಿ ಮತ್ತು ಹರತಾಳು ಎಷ್ಟೇ ತಿಪ್ಪರಲಾಗ ಹೊಡೆದರೂ ಅದು ಅಷ್ಟು ಸುಲಭವಲ್ಲ, ಯಾಕೆಂದರೆ ಅದೇ ಟಿಕೆಟ್‌ಗಾಗಿ ಹಲವಾರು ನಾಯಕರು ಸ್ಪರ್ಧಿಸುತ್ತಿದ್ದಾರೆ. ಬಂಗಾರಪ್ಪ ಬಿಜೆಪಿಗೆ ಟಾಟಾ ಹೇಳುತ್ತಿದ್ದಂತೆ ತಾವೇ ಮುಂದಿನ ಬಾರಿ ಲೋಕಸಭಾ ಅಭ್ಯರ್ಥಿಯಾಗಬೇಕೆಂದು ಆಯನೂರು ಮಂಜುನಾಥ ಎಂಬ ಅರೆಚಡ್ಡಿ, ಲಾರಿ ಮಾಲೀಕ ಜ್ಯೋತಿಪ್ರಕಾಶ್ ಮತ್ತು ಮತ್ತೂರು ಬ್ರಾಹ್ಮಣ ಭಾನುಪ್ರಕಾಶ್ ತುದಿಗಾಲ ಮೇಲೆ ನಿಂತಿದ್ದರು. ಈಗ ಯಡ್ಡಿ ದಿಢೀರೆಂದು ತನ್ನ ಮಗನನ್ನು ಮುಂದೆ ಮಾಡಿರುವುದರಿಂದ ಅವರೆಲ್ಲ ಯಡ್ಡಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅದನ್ನು ಕಂಡು ವಿಚಲಿತರಾಗದ ಯಡ್ಡಿ ಈಗ ಅವರುಗಳ ನಡುವೆಯೇ ಜಗಳ ಹಚ್ಚಿಸಿ ತನ್ನ ಮಗನೇ ಅನಿವಾರ್ಯವಾಗಿ ಒಮ್ಮತದ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ಸಂಚು ರೂಪಿಸಿದ್ದಾರೆ.



ರಾಘವೇಂದ್ರ

ಈ ಎಲ್ಲ ಬೆಳವಣಿಗೆಗಳಿಂದ ಬೇಸತ್ತಿರುವ ಕೆಲ ನಾಯಕರು “ಯಾರಿಗಾದರೂ ಟಿಕೆಟ್ ಕೊಡಲಿ, ಏನಾದರೂ ಮಾಡಿಕೊಳ್ಳಲಿ” ಎಂದು ನಿರ್ಧರಿಸಿ ಯಾರು ಪಕ್ಷದ ಅಭ್ಯರ್ಥಿಯಾಗಬೇಕೆಂಬ ಅಧಿಕಾರವನ್ನು ಜಿಲ್ಲೆಯ ‘ತ್ರಿಮೂರ್ತಿ’ (ಯಡ್ಡಿ ಈಶ್ವರಪ್ಪ ಶಂಕರಮೂರ್ತಿ)ಗಳಿಗೆ ಬಿಟ್ಟು ಸುಮ್ಮನಾಗಿದ್ದಾರೆ.

ಆದರೆ ಯಡ್ಡಿ ತನ್ನ ಮಗನಿಗೆ ಟಿಕೆಟ್ ಕೇಳುತ್ತಿದ್ದಾರೆ ಎಂದು ಗೊತ್ತಾಗುತ್ತಿದ್ದಂತೆಯೇ ಅವರ ವಿರೋಧಿ ಬಣ ಮತ್ತೆ ಎದ್ದು ಕುಳಿತಿದೆ. ಅನಂತು ಕಡೆಯವರು ಈ ‘ಕುಟುಂಬ’ ರಾಜಕಾರಣವನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ಯಡ್ಡಿ ಹೇಳಿದ್ದಕ್ಕೆಲ್ಲಾ ಗೋಣು ಆಡಿಸುತ್ತಾ ಹಿಂದೆ-ಮುಂದೆ ಸುತ್ತುತ್ತಿದ್ದ ರಾಜ್ಯಾಧ್ಯಕ್ಷ ಸದಾನಂದ ಗೌಡ ಈ ಬಾರಿ ಯಡ್ಡಿ ವಿರುದ್ಧ ತಿರುಗಿ ಬೀಳುವ ಧೈರ್ಯ ತೋರಿದ್ದಾರೆ.

ಆದರೆ ಒಂದು ಮೂಲದ ಪ್ರಕಾರ ಹಲ್ಕುಬಿ ಗೌಡರ ಬುಡಕ್ಕೇ ಯಡ್ಡಿ ಫಿಟ್ಟಿಂಗ್ ಇಡಲು ಯತ್ನಿಸುತ್ತಿದ್ದಾರೆ. “ಹೇಗಿದ್ದರೂ ಇತ್ತೀಚೆಗೆ ಮನೋರಮಾ ಮಧ್ವರಾಜ್ ಬಿಜೆಪಿ ತೊರೆದು ಕಾಂಗ್ರೆಸ್‌ಗೆ ವಾಪಸ್ಸಾಗಿರುವುದರಿಂದ ಅವರು ಪ್ರತಿನಿಧಿಸುತ್ತಿದ್ದ ಉಡುಪಿ ಕ್ಷೇತ್ರ ತೆರವಾಗಿದೆ. ಅಲ್ಲಿ ಪಕ್ಷ ಗೆಲ್ಲಬೇಕೆಂದರೆ ಓರ್ವ ಸ್ಟ್ರಾಂಗ್ ನಾಯಕನೇ ಪಕ್ಷದ ಅಭ್ಯರ್ಥಿ ಆಗಬೇಕು. ಆದ್ದರಿಂದ ಸದಾನಂದ ಗೌಡರನ್ನು ಅಲ್ಲಿಂದ ನಿಲ್ಲಿಸೋಣ. ಗೌಡರ ಮಂಗಳೂರು ಕ್ಷೇತ್ರದಿಂದ ಬೇರೆ ಯಾರಿಗಾದರೂ ಟಿಕೆಟ್ ಕೊಡೋಣ” ಎಂಬ ವರಾತೆಯನ್ನು ಯಡ್ಡಿ ಶುರುಹಚ್ಚಿಕೊಂಡಿದ್ದಾರೆ. ಇದರಿಂದ ಗೌಡ ಕಂಗಾಲ... ಹೋಗಿದ್ದಾರೆ. ಅವರಿಗೆ ಉಡುಪಿಗೆ ಹೋಗುವ ... ಇಲ್ಲ, ಮಂಗಳೂರನ್ನು ತೊರೆಯುವ ಬಯಕೆಯೂ ಇ... ಆದ್ದರಿಂದ ಅವರೂ ಯಡ್ಡಿಯನ್ನು ಈಗ ವಿರೋಧಿ... ತ್ತಿದ್ದಾರೆ. ಇವರಿಬ್ಬರ ಈ ಜಗಳದಿಂದಾಗಿಯೇ ಕ... ಭಾನುವಾರ ನಡೆದ ಅಭ್ಯರ್ಥಿ ಆಯ್ಕೆಯಲ್ಲಿ ಸಭೆಯ... ಇವರಿಬ್ಬರು ಬಾಯಿಗೆ ಬಂದಹಾಗೆ ಬೈದುಕೊಂಡಿದ್ದ...

ಆದರೂ ಯಡ್ಡಿ ತಮ್ಮ ಪಟ್ಟು ಸಡಿಲಿಸಿಲ್ಲ, ಆದ್ದರಿಂ... ಈ ಪ್ರಕರಣ ಸಂಘಪರಿವಾರದ ನಾಯಕರ ಅಂಗಳವಾ... ರಾಷ್ಟ್ರೋತ್ಥಾನ ಪರಿಷತ್ತಿಗೆ ಹೋಗಿತ್ತು, ಕಾಂಗ್ರೆಸ್‌ನ ಹಾಗೆ... ದೇವೇಗೌಡರ ಕುಟುಂಬ ರಾಜಕಾರಣವನ್ನು ವಿರೋಧಿಸು... ಬಿಜೆಪಿ ಯಾವುದೇ ಕಾರಣಕ್ಕೂ ಕುಟುಂಬ ರಾಜಕಾರಣ... ಅವಕಾಶ ಮಾಡಿಕೊಡಬಾರದು ಎಂಬ ಸಂದೇಶವ... ಚೆಡ್ಡಿ ನಾಯಕರು ನೀಡಿದ್ದಾರಾದರೂ, ಯಡ್ಡಿ ಮ... ರಾಘವೇಂದ್ರನಿಗೆ ಟಿಕೆಟ್ ಕೊಡಬೇಡಿ ಎಂದು ಸ್ಪಷ್ಟವಾ... ಹೇಳಿಲ್ಲ.

ಮೊನ್ನೆ ಶುಕ್ರವಾರ, ಶಿವಮೊಗ್ಗದ ಅಭ್ಯರ್ಥಿ ಆ... ಕುರಿತು ಚರ್ಚೆ ನಡೆಸುವುದಾಗಿ ಹೇಳಿದ ಬಿಜೆಪಿ, ಸ್ಥಳೀ... ನಾಯಕರಿಗೆ ಕರೆ ಕಳಿಸಿದ್ದರೂ ಕೊನೆ ಕ್ಷಣದಲ್ಲಿ ... ವಿಚಾರವನ್ನೇ ಕೈಬಿಟ್ಟಿತ್ತು. ಯಡ್ಡಿಯನ್ನು ಎದು... ಹಾಕಿಕೊಂಡು ಈ ವಿಷಯದ ದೊಡ್ಡ ರಾದ್ಧಾಂ... ಮಾಡಬೇಕೋ, ಬೇಡವ್ವೋ ಎಂಬ ಗೊಂದಲದಲ್ಲಿ ಅವ... ವಿರೋಧಿಗಳಿದ್ದಾರೆ. ಈ ನಡುವೆ “ಯಡ್ಡಿ ಮಗನಿ... ಟಿಕೆಟ್ ನೀಡಿದರೆ, ನನ್ನ ಮಗನಿಗೂ ಟಿಕೆಟ್ ನೀಡಿ... ಎಂದು ಹಿರಿಯ ಸಚಿವ ಉದಾಸಿ ಪೀಡಲಾರಂಭಿಸಿರುವು... ಬಿಜೆಪಿ ನಾಯಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿ...

ತಮ್ಮ ಕನಸು ನನಸಾಗದಂತೆ ಕೆಲವರು ಅಡ್ಡಗಾ... ಹಾಕುತ್ತಿರುವುದರಿಂದ ಯಡ್ಡಿಯ ಪಿಟ್ಟು ನತ್ತಿಗೇರಿ...

ಯಾಕೆಂದರೆ ಈ ಯೋಜನೆ ಅನುಷ್ಠಾನಕ್ಕೆ ಬಂದರೆ ...ಂದೂ ಸೊರಬದಿಂದ ಗೆಲ್ಲುವುದು ಸಾಧ್ಯವಿಲ್ಲ 'ಬಂ'ಗೆ ಗೊತ್ತಾಗಿದೆ.

...ಮೇ ಇಲ್ಲ, ಆದರೂ ಅಡಿಗಲ್ಲು

...ಯೋಜನೆ ಕಾರ್ಯಸಾಧುವೇ, ಯೋಜನೆಯಿಂದ ...ಮೂ ಅನುಕೂಲವಾಗಲಿದೆಯೇ? ಯೋಜನೆ ...ಧುವಾದರೆ ಅದನ್ನು ಜಾರಿಗೆ ತಂದರೆ ತಪ್ಪೇನು? ...ಶ್ನೆಗಳಿಗೆ ಈಗ ಉತ್ತರ ಯಾರಿಗೂ ಬೇಡವಾಗಿದೆ. ...ಈ ಯೋಜನೆ ಜಾರಿ ಸಂಬಂಧ ಇದುವರೆಗೂ ...ಮೀಕ್ಷೆ ನಡೆಸಿಲ್ಲ, ಪರಿಹಾರದ ಬಗ್ಗೆ ಸಂತ್ರಸ್ತರಿಗೆ ...ನೀಡಿಲ್ಲ, ತಾಂತ್ರಿಕ ಮಂಜೂರಾತಿ ದೊರಕಿಲ್ಲ, ...ಕ ಅಭಿಪ್ರಾಯ ಸಂಗ್ರಹಣೆ ನಡೆದಿಲ್ಲ, ...ನ ಪ್ರಕ್ರಿಯೆ ಪ್ರಾರಂಭವಾಗಿಲ್ಲ, ಅರಣ್ಯ ಭೂಮಿ ...ಕೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತಿಲ್ಲ, ...ಕ್ರೀಮ್‌ನದಿ ಈ ಯೋಜನೆಯನ್ನು ಸೇರಿಸಿಲ್ಲ.

...ಎಲ್ಲ ಕಾರಣಗಳಿಂದ ಈಗ ಯಡ್ಡಿಯ ವಿರುದ್ಧ ...ತ್ತು ಸೊರಬದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ...ಪ್ರಗತಿಪರ ಸಂಘಟನೆಗಳೂ ನಿರಾಶ್ರಿತರಾಗಲಿರುವ ...ವಾಗಿ ಬೀದಿಗಿಳಿದಿವೆ. ನೆಪ ಮಾತ್ರಕ್ಕೆ ಪ್ರತಿಭಟನೆ ...ಕಾಂಗ್ರೆಸ್ ಮುಖಂಡರು ಮಾತ್ರ ಮತ್ತೆ ಕೈ ...ತಿದ್ದಾರೆ. ಯೋಜನಾ ವರದಿಯ ಪ್ರತಿಯನ್ನು ...ಂಡು ಮನೆ ಮನೆಗೆ ತೆರಳಿ, ಜನಾಭಿಪ್ರಾಯ ...ಬೇಕಾಗಿದ್ದ ಅವರಲ್ಲಿ ಹೋರಾಟದ ಕಿಚ್ಚೇ ...

ದಾರಿಗಳು ಹಲವಾರು

...ವಾಗಿಯೂ ಯಡ್ಡಿಗೆ ರೈತರ ಕೃಷಿ ಭೂಮಿಗೆ ...ಬೇಕೆಂಬ ಕಾಳಜಿ ಇದ್ದಿದ್ದರೆ ಈ ಯೋಜನೆಯ ...ಗೆ ಹಲವಾರು ದಾರಿಗಳಿದ್ದವು. ಈ ಹಿಂದೆ ...ಶಾಸಕರಾಗಿದ್ದ ಕುಮಾರ್ ಬಂಗಾರಪ್ಪ ಕೆಲ ...ಮ ಯೋಜನೆಗಳನ್ನು ರೂಪಿಸಿದ್ದರು. ಮೂದಿ ...ದಾವರಿ ಯೋಜನೆ, ದಂಡಾವತಿ ತಿರುವು, ...ನಲ್ಲಿರುವ 1,262 ಕೆರೆಗಳ ಹೂಳು ತೆಗೆಸಿ, ...ಸಂಗ್ರಹಿಸಿ, ಅದನ್ನು ಬಯಲು ಪ್ರದೇಶಕ್ಕೆ ...ದು.. ಹೀಗೆ ಹಲವಾರು ಯೋಜನೆಗಳು ...ದ್ದವು. ಆದರೆ ಇವುಗಳಿಗೆ ಕೋಟಿ ಕೋಟಿ ...ವುದಿಲ್ಲ, ಕಮೀಷನ್ ಕೂಡಾ ಬರುವುದಿಲ್ಲ. ...ಯಡ್ಡಿ ದಂಡಾವತಿ ಯೋಜನೆಗೇ ಜೋತು ...

...ಇಲ್ಲದಿರುವಲ್ಲಿ ಅಣೆಕಟ್ಟು ಕಟ್ಟಿ, ಅದಕ್ಕೆ ...ದಗಿಸಲು ಮತ್ತೊಂದು ಅಣೆಕಟ್ಟು ಕಟ್ಟುವುದು ...? ಇದಕ್ಕೆ ಬದಲಾಗಿ ವರದಾ ನದಿಗೆ ಅಣೆಕಟ್ಟು ...ಮ್ಯಾತನಾಳ್ ನೀರಾವರಿ ಯೋಜನೆಯನ್ನು ಜಾರಿಗೆ ...ಬ ಸಲಹೆಯನ್ನು ಸೊರಬದ ಜನ ನೀಡುತ್ತಿದ್ದಾರೆ. ...ಯಡ್ಡಿ ಕಿವುಡರಾಗಿದ್ದಾರೆ.

...ವಬ ಮತ್ತು ಸಾಗರದ ಜನರ ಅಳಲನ್ನು ಯಾರು ...ು?

■ ವರದಿಗಾರ

...ಶಿವಮೊಗ್ಗದ ಯಾವ ನಾಯಕರನ್ನು ಭೇಟಿಯಾ... ...ವರ ಮೇಲೆ ರೇಗಾಡುತ್ತಿದ್ದಾರೆ. "ಪಕ್ಷದ ಹಿರಿಯ ಆಡ್ವಾಣಿ ತಮ್ಮ ಮಗಳನ್ನೇ ರಾಜಕಾರಣಕ್ಕೆ ...ಡಾಡುತ್ತಿರುವಾಗ ನಾನು ಇಲ್ಲಿ ಪಕ್ಷ ಕಟ್ಟಿ, ನನ್ನ ಟಿಕೆಟ್ ಕೇಳಿದರೆ ತಪ್ಪೇನು?" ಎಂದು ಅವರು ...ದ್ದಾರೆ.

...ರೆ ಯಡ್ಡಿ ಈಗ ಪಕ್ಷದಲ್ಲಿ ಮತ್ತೊಂದು ...ಟ' ನಡೆಸಿದ್ದಾರೆ. ಆದರೆ ಅವರು ಈ ಬಾರಿಯೂ ...ತೆಯೇ ಗೆಲ್ಲುತ್ತಾರೆಯೋ ಅಥವಾ ಸುಮ್ಮನಾಗು... ...ಕಾದು ನೋಡಬೇಕು.

ಮಧ್ಯೆ, ಮೊನ್ನೆಮೊನ್ನೆಯವರೆಗೂ ತಾನೇ ...ಪಾ ಅಭ್ಯರ್ಥಿ ಎಂದೂ, ಎಂದಿಗೂ ಯಡ್ಡಿ ...ಬಿಡಲಾರರು ಎಂದೂ ನಂಬಿದ್ದ ಆಯನೂರು ...ನಾಥ್ ಈ ಎಲ್ಲ ಬೆಳವಣಿಗೆಗಳನ್ನು ಕಂಡು ...ದ್ದಾರೆ. "ಯಡ್ಡಿಯ ಮಾತು ಕೇಳಿ ಈಶ್ವರಪ್ಪನನ್ನು ಹಾಕಿಕೊಂಡು ಮೂರ್ಖನಾದೆನಲ್ಲಾ" ಎಂದು ...ತ್ತಿದ್ದಾರೆ.

...ಮೊಮ್ಮೆ ಚಡ್ಡಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಆಯನೂರು ಪರಿಸ್ಥಿತಿ ಈಗ ಹೇಗಿದೆ ಎಂದರೆ ...ಯಲ್ಲೂ ಉಳಿಯುವಂತಿಲ್ಲ, ಅತ್ತ ಕಾಂಗ್ರೆಸ್‌ಗೂ ...ಗುವಂತಿಲ್ಲ. ಅವರ ಮುಂದೆ ಈಗ ಕೊನೆ ...ಗಿ ಉಳಿದಿರುವುದು ಜಾತ್ಯತೀತ ಜನತಾ ದಳ. ...ಪ್ರಕಾರ ಅವರು ಈಗಾಗಲೇ ಜೆಡಿಎಸ್‌ನತ್ತ ...ಮಾಡಿ ಬಳಿತಿದ್ದಾರಂತೆ.

...ರೆ ಉಳಿದ ಶಿವಮೊಗ್ಗೆಯ ಚಡ್ಡಿಗಳೆಲ್ಲಾ ...ದ್ರ 'ಮಠ' ಸೇರಿ ಆತನ ಭಜನೆ ಆರಂಭಿಸಿದ್ದಾರಂತೆ!

■ ವರದಿಗಾರ


ಮಂಗಳೂರು ಪೊಲೀಸು ಕಚೇರಿಯಲ್ಲಿ ಚಿತ್ರಹಿಂಸೆ

ವೆಂಕಟೇಶ್ ಪ್ರಸನ್ನರ ಹಾರರ್ ಶೋ

ಕಿನ್ನಿಗೋಳಿ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಪೊಲೀಸು ಠಾಣೆಯ ಸರಹದ್ದಿನೊಳಗೆ ಬರುವ ಪುಟ್ಟ ಊರು. ದಿ. 11.1.2009 ಭಾನುವಾರ ರಾತ್ರಿ ಅಲ್ಲೊಂದು ಕೊಲೆ ನಡೆಯಿತು. ಕಿನ್ನಿಗೋಳಿಗೆ ಸಮೀಪದ ಚೆಲ್ಲಿಗುಡ್ಡೆ ಎಂಬಲ್ಲಿ ಸುಮಾರು 38 ವರ್ಷ ಪ್ರಾಯದ ಮೋಹನ ರಾಣಿ ಎಂಬವರನ್ನು ಕುತ್ತಿಗೆ ಕಡಿದು ಕೊಲ್ಲಲಾಯಿತು. ಮೋಹನ್ ಏಕಾಂಗಿಯಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಜನವಿರಳ ರಸ್ತೆ ಅದು. ಹಾಗಾಗಿ ಅವರ ಕೊಲೆಯನ್ನು ಪ್ರತ್ಯಕ್ಷ ನೋಡಿದವರು ಯಾರೂ ಇಲ್ಲ. ಕೊಲೆ ಮಾಡಿದವರು, ವಾಹನದಲ್ಲಿ ಬಂದು ತಮ್ಮ ಕೆಲಸ ಮುಗಿಸಿ ಹೋಗಿದ್ದಾರೆ ಎಂಬುದು ಸದ್ಯಕ್ಕೆ ಕೇಳಿಬರುತ್ತಿರುವ ವದಂತಿ. ಈ ತಕ್ಷೀರಿನ ಸಂಬಂಧ ಮುಲ್ಕಿ ಪೊಲೀಸರು ನೂರುದ್ದೀನ್, ಜಲೀಲ್, ಇಕ್ಬಾಲ್ ಮತ್ತು ಅನ್ವರ್ ಎಂಬ ನಾಲ್ವರು ಸ್ಥಳೀಯ ಮುಸ್ಲಿಮ್ ತರುಣರನ್ನು ಕೊಲೆ ನಡೆದ ಮರುದಿನ, ಅಂದರೆ ದಿ. 12.1.09 ಸೋಮವಾರ, ಸಂಜೆ ಮೂರು ಗಂಟೆಯ ಹೊತ್ತಿಗೆ ಠಾಣೆಗೆ ಹಿಡಿದುಕೊಂಡು ಹೋದರು. ಠಾಣೆಯಲ್ಲಿ ಜಲೀಲ್, ಇಕ್ಬಾಲ್ ಮತ್ತು ಅನ್ವರ್‌ರನ್ನು ವಿಚಾರಣೆ ಮಾಡಿ ವಾಪಸು ಕಳುಹಿಸಲಾಯಿತು. ಪೊಲೀಸರು ಅವರನ್ನು ಹೊಡೆದು ಬಡಿದು ಮಾಡಲಿಲ್ಲ, ಆದರೆ ನೂರುದ್ದೀನ್‌ನನ್ನು 'ಇನ್ನಷ್ಟು ವಿಚಾರಣೆಗೆ' ಅದೇ ದಿನ, ಮಂಗಳೂರಿನ ಜಿಲ್ಲಾ ಅಪರಾಧ ತನಿಖಾ ವಿಭಾಗದ (ಡಿಸಿಐಬಿ) ಠಾಣೆಗೆ ಒಯ್ಯಲಾಯಿತು. ಅಲ್ಲಿ ಇನ್ಸ್‌ಪೆಕ್ಟರ್ ವೆಂಕಟೇಶ ಪ್ರಸನ್ನ ಮತ್ತು ಅವರ ಸಿಬ್ಬಂದಿ ನೂರುದ್ದೀನ್‌ರನ್ನು ವಿಚಾರಿಸಿಕೊಂಡ ಪರಿಣಾಮವಾಗಿ ಈಗ ಅವರು ಮಂಗಳೂರಿನ ಹೈಲ್ಯಾಂಡ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದಾರೆ.

22 ರ ಹರೆಯದ ನೂರುದ್ದೀನ್ ಕಿನ್ನಿಗೋಳಿಯ ಗುತ್ತಕಾಡಿನ ಉಮ್ಮರಬ್ಬ ಅವರ ಮಗ. ಉಮ್ಮರಬ್ಬ ಈಗ ತೀರಿಕೊಂಡಿದ್ದು 8ನೇ ಕ್ಲಾಸಿನವರೆಗೆ ಓದಿರುವ ನೂರುದ್ದೀನ್ ಕಿನ್ನಿಗೋಳಿ ಪೇಟೆಯಲ್ಲಿ ತರಕಾರಿ ಅಂಗಡಿ ನಡೆಸುತ್ತಿದ್ದಾರೆ. ಇತ್ತೀಚೆಗೆ ಅವರು ಒಂದು ಸೆಕೆಂಡ್ ಹ್ಯಾಂಡ್ ಟೆಂಪೋವನ್ನು ಸಾಲದಲ್ಲಿ ಖರೀದಿಸಿ, ತರಕಾರಿ ಲೈನಿಗೂ ಹೋಗುತ್ತಾರೆ. ಅವರ ಒಬ್ಬಳೇ ಅಕ್ಕನಿಗೆ ಮದುವೆಯಾಗಿದ್ದು, ಮನೆಯಲ್ಲಿ ತಾಯಿ ಮತ್ತು ತಂಗಿ ಬೀಡಿ ಕಟ್ಟುತ್ತಾರೆ. ಇಂತಹ ಹಿನ್ನೆಲೆ ಹೊಂದಿರುವ ನೂರುದ್ದೀನ್ ಕೊಲೆಗಡುಕನಿರಬಹುದು ಎಂದು ಮುಲ್ಕಿ ಪೊಲೀಸರಿಗೆ ಸಂದೇಹ ಬರಲು ಕಾರಣವೇನು? ಸ್ವತಃ ನೂರುದ್ದೀನ್ ನಮ್ಮೊಡನೆ ಹೇಳಿದಂತೆ, ಅವರು ಬಾಡಿಗೆಗೆ ಕೊಟ್ಟಿದ್ದ ಮೋಟರ್ ಬೈಕು (ಕಿನ್ನಿಗೋಳಿಯ ಸುತ್ತಮುತ್ತ ಆವ್ಯವಹಾರ ನಡೆಯುತ್ತದೆ) ಒಂದು ಕೇಸಿನಲ್ಲಿ ಸಿಕ್ಕಿಹಾಕಿಕೊಂಡು, ಅದು ನೂರುದ್ದೀನ್ ತಲೆ ಮೇಲೆ ಬಂದು ಒಂದು ತಿಂಗಳು ಕಸ್ಟಡಿಯಲ್ಲಿದ್ದರು; ನಂತರ ಕೇಸು ಕೋರ್ಟಿನಲ್ಲಿ ಖುಲಾಸೆಯಾಗಿತ್ತು, ಮುಲ್ಕಿ ಠಾಣೆಯಲ್ಲಿ ಮೋಹನ್ ಕೊಲೆ ಕುರಿತ ತನಿಖೆಯ ವೇಳೆ ನೂರುದ್ದೀನ್‌ರನ್ನು "ಕೆ.ಎಫ್.ಡಿ.ಯಲ್ಲಿ ಇದ್ದೀಯಾ ಹೇಳು?" ಎಂದು ವಿಚಾರಿಸಿದರಂತೆ; "ಕೆಎಫ್‌ಡಿಯಲ್ಲಿ ಹೊಡೆಯುವುದಕ್ಕೆ ಎಂದು ಎಷ್ಟು ಜನ ಇದ್ದಾರೆ?" ಎಂದು ಪ್ರಶ್ನೆ ಮಾಡಿದರಂತೆ. ನೂರುದ್ದೀನ್ ಕೆಎಫ್‌ಡಿ ಸಭೆಗಳಲ್ಲಿ ತಾನು ಭಾಗವಹಿಸುವುದು ಉಂಟು; ಆದರೆ ಉಳಿದ ವಿಷಯ ತನಗೆ ಏನೂ ಗೊತ್ತಿಲ್ಲ ಎಂದು ಉತ್ತರಿಸಿದರು. ಕಿನ್ನಿಗೋಳಿ ಸಮೀಪ ಕೊಲೆಯಾದ ಮೋಹನ ರಾಣಿ ಯಾರು ಎಂದೇ ತನಗೆ ಗೊತ್ತಿಲ್ಲ ತಾನು ಅವರನ್ನು ನೋಡಿಯೂ ಇಲ್ಲ ಎಂದು ನೂರುದ್ದೀನ್ ಪದೇಪದೇ ನಮ್ಮೊಡನೆ ಹೇಳಿದರು. ಮಂಗಳೂರಿನ ಠಾಣೆಯಲ್ಲಿ ವೆಂಕಟೇಶ್ ಪ್ರಸನ್ನ ಮತ್ತು ಅವರ ತೈನಾತಿಗಳು ನೂರುದ್ದೀನ್‌ಗೆ ಚಿತ್ರಹಿಂಸೆ ಕೊಟ್ಟು ಮತ್ತೆಮತ್ತೆ ಮೋಹನ್ ರಾಣಿ ಬಗ್ಗೆ ಪ್ರಶ್ನಿಸಿದಾಗಲೂ ಅವರು ಹೇಳಿದ್ದು ಇದನ್ನೇ.

ಮುಲ್ಕಿಯಿಂದ ಮಂಗಳೂರು ಠಾಣೆಗೆ ನೂರುದ್ದೀನ್‌ನನ್ನು ಕರೆದುಕೊಂಡು ಹೋದದ್ದು ದಿ. 12.1.09 ರಂದು; ಅವರನ್ನು ಬಿಡುಗಡೆ ಮಾಡಿದ್ದು ಅಂದರೆ ವ್ಯಾನಿನಲ್ಲಿ ಠಾಣೆಯಿಂದ ಎತ್ತಿಕೊಂಡು ಹೋಗಿ ರಸ್ತೆ ಪಕ್ಕ ಎಸೆದುಹೋದದ್ದು ದಿ. 15.1.09 ರಂದು ರಾತ್ರಿ. ಈ ನಡುವೆ ನೂರುದ್ದೀನ್‌ಗೆ ತಿನ್ನಲು ಏನೂ ಕೊಡಲಿಲ್ಲ, ಕುಡಿಯಲು ನೀರನ್ನೂ ಕೊಡಲಿಲ್ಲ, ಆದರೆ ಠಾಣೆಯ ಒಳಕೋಣೆಯಲ್ಲಿ ಒಂದು ಹೂಜಿ ಇದ್ದು ಅದರಲ್ಲಿ ನೀರು ಇದ್ದುದರಿಂದ ನೂರುದ್ದೀನ್ ತಾವೇ ಹೋಗಿ ಹೂಜಿಯಿಂದ ಬಗ್ಗಿಸಿಕೊಂಡು ಕುಡಿಯುತ್ತಿದ್ದರಂತೆ. ಅವರನ್ನು ಮಂಗಳೂರಿಗೆ ಕರೆದುಕೊಂಡ ಹೋದ ರಾತ್ರಿ ವೆಂಕಟೇಶ ಪ್ರಸನ್ನ ಎದೆಗೆ ಒದ್ದರು. ನಂತರ ಅವರ ಬಟ್ಟೆ ಬಿಚ್ಚಿಸಿ, ಕೈಕಾಲು ಕಟ್ಟಿ ಹಾಕಿ ಮೈಮೇಲೆಲ್ಲ ಹೊಡೆದರು. ಠಾಣೆಯ ಸಿಬ್ಬಂದಿಗಳಾದ ದಿನೇಶ್ ಬೇಕಲ್, ಚೇತನ್, ಕುಮಾರ್ ಮತ್ತು ಅಶೋಕ್ ಕೂಡ ತಮ್ಮ ಶಕ್ತ್ಯಾನುಸಾರ, ನೂರುದ್ದೀನ್‌ರನ್ನು ವಿಚಾರಿಸಿಕೊಂಡರು ಮತ್ತು ಅವರನ್ನು ಮುಗಿಸುವುದರ ಜೊತೆಗೆ ಬ್ಯಾರಿಗಳ ಸಂತಾನವೇ ಇಲ್ಲದ ಹಾಗೆ ಮಾಡುತ್ತೇವೆ ಎಂದು ಆವಾಜ್ ಸಹಿತ ಹಾಕಿದರು. ಠಾಣೆಯಲ್ಲಿ ನೂರುದ್ದೀನ್‌ರನ್ನು ಇರಿಸಿದ್ದ ಮೂರು ದಿನ ಹಗಲು ಹೊತ್ತು, ಅವರನ್ನು ಅವರ ಪಾಡಿಗೆ ಬಿಟ್ಟುಬಿಡುತ್ತಿದ್ದರಂತೆ. "ವಿಚಾರಣೆ" ಎಂಬ ಚಿತ್ರಹಿಂಸೆ ತಡರಾತ್ರಿಯ ವೇಳೆಗೆ ಪ್ರಾರಂಭವಾಗುತ್ತಿತ್ತು, ಅದರ ಪ್ರಧಾನ ಐಟಮುಗಳೆಂದರೆ ಏರೋಪ್ಲೇನು ಎತ್ತುವುದು ಮತ್ತು ರೋಲರ್ ಎಳೆಯುವುದು. ಪೊಲೀಸರಿಗೆ ಅತ್ಯಂತ ಪ್ರಿಯವಾದ ಏರೋಪ್ಲೇನು ಎಂದರೆ ಏನು ಎಂದು ಎಲ್ಲರಿಗೂ ಗೊತ್ತು, ಪೊಲೀಸರು ರೋಲರ್ ಎಂಬ ಶಿಕ್ಷೆಯಿಂದಲೂ ಅಷ್ಟೇ ಮಜಾ ತೆಗೆದುಕೊಳ್ಳುತ್ತಾರಂತೆ. ನೂರುದ್ದೀನ್ ಮಂಗಳೂರು ಠಾಣೆಯಲ್ಲಿ ತಾನು ಮೇಲಿಂದ ಮೇಲೆ ಅನುಭವಿಸಿದ ಈ ಶಿಕ್ಷೆಯನ್ನು ನಮಗೆ ವಿವರಿಸಿದರು. ರೋಲರ್ ಎಂದರೆ ಪಾರ್ಟಿಯನ್ನು ಬೆತ್ತಲೆ ಅಂಗಾತ ಮಲಗಿಸಿ ಕೈಕಾಲು ಕಟ್ಟಿ, ಭಾರವಾದ ಕಬ್ಬಿಣದ ರಾಡೊಂದನ್ನು ಆತನ ಮೇಲಿರಿಸಿ, ರಾಡಿನ ಎರಡು ತುದಿಗಳಲ್ಲಿ ಇಬ್ಬರು ಪೊಲೀಸರು ಅದನ್ನು ಒತ್ತಿ ಮೈಮೇಲೆ



ಎಳೆಯುವುದು-ಚಪಾತಿ ಲಟ್ಟಿಸಿದ ಹಾಗೆ. ಇದಾದ ಮೇಲೆ ಕೈಕಾಲು ಕಟ್ಟಿರುವ ಹಾಗೆಯೇ ಪಾದಕ್ಕೆ ರಾಡಿನಲ್ಲಿ ಹೊಡೆಯುವುದು. "ಹಾಗೆ ಹೊಡೆದಾಗ ಅದರ ಶಾಕ್ ಇಲ್ಲಿಗೆ ಬರುತ್ತದೆ" ಎಂದು ನೂರುದ್ದೀನ್ ತನ್ನ ನೆತ್ತಿ ಮುಟ್ಟಿ ತೋರಿಸಿದರು. ಈ ಹಿಂಸಾ ವಿಧಾನ ಪಾಳೆಗಾರ ಶಾಹಿ ಕಾಲದ ಪೊಲೀಸು ಠಾಣೆಗಳಲ್ಲಿ ರೂಪುಗೊಂಡಿದ್ದು ಈಗ ಒಂದು ಪರಿಪೂರ್ಣ ಕಲಾಪ್ರಕಾರವಾಗಿ ಬೆಳೆದು ಪ್ರಜಾಪ್ರಭುತ್ವ ಭಾರತದಲ್ಲಿ ಪ್ರಯೋಗಗೊಳ್ಳುತ್ತಿದೆ.

ಮಂಗಳೂರು ಠಾಣೆಯ ನುರಿತ ಹಿಂಸಾತಜ್ಞ ವೆಂಕಟೇಶ್ ಪ್ರಸನ್ನ ಮತ್ತು ಅವರ ಸಂಗಡಿಗರು ಮೂರು ದಿನ ನೂರುದ್ದೀನ್ ಮೇಲೆ ನಡೆಸಿದ ವಿವಿಧ ಪ್ರಯೋಗಗಳಿಂದಾಗಿ, ಅವರ ಎರಡೂ ಕಾಲುಗಳ ಸಂವೇದನೆಯೇ ಹೊರಟುಹೋಗಿದೆ; ಅವರ ಆಸ್ಪತ್ರೆ ದಾಖಲೆಗಳ ಪ್ರಕಾರ ಅವರ ದೇಹದ ಒಳ ಅಂಗಗಳಿಗೆ ಜಖಂ ಆಗಿದೆ. ಇಷ್ಟಾಗಿಯೂ ನೂರುದ್ದೀನ್ ಮೈಮೇಲೆ ಒಂದೇ ಒಂದು ಗಾಯದ ಗುರುತೂ ಇಲ್ಲ! ಆದರೆ ಅವರು ಚೇತರಿಸಿಕೊಂಡು, ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಮನೆಗೆ ಹೋದ ಮೇಲೂ ಕೈಕಾಲುಗಳಲ್ಲಿ ನೋವು, ಸೆಳೆತ ಅವರನ್ನು ಸದಾ ಬಾಧಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಈ ಪ್ರಕಾರ ಮೂರು ದಿನ ನೂರುದ್ದೀನ್‌ರಿಗೆ ವಿನಾಕಾರಣ ನರಕಸದೃಶ ಶಿಕ್ಷೆ ನೀಡಿ ನಂತರ, ಜನವರಿ 15 ರಂದು ರಾತ್ರಿ ಪೊಲೀಸ್ ವ್ಯಾನಿನಲ್ಲಿ ಅವರನ್ನು ಠಾಣೆಯಿಂದ ಒಯ್ದು ಮಂಗಳೂರಿನ ಸ್ಟೇಟ್ ಬ್ಯಾಂಕ್ ನಿಲ್ದಾಣ ಬಳಿ ಇಳಿಸಲಾಯಿತು. ಎದ್ದು ನಡೆದಾಡಲೂ ತ್ರಾಣವಿಲ್ಲದೆ ನೂರುದ್ದೀನ್ ರಸ್ತೆಯಲ್ಲಿ ಬಿದ್ದಿರುವುದನ್ನು ನೋಡಿದ ದಾರಿಹೋಕರು ಅವರ ಹೆಸರು ಕೇಳಿ ತಿಳಿದುಕೊಂಡು ಸಮೀಪದ ಹಂಪನಕಟ್ಟೆಯ ಮಸೀದಿಗೆ ತೆಗೆದುಕೊಂಡು ಹೋದರು. ಮಸೀದಿಯಲ್ಲೂ ಅವರು ಚೇತರಿಸಿಕೊಳ್ಳದಿದ್ದಾಗ ಅವರನ್ನು ಹೈಲ್ಯಾಂಡ್ ಆಸ್ಪತ್ರೆಗೆ ಸೇರಿಸಲಾಯಿತು. ಬಹುಶಃ ವೆಂಕಟೇಶ್ ಪ್ರಸನ್ನರಿಗೇ ಬಿಟ್ಟಿದ್ದರೆ ಅವರು ನೂರುದ್ದೀನ್‌ಗೆ ಒಂದು ಗತಿ ಕಾಣಿಸಿಯೇಬಿಡುತ್ತಿದ್ದರು. ಆದರೆ ನೂರುದ್ದೀನ್‌ಗೆ ಪರಿಚಿತರೂ, ಸ್ವತಃ ಕಿನ್ನಿಗೋಳಿಯವರೂ ಆದ ಅಬೂಬಕರ್ ಎಂಬವರು, ವೆಂಕಟೇಶ್ ಪ್ರಸನ್ನ ಮತ್ತು ಅವರ ಸಂಗಡಿಗರ ಕಾನೂನುಬಾಹಿರ ಹಿಂಸಾಕೃತ್ಯಗಳ ಕುರಿತು ಪಶ್ಚಿಮ ವಲಯ ಪೊಲೀಸು ವರಿಷ್ಠಾಧಿಕಾರಿ ಎ.ಎಂ. ಪ್ರಸಾದ್ ಅವರಿಗೆ ಲಿಖಿತ ದೂರು ಸಲ್ಲಿಸಿದರು. ಸ್ವತಃ ಎಂ. ಪ್ರಸಾದ್ ಅವರೇ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿದ್ದರಿಂದ ನೂರುದ್ದೀನ್ ಬಿಡುಗಡೆಗೊಳಿಸಲಾಯಿತು. ನೆನಪಿಡಿ, ನೂರುದ್ದೀನ್‌ರ ಮೇಲೆ ಯಾವುದೇ ಲಿಖಿತ ಆರೋಪವಿರಲಿಲ್ಲ, ಬಂಧನವಾದ ಮೇಲೆ ಅವರನ್ನು ನ್ಯಾಯಾಲಯದ ಎದುರು ಹಾಜರುಪಡಿಸಿಯೂ ಇಲ್ಲ. ಒಬ್ಬ ಪೊಲೀಸು ಅಧಿಕಾರಿಯಾಗಿದ್ದುಕೊಂಡೇ ವೆಂಕಟೇಶ್ ಪ್ರಸನ್ನ ಕಾನೂನನ್ನು ಮೀರಿ ನಡೆದಿರುವುದು ಮಾತ್ರವಲ್ಲ; ವಿಚಾರಣಾಪೂರ್ವ ಖೈದಿಯೊಬ್ಬನನ್ನು ಅಮಾನುಷವಾಗಿ ಹಿಂಸಿಸಿದ್ದಾರೆ ಕೂಡ. ಈಗ ತುರ್ತಾಗಿ ಅವರ ವಿಚಾರಣೆ ನಡೆಯಬೇಕಾಗಿದೆ. ಕೆಲವು ತಿಂಗಳ ಕೆಳಗೆ ಚರ್ಚುಗಳ ಮೇಲೆ ನಡೆದ ದಾಳಿಯನ್ನು ಪ್ರತಿಭಟಿಸುತ್ತಿದ್ದ ಕ್ರೈಸ್ತರ ಮೇಲೆ ವೆಂಕಟೇಶ ಪ್ರಸನ್ನ ಪಶುವಿನಂತೆ ಎರಗಿದ್ದನ್ನು ಮಂಗಳೂರಿನ ಜನ ಇನ್ನೂ ಮರೆತಿಲ್ಲ. ಆಗಲೇ ಅವರಿಗೆ ಶಿಕ್ಷೆಯಾಗಬೇಕಾಗಿತ್ತು, ನೂರುದ್ದೀನ್ ಪ್ರಕರಣದಲ್ಲೂ ವೆಂಕಟೇಶ್ ಪ್ರಸನ್ನ ಬಚಾವಾದರೆ, ಜನರಿಗೆ ಪೊಲೀಸು ವ್ಯವಸ್ಥೆಯಲ್ಲಿ ಇರುವ ಚೂರುಪಾರು ವಿಶ್ವಾಸವೂ ನಾಶವಾಗುವುದರಲ್ಲಿ ಸಂದೇಹವಿಲ್ಲ.

ಕಿನ್ನಿಗೋಳಿಯಲ್ಲಿ ಕೊಲೆಯಾದ ಮೋಹನ ರಾಣಿ ಜೀವನ ನಿರ್ವಹಣೆಗೆ ಮೇಸ್ತ್ರಿ ಕೆಲಸ ಮಾಡುತ್ತಿದ್ದ 38 ರ ಹರೆಯದ ಬಡಪಾಯಿ. ಆ ರಾತ್ರಿ ನಿರ್ಜನ ರಸ್ತೆಯಲ್ಲಿ ನಡೆದ ಆ ಕೊಲೆಯನ್ನು ಯಾಕೆ ನೂರುದ್ದೀನ್‌ಗೆ ಆರೋಪಿಸಲಾಗುತ್ತಿದೆ? ಅದಕ್ಕೆ ಕಾರಣ ಒದಗಿಸಿದ್ದು ದಿ. 10.1.2009 ಶನಿವಾರ ಸುರತ್ಕಲ್‌ನಲ್ಲಿ ನಡೆದ ಮುಸ್ಲಿಮ್ ಯುವಕನೋರ್ವನ ಕೊಲೆ. ಆ ದಿನ ಸುರತ್ಕಲ್‌ನ ಕೃಷ್ಣಾಪುರದಲ್ಲಿ ತಂರ್ಝೀಮ್ ಎಂಬ ಕಾಲೇಜು ವಿದ್ಯಾರ್ಥಿಯ ಮೇಲೆ ಮಾರಕ ಹಲ್ಲೆ ನಡೆದು ಆತ ತೀರಿಕೊಂಡಿದ್ದ. ವಾಸ್ತವವಾಗಿ ಹಲ್ಲೆ ಮಾಡಿದವರ ಟಾರ್ಗೆಟ್ ತಂರ್ಝೀಮ್ ಆಗಿರಲಿಲ್ಲ, ಅವರು ಕೊಲ್ಲಬೇಕು ಎಂದು ಇದ್ದುದು ತಂರ್ಝೀಮ್ ಜೊತೆಗಿದ್ದ ರಹಿಮತುಲ್ಲಾ ಎಂಬ ಸುಮಾರು 28 ಹರೆಯದ ಯುವಕನನ್ನು. ರಹಿಮತುಲ್ಲಾ ಈ ಹಲ್ಲೆಯಲ್ಲಿ ಗಂಭೀರವಾಗಿ ಗಾಯಗೊಂಡರೂ ಪ್ರಾಣ ಉಳಿಸಿಕೊಂಡಿದ್ದು ಈಗ ತಲೆಮರೆಸಿಕೊಂಡಿದ್ದಾನೆ. ಈ ರಹಿಮತುಲ್ಲಾ ಮೇಲೆ ಉದಯ ಪೂಜಾರಿ ಎಂಬ ಭಜರಂಗಿಯನ್ನು 2005 ರಲ್ಲಿ ಕೊಲೆಗೈದ ಆರೋಪವಿತ್ತು, ಆ ಪ್ರಯುಕ್ತ ಆತ ಕೆಲಕಾಲ ಬಂಧನದಲ್ಲೂ ಇದ್ದರು. ನ್ಯಾಯಾಲಯದಲ್ಲಿ ಕೇಸು ವಜಾ ಆದ ಮೇಲೆ ರಹಿಮತುಲ್ಲಾ ವಿದೇಶಕ್ಕೆ ತೆರಳಿದ್ದರು. ಇತ್ತೀಚೆಗೆ ಸುರತ್ಕಲ್‌ಗೆ ವಾಪಸ್ಸಾಗಿದ್ದ ರಹಿಮತುಲ್ಲಾ ಮೇಲೆ ಮೃತ ಉದಯ ಪೂಜಾರಿಯ ನಿಕಟವರ್ತಿಗಳು ಕಣ್ಣಿಟ್ಟಿದ್ದರು. ಆದರೆ ಅವರ ಸೇಡಿಗೆ ಬಲಿಯಾದದ್ದು ತಂರ್ಝೀಮ್. ಈ ಘಟನೆಯ ನಂತರ ಕೆಲಕಾಲ ಸುರತ್ಕಲ್‌ನಲ್ಲಿ ದೊಂಬಿ, ಬಸ್ ತಡೆ, ಕಲ್ಲು ತೂರಾಟ ಮುಂತಾದವು ನಡೆದವು. ಮುಸ್ಲಿಮ್ ತರುಣರ ಗುಂಪುಗಳು ಕೆಲವೇ ಹಿಂದೂ ಮನೆಗಳ ಮೇಲೆ ಕಲ್ಲೆಸೆದರು. ಈ ಗಲಭೆಯ ಪರಿಸ್ಥಿತಿ ಬಹುಬೇಗ ಸುಧಾರಿಸಿ ಸುರತ್ಕಲ್ ಶಾಂತಸ್ಥಿತಿಗೆ ಮರಳಿತು. ಆದರೆ ಸುರತ್ಕಲ್‌ನ ಘಟನೆಯಿಂದಾಗಿ ಕಿನ್ನಿಗೋಳಿಯ ಮೋಹನ್‌ರಾಣಿ ಕೊಲೆಯನ್ನು ಮುಸ್ಲಿಮರ ಪ್ರತೀಕಾರವೆಂದು ಹಿಂದೂ ಸಂಘಟನೆಗಳ ಜೊತೆ ಪೊಲೀಸರೂ ಭಾವಿಸಿದರು ಮತ್ತು ನೂರುದ್ದೀನ್ ದೇಹದ ಶೇಪ್ ತೆಗೆದರು.

ಇತ್ತ ಸುರತ್ಕಲ್‌ನ ಗುಂಪು ಹಲ್ಲೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ರಹೀಮತುಲ್ಲಾ, ತಂರ್ಝೀಮ್‌ನನ್ನು ಕೊಲೆ ಮಾಡಿದವರ ಹೆಸರುಗಳನ್ನು ಪೊಲೀಸರಿಗೆ ತಿಳಿಸಿದ್ದಾರೆ. ಅವರು ಹೆಸರಿಸಿರುವವರಲ್ಲಿ ಮಂಗಳೂರು ನಗರ ಪಾಲಿಕೆಯ ಸದಸ್ಯರೊಬ್ಬರು ಸಹ ಸೇರಿದ್ದು, ಪೊಲೀಸರು ಅವರನ್ನು ಬಂಧಿಸುವ ಬದಲು ಅದೇ ಹೆಸರಿನ ಇನ್ನೊಬ್ಬ ಎಳೆ ಪ್ರಾಯದ ಹುಡುಗನನ್ನು ಬಂಧಿಸಿದ್ದಾರೆ! ನೈಜ ಅಪರಾಧಿ ಕೃಷ್ಣಾಪುರದಲ್ಲೇ ಓಡಾಡಿಕೊಂಡಿದ್ದಾರೆ. ಹಾಗಾಗಿ ರಹಿಮತುಲ್ಲಾ ಈಗ ಜೀವಭಯದಲ್ಲಿ ತಲೆಮರೆಸಿಕೊಂಡಿದ್ದಾರೆ. ಪತ್ರಕರ್ತರು ಪೊಲೀಸು ವರಿಷ್ಠಾಧಿಕಾರಿ ಎ.ಎಂ. ಪ್ರಸಾದ್ ಅವರನ್ನು ಈ ಕುರಿತು ಪ್ರಶ್ನಿಸಿದಾಗ ಅವರು "ಕೊಲೆಯ ತನಿಖೆ ಇನ್ನೂ ಮುಗಿದಿಲ್ಲ. ನೈಜ ಆರೋಪಿಯನ್ನು ಬಂಧಿಸಲಾಗುವುದು" ಎಂದು ಆಶ್ವಾಸನೆ ನೀಡಿದ್ದಾರೆ. ತಂರ್ಝೀಮ್ ಕೊಲೆಯ ಆರೋಪಿ, ಆಳುವ ಪಕ್ಷದವರಾಗಿರುವುದರಿಂದ ಅದು ಬಹುಶಃ ಅಸಾಧ್ಯದ ಮಾತು. ಆದರೆ ಎ.ಎಂ. ಪ್ರಸಾದ್ ತನ್ನ ಕೈಕೆಳಗಿನ ವೆಂಕಟೇಶ್ ಪ್ರಸನ್ನರಂತಹ ಅಧಿಕಾರಿಗಳಿಗೆ ಖಂಡಿತ "ರೂಲ್ ಬುಕ್ಕನ್ನು" ಓದಿ ಹೇಳಲೇಬೇಕು. ಅದು ಅವರಿಗೆ ಸಾಧ್ಯವಿದೆ.

■ ಜೆ. ರಾಜಶೇಖರ

ಪಟ್ಟಾಭಿರಾಮ ಸೋಮಯಾಜಿ

ಸಾಹಿತ್ಯ ಸಮ್ಮೇಳನ: ಕುಸಿಯುತ್ತಿರುವ ತಾತ್ವಿಕ ನೆಲೆಗಟ್ಟು

ವಿಶೇಷ ಲೇಖನ

■ಜೆ.ಪಿ.ಬಸವರಾಜು

ಅಖಿಲ ಭಾರತ ಎಂದು ಕರೆಯಲಾಗುವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಒಂದು ಜಾತ್ರೆ ಎಂದು ಕನ್ನಡಿಗರು ಒಪ್ಪಿಕೊಂಡು ಬಹಳ ಕಾಲವಾಗಿರುವಂತೆ ತೋರುತ್ತದೆ. ಅದನ್ನು ಟೀಕಿಸುವವರು ಕೂಡಾ 'ಜಾತ್ರೆ'ಯ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದ್ದಾರೆ. ಸಮರ್ಥಿಸುವವರು 'ಜನರಿಗೆ ಜಾತ್ರೆ ಬೇಕು' ಎಂಬ ಸಮರ್ಥನೆಗೆ ಇಳಿಯುವುದಿಲ್ಲ. ಕನ್ನಡದ ಜನ ಎಂದಿನಂತೆ ತಮ್ಮ ಉದಾರ ಮನೋಧರ್ಮವನ್ನು ತೋರುತ್ತ ಜಾತ್ರೆಯನ್ನು ತಮಗೆ ಅನುಕೂಲವಾದ ರೀತಿಯಲ್ಲಿ ಬಳಸಿಕೊಳ್ಳಲು ನೋಡುತ್ತಿದ್ದಾರೆ. ಪುಸ್ತಕಗಳನ್ನು ಕೊಳ್ಳುವುದು, ಮಿತ್ರರನ್ನು ಭೇಟಿ ಮಾಡುವುದು, ಹರಟುವುದು ಇತ್ಯಾದಿ ಕ್ರಿಯೆಗಳಲ್ಲಿ ತೃಪ್ತಿಪಟ್ಟುಕೊಂಡು 'ಜಾತ್ರೆ'ಯ ಯಶಸ್ಸಿಗೆ ಸಹಕರಿಸುತ್ತಲೇ ಬಂದಿದ್ದಾರೆ.

ಈ ಜಾತ್ರೆಯ ಸ್ವರೂಪದ ಬಗ್ಗೆ ಸಿಟ್ಟಿಗೆದ್ದು ಪರ್ಯಾಯ ಸಮ್ಮೇಳನವನ್ನು ನಡೆಸುವುದರ ಮೂಲಕ ಬಂಡಾಯ ಸಾಹಿತ್ಯ ಸಂಘಟನೆಗೆ ಕಾರಣರಾದ ಸಾಹಿತಿಗಳು ಕೂಡಾ ಈ ಜಾತ್ರೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾರಂಭಿಸಿ ಅನೇಕ ವರ್ಷಗಳೇ ಕಳೆದಿವೆ. ಕನ್ನಡ ಸಾಹಿತ್ಯ ಪರಿಷತ್ತು ಒಂದು ಪ್ರಜಾಸತ್ತಾತ್ಮಕ ಸಂಸ್ಥೆ; ಕನ್ನಡಿಗರ ಬೃಹತ್ ಸಂಸ್ಥೆ. ಇದನ್ನು ದೂರವಿಡುವುದು ಸರಿಯಾದ ಕ್ರಮವಲ್ಲ ಎಂಬ ತಾತ್ವಿಕ ಚಿಂತನೆ ಸರಿಯಾದದ್ದೇ. ಆದರೂ ಈಗ ನಡೆಯುತ್ತಿರುವ ಸಮ್ಮೇಳನಗಳಲ್ಲಿ, ಅವುಗಳ ಸ್ವರೂಪಗಳಲ್ಲಿ, ತಾತ್ವಿಕ ಚಿಂತನೆಗಳಲ್ಲಿ ಕೆಲವು ಗಂಭೀರ ದೋಷಗಳಿರುವುದನ್ನು ನಾವು ಉಪೇಕ್ಷಿಸುವಂತಿಲ್ಲ. ಈ ದೋಷಗಳನ್ನು ತೋರಿಸುತ್ತಲೇ ಸಾತ್ವಿಕ ಕೋಪವನ್ನು ವ್ಯಕ್ತಪಡಿಸುವುದು, ಈ ಬಗ್ಗೆ ಸಾರ್ವಜನಿಕ ಸಂವಾದವೊಂದನ್ನು ನಡೆಸುತ್ತಲೇ ದೋಷಗಳನ್ನು ತಿದ್ದಿಕೊಳ್ಳಲು ಒತ್ತಡವನ್ನು ಹೇರುವುದು ನಮ್ಮ ಕರ್ತವ್ಯ. ಕನ್ನಡಿಗರ ಸಾತ್ವಿಕ ಕೋಪವನ್ನು ಕೆರಳಿಸುವ ಈ ದೋಷಗಳು ಯಾವ ಸ್ವರೂಪದವು? ಚಿತ್ರದುರ್ಗದಲ್ಲಿ ನಡೆಯುತ್ತಿರುವ 75ನೇ ಕನ್ನಡ ಸಾಹಿತ್ಯ ಸಮ್ಮೇಳನದ ಹೊತ್ತಿನಲ್ಲಾದರೂ ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾದ ಅಗತ್ಯವಿದೆ.

ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ, ನೆಲ-ಜಲದ ಪ್ರಶ್ನೆಗಳು, ಗಣಿಗಾರಿಕೆ, ದೇಸೀಯತೆ, ಕೋಮು ಸಂಘರ್ಷಗಳು ಇತ್ಯಾದಿ ಕನ್ನಡ ನಾಡಿನ ಜ್ವಲಂತ ಪ್ರಶ್ನೆಗಳಿಗೆ ಮುಖಾಮುಖಿಯಾಗಿ ನಿಂತು ಚರ್ಚಿಸುವ, ಸಂವಾದಿಸುವ, ಚಿಂತಿಸುವ, ಸಾಮೂಹಿಕವಾಗಿ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನ ಇಂಥ ಸಮ್ಮೇಳನಗಳಲ್ಲಿ ಸಾಧ್ಯವಾಗುವುದಾದರೆ ಖಂಡಿತವಾಗಿಯೂ ಪ್ರತಿಯೊಬ್ಬ ಕನ್ನಡಿಗನೂ ಈ ಸಮ್ಮೇಳನಗಳನ್ನು ಬೆಂಬಲಿಸುವ ಹೊಣೆಯನ್ನು ತನ್ನ ಹೆಗಲಮೇಲೆ ಹೊರಲು ಸಿದ್ಧವಿರಬೇಕಾಗುತ್ತದೆ. ಅದು ಕನ್ನಡದ ಹೊಣೆಗಾರಿಕೆ; ಕನ್ನಡಿಗರು ಮಾಡಿ ಮುಗಿಸಲೇಬೇಕಾದ ಕರ್ತವ್ಯ ಭಾಗವೂ ಹೌದು. ಪ್ರತಿವರ್ಷ ಪರಿಷತ್ತು ನಡೆಸುತ್ತಿರುವ ಸಮ್ಮೇಳನಗಳು ಈ ದಿಕ್ಕಿನಲ್ಲಿ ಕ್ರಿಯಾಶೀಲವಾಗಿವೆಯೇ? - ಈ ಪ್ರಶ್ನೆಯನ್ನು ಕೂಡಾ ನಾವೆಲ್ಲ ಕೇಳಿಕೊಳ್ಳಬೇಕಾಗಿದೆ.

ದೋಷದ ಪ್ರಶ್ನೆಗೆ ಬಂದರೆ: ಪರಿಷತ್ತು ಒಂದು ಪ್ರಜಾಸತ್ತಾತ್ಮಕ ಸಂಸ್ಥೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯೇ ಜಾತ್ಯತೀತ ತತ್ವವನ್ನು ಒಪ್ಪಿಕೊಂಡದ್ದು. ಈ ತತ್ವವೇ ಪ್ರಜಾಪ್ರಭುತ್ವದ ಜೀವಾಳ. ಪ್ರಜಾಸತ್ತಾತ್ಮಕ ಸಂಸ್ಥೆಗಳು, ಅದರಲ್ಲೂ ಸಮಗ್ರ ಕನ್ನಡ ಜನತೆಯ ಪ್ರಾತಿನಿಧಿಕ ಸಂಸ್ಥೆ ಎಂದು ಕರೆಯಲಾಗುವ ಕನ್ನಡ ಸಾಹಿತ್ಯ ಪರಿಷತ್ತು ಈ ಜಾತ್ಯತೀತ ತತ್ವವನ್ನು ಅಂಗೀಕರಿಸಿಯೇ ಕೆಲಸ ಮಾಡಬೇಕಾಗುತ್ತದೆ. (ದೊಡ್ಡ ವ್ಯಂಗ್ಯ ಎಂದರೆ ಈ ಪರಿಷತ್ತಿನ ಪದಾಧಿಕಾರಿಗಳ ಆಯ್ಕೆಯಲ್ಲಿಯೇ ಜಾತಿಗಳು ಪ್ರಧಾನ ಪಾತ್ರ ವಹಿಸುವುದನ್ನು ನಾವು ನೋಡುತ್ತ ಬಂದಿದ್ದೇವೆ. ಕನ್ನಡ ಸಾಹಿತ್ಯ ಪರಿಷತ್ತಿನ ಈವರೆಗಿನ ಇತಿಹಾಸವನ್ನು ನೋಡಿದರೂ ಈ ಜಾತಿ ರಾಜಕೀಯದ ಆಟವನ್ನು ಗುರುತಿಸಬಹುದು) ಸಾಹಿತ್ಯ ಸಮ್ಮೇಳನಗಳ ಸ್ವರೂಪವನ್ನೇ ನೋಡಿ: ಇದು ಜಾತ್ಯತೀತ ಎಂದು ಹೇಳಲಾಗದ ಸ್ಥಿತಿಯತ್ತ ಹೊರಳುತ್ತಿದೆ. ಸಂಬಂಧವಿರಲಿ, ಇಲ್ಲದಿರಲಿ 'ಧರ್ಮ'ಗಳ, ಮಠ ಮಾನ್ಯಗಳ 'ದಿವ್ಯ ಸಾನ್ನಿಧ್ಯ' ತಾನೇತಾನಾಗಿ ಮೈದಳೆಯುತ್ತಿದೆ. ಒಂದು ಕಾಲಕ್ಕೆ ರಾಜಕಾರಣಿಗಳನ್ನು ಸಾಹಿತ್ಯ ಸಮ್ಮೇಳನಗಳಿಗೆ ಆಹ್ವಾನಿಸುವುದೇ ಮುಖ್ಯ ಪ್ರಶ್ನೆಯಾಗಿ ಚರ್ಚೆಯಾಗುತ್ತಿತ್ತು, ಆದರೆ ಈಗ ಅದು ಪ್ರಶ್ನೆಯಾಗಿ ಉಳಿದಿಲ್ಲ, 'ಜನಪ್ರತಿನಿಧಿ'ಗಳೆಂಬ ಕಾರಣವನ್ನು ನೀಡಿ ಅವನ್ನು ಸಮ್ಮೇಳನಗಳ ವೇದಿಕೆಗಳ ಮೇಲೆ ಪ್ರತಿಷ್ಠಾಪಿಸಲಾಗುತ್ತಿದೆ. ಜನಪ್ರತಿನಿಧಿಗಳು ಖಂಡಿತಾ ಗೌರವಾನ್ವಿತರು. ಅವರಿಗೊಂದು ಗೌರವದ ಸ್ಥಾನವೂ ಇದೆ. ಆದರೆ ಅವರು ಸಾಹಿತ್ಯ ಸಮ್ಮೇಳನದಲ್ಲಿ ಸಲ್ಲುತ್ತಾರೆಯೇ? ಸಾಹಿತ್ಯ ಸಮ್ಮೇಳನ ಎಂಬುದು ವಿಶಿಷ್ಟ ಸ್ವರೂಪದ್ದು. ಸಮಸ್ತ ಕನ್ನಡಿಗರು ಒಂದೆಡೆ ಸೇರಿ ಸಾಹಿತ್ಯ ಸಂಸ್ಕೃತಿ ಕನ್ನಡ ನಾಡಿನ ಅನೇಕ ಜ್ವಲಂತ ಪ್ರಶ್ನೆಗಳನ್ನು ಸಾಮೂಹಿಕವಾಗಿ ಚರ್ಚಿಸುವ ವೇದಿಕೆ ಈ ಸಮ್ಮೇಳನ. ನಾಡಿನ ಪ್ರಶ್ನೆ ಬಂದಾಗ ಜನಪ್ರತಿನಿಧಿಗಳ ಪಾಲ್ಗೊಳ್ಳುವಿಕೆ ಬೇಡವೇ? ಖಂಡಿತಾ ಬೇಕು. ಆದರೆ ಹೇಗೆ? ಅಲಂಕಾರಕ್ಕಲ್ಲ, ಮುಖ್ಯ ಪ್ರಶ್ನೆಗಳನ್ನೆತ್ತುವ ಸಂವಾದಗಳಲ್ಲಿ ಅವರು ಭಾಗವಹಿಸಬೇಕು. ಜನರ ಅನುಮಾನಗಳಿಗೆ ಉತ್ತರವನ್ನು ಕೊಡುತ್ತ ತಾವು ಅನೇಕ ವಿಚಾರಗಳನ್ನು ತಿಳಿಯುತ್ತ ಇಂಥ ಸಂವಾದಗಳು ಅರ್ಥಪೂರ್ಣವಾಗುವಂತೆ ಮತ್ತು ಪ್ರಯೋಜನಕಾರಿಯಾಗುವಂತೆ ನೋಡಿಕೊಳ್ಳುವುದು ಅವರ ಹೊಣೆಯಾಗಬೇಕು. ಉದಾಹರಣೆಗೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿರುವ ವಿಚಾರವನ್ನೇ ತೆಗೆದುಕೊಂಡರೂ, ಈ ಬಗ್ಗೆ ನಮ್ಮ ಜನಪ್ರತಿನಿಧಿಗಳಿಗೆ ಎಷ್ಟು ಗೊತ್ತು? ಈ ವಿಚಾರದಲ್ಲಿ ಅವರ ಕರ್ತವ್ಯವೇನು, ವಿದ್ವಾಂಸರ ಹೊಣೆಗಾರಿಕೆ ಏನು, ಸಾರ್ವಜನಿಕರ ಕರ್ತವ್ಯವೇನು ಇತ್ಯಾದಿ ಎಲ್ಲವನ್ನೂ ಕೂಲಂಕಷವಾಗಿ ಚರ್ಚಿಸುವ ಗೋಷ್ಠಿಗಳಲ್ಲಿ ಜನಪ್ರತಿನಿಧಿಗಳು ಭಾಗವಹಿಸುವುದಾದರೆ ಅಂಥ ಗೋಷ್ಠಿಗಳಿಗೆ ಹೊಸ ಆಯಾಮ ಬರುತ್ತದೆ; ಜನ-ಜನಪ್ರತಿನಿಧಿಗಳ ನಡುವೆ ಹೊಸ ಸಂಬಂಧ ರೂಪಗೊಳ್ಳುತ್ತದೆ. ತಮಿಳು ನಾಡಿನ ಜನಪ್ರತಿನಿಧಿಗಳ ಸಂಸ್ಕೃತಿ ನಿಷ್ಠೆಯ ಬೆಳಕಿನಲ್ಲಿ ನಮ್ಮ ಪ್ರತಿನಿಧಿಗಳನ್ನು ನೋಡಿದಾಗ ಈ ವಿಚಾರ ಇನ್ನಷ್ಟು ಸ್ಪಷ್ಟವಾಗುತ್ತದೆ.

ಆದರೆ ನಮ್ಮ ಸಾಹಿತ್ಯ ಸಮ್ಮೇಳನಗಳಲ್ಲಿ ಜನಪ್ರತಿನಿಧಿಗಳು ಹೇಗೆ ಭಾಗವಹಿಸುತ್ತಿದ್ದಾರೆ? ಅದೊಂದು ಅಲಂಕಾರ; ಅದೊಂದು ಉಪಚಾರ. ಯಾಕೆ ಇದು? ಲಕ್ಷಾಂತರ ರೂಪಾಯಿಗಳ ಗಡಿಯನ್ನು ದಾಟಿ ಕೋಟ್ಯಂತರ ರೂಪಾಯಿಗಳ ಬಾಬತ್ತಾಗಿರುವ ಸಮ್ಮೇಳನಗಳಲ್ಲಿ ರಾಜಕಾರಣಿಗಳು ಈ ಉಪಚಾರವನ್ನು ಪಡೆಯದೇ ಹೋದರೆ, ಸರ್ಕಾರಿ ಬೊಕ್ಕಸದ ಹಣ (ಇದು ಸಾರ್ವಜನಿಕರದೇ ಆದರೂ) ಪರಿಷತ್ತಿನವರೆಗೆ ಹರಿದು ಬರುವುದೇ? ರಾಜಕಾರಣಿಗಳು ವೇದಿಕೆಯನ್ನು ಅಲಂಕರಿಸುವುದರ ಹಿಂದೆ ಈ ಕಾರಣವಲ್ಲದೆ ಬೇರೊಂದು ಕಾರಣವಿಲ್ಲ ಎಂಬುದನ್ನು ಎಲ್ಲರೂ ಬಲ್ಲರು.



> ಒಂದು ಕಾಲಕ್ಕೆ ರಾಜಕಾರಣಿಗಳನ್ನು ಸಾಹಿತ್ಯ ಸಮ್ಮೇಳನಗಳಿಗೆ ಆಹ್ವಾನಿಸುವುದೇ ಮುಖ್ಯ ಪ್ರಶ್ನೆಯಾಗಿ ಚರ್ಚೆಯಾಗುತ್ತಿತ್ತು. ಆದರೆ ಈಗ ಅದು ಉಳಿದಿಲ್ಲ. 'ಜನಪ್ರತಿನಿಧಿ'ಗಳೆಂಬ ಕಾರಣವನ್ನು ನೀಡಿ ಅವರನ್ನೂ ಸಮ್ಮೇಳನಗಳ ವೇದಿಕೆಗಳ ಮೇಲೆ ಪ್ರತಿಷ್ಠಾಪಿಸಲಾಗುತ್ತಿದೆ. ಹಾಗೆಯೇ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳಲ್ಲಿ ಕೆಲವರು ಮಠಾಧೀಶರು ಭಾಗವಹಿಸುತ್ತಿದ್ದಾರೆ. ಆ ಸಮಾರಂಭಗಳಲ್ಲಿ ಅವರ ಕರ್ತವ್ಯ ಏನು ಎಂಬುದೇ ಸ್ಪಷ್ಟವಾಗಿಲ್ಲ. ಆಹ್ವಾನ ಪತ್ರಿಕೆಗಳಲ್ಲಿ 'ದಿವ್ಯ ಸಾನ್ನಿಧ್ಯ' ಎಂದೇನೋ ಕಾಣಿಸಲಾಗಿದೆ. ಸಾಹಿತ್ಯ ಸಮ್ಮೇಳನದಲ್ಲಿ ಈ ಪದದ ಅರ್ಥವೇನು? ಎಂಬುದನ್ನು ಬಲ್ಲವರೇ ಹೇಳಬೇಕು.

ಸಮಗ್ರ ಕನ್ನಡಿಗರ ಈ ಸಮ್ಮೇಳನದಲ್ಲಿ ಜನಪ್ರತಿನಿಧಿಗಳಾದ ರಾಜಕಾರಣಿಗಳು ಸ್ವಯಂಸೇವಕರಾಗಿ ದುಡಿಯುವುದು ಯಾಕೆ ಸಾಧ್ಯವಿಲ್ಲ, ಇಂಥ ಒಂದು ಅವಕಾಶವನ್ನು ಪರಿಷತ್ತು ಯಾಕೆ ರಾಜಕಾರಣಿಗೆ ಕಲ್ಪಿಸಿಕೊಡುವ ಧೈರ್ಯವನ್ನು ತೋರುತ್ತಿಲ್ಲ? ಇದು ರಾಜಕಾರಣಿಗಳ ಕನ್ನಡ ನಿಷ್ಠೆಯನ್ನು ಪರೀಕ್ಷೆಗೊಡ್ಡುವ ಸಾಧನವಾಗುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಒಂದು ಸಮ್ಮೇಳನ ಈ ದಿಕ್ಕಿನಲ್ಲಿ ಹೆಜ್ಜೆ ಹಾಕಿದರೆ ಅದೊಂದು ಸಂಪ್ರದಾಯವಾಗಿಯೇ ಬೆಳೆಯುವ ಸಾಧ್ಯತೆಯೂ ಇದೆ. ಅದನ್ನು ರಾಜಕಾರಣಿಗಳೂ ಒಂದು ಬಗೆಯ ವಿನಯದಲ್ಲಿಯಾದರೂ ಒಪ್ಪಿಕೊಂಡಾರು!

ಆದರೆ ಇತ್ತೀಚಿನ ವರ್ಷಗಳಲ್ಲಿ ನಾವು ಆರಂಭಿಸಿರುವ 'ಹೊಸ ಸಂಪ್ರದಾಯ'ವಾದರೂ ಎಂಥದು? ರಾಜಕಾರಣಿಗಳ ಅಲಂಕಾರದಂತೆಯೇ ಮಠಾಧೀಶರ ಅಲಂಕಾರ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ 'ಅಸ್ಪೃಶ್ಯರಲ್ಲ' ಈ ಮಾತನ್ನು ರಾಜಕೀಯ ಪಕ್ಷಗಳೇ ಆಡಲಾರಂಭಿಸಿವೆ. ಆದರೆ ರಾಜಕೀಯ ಪಕ್ಷಗಳ ಈ ಮಾತಿನ ಹಿಂದೆ ಪಕ್ಷಾಂತರದ ಧೂರ್ತ ಚಿಂತನೆಯಿದೆ; ಯಾರೊಂದಿಗೋ ಯಾರೊ ಸೇರಿ ಆಡಳಿತವನ್ನು ಹಿಡಿಯುವ ಕೆಟ್ಟ ಹುನ್ನಾರವೂ ಇದೆ. ಇಲ್ಲಿ ಆ ಅರ್ಥವನ್ನು ಹಚ್ಚಿ ನೋಡಬೇಕಾಗಿಲ್ಲ, ನಿಜಕ್ಕೂ ಪ್ರತಿಯೊಬ್ಬ ವ್ಯಕ್ತಿಯೂ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಬಹುದು. ಆದರೆ ಅವರ ಪಾತ್ರಗಳ ಬಗ್ಗೆ ಮಾತ್ರ ಸರಿಯಾದ ಚಿಂತನೆ ಇರಬೇಕಾಗುತ್ತದೆ. 'ಮಠಗಳು ಮತ್ತು ಶಿಕ್ಷಣದ ವಾಣಿಜ್ಯೀಕರಣ' ಎನ್ನುವ ಗೋಷ್ಠಿಯೊಂದು ಇರುವುದಾದರೆ ಅದರಲ್ಲಿ ಭಾಗವಹಿಸಲು ಮಠಾಧೀಶರು ಖಂಡಿತಾ ಅರ್ಹ ವ್ಯಕ್ತಿಗಳಾಗುತ್ತಾರೆ. ಇಲ್ಲವೇ 'ಕೋಮುಘರ್ಷಣೆ ಮತ್ತು ಧಾರ್ಮಿಕ ಮೂಲಭೂತವಾದ' ಗೋಷ್ಠಿಯಲ್ಲಿಯೂ ಭಾಗವಹಿಸಬಹುದು. ಅಂದರೆ ಅಧಿಕೃತವಾಗಿ ಅವರು ಮಾತನಾಡುವ ವಿಚಾರಗಳಾದರೆ ಅವುಗಳಲ್ಲಿ ಅವರು ಭಾಗವಹಿಸಬಹುದು. ಚಿತ್ರದುರ್ಗದಲ್ಲಿ ನಡೆಯುತ್ತಿರುವ 'ವಚನ ಸಾಹಿತ್ಯ' ಎನ್ನುವ ಒಂದು ಗೋಷ್ಠಿಯಲ್ಲಿ ಹಾಗೊಬ್ಬ ಮಠಾಧೀಶರು ಭಾಗವಹಿಸುತ್ತಿದ್ದಾರೆ. ಅವರು ವಚನ ಸಾಹಿತ್ಯದಲ್ಲಿ ವಿದ್ವಾಂಸರಿರಬಹುದೆಂದು ತೋರುತ್ತದೆ. ಹಾಗಿದ್ದರೆ ಅದು ಸರಿ. ಆದರೆ ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳಲ್ಲಿ ಕೆಲವರು ಮಠಾಧೀಶರು ಭಾಗವಹಿಸುತ್ತಿದ್ದಾರೆ. ಆ ಸಮಾರಂಭಗಳಲ್ಲಿ ಅವರ ಕರ್ತವ್ಯ ಏನು ಎಂಬುದೇ ಸ್ಪಷ್ಟವಾಗಿಲ್ಲ. ಆಹ್ವಾನ ಪತ್ರಿಕೆಗಳಲ್ಲಿ 'ದಿವ್ಯ ಸಾನ್ನಿಧ್ಯ?' ಎಂದೇನೋ ಕಾಣಿಸಲಾಗಿದೆ. ಸಾಹಿತ್ಯ ಸಮ್ಮೇಳನದಲ್ಲಿ ಈ ಪದದ ಅರ್ಥವೇನು ಎಂಬುದನ್ನು ಬಲ್ಲವರೇ ಹೇಳಬೇಕು.

ಇವತ್ತು ಕರ್ನಾಟಕ ಛಿದ್ರಛಿದ್ರವಾಗುತ್ತಿದ್ದರೆ, ಕೋಮು ಸೌಹಾರ್ದ ಕಲಕಿ ಅದು ಕೋಮು ದಳ್ಳುರಿಯಾಗಿ ದಹಿಸುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ ಜಾತಿ ರಾಜಕೀಯದ ದಾಳಗಳನ್ನು ಉರುಳಿಸುತ್ತಿರುವ ರಾಜಕಾರಣಿಗಳು ಮತ್ತು ಅವರ ಹಿಂದೆ ಸಕ್ರಿಯವಾಗಿ ಇದ್ದು ಅವರನ್ನು ನಿಯಂತ್ರಿಸುತ್ತಿರುವ ಮಠಾಧೀಶರು ಮತ್ತು 'ಧಾರ್ಮಿಕ ಮುಖಂಡರು.' ಇವರನ್ನು ಸಾಕ್ಷಿ ಕಟ್ಟೆಯ ಮೇಲೆ ನಿಲ್ಲಿಸಿ ಪ್ರಶ್ನಿಸುವ ಕೆಲಸ ಸಾಹಿತ್ಯ ಸಮ್ಮೇಳನಗಳಲ್ಲಿ ನಡೆಯಬೇಕಾಗಿದೆ. ಆದರೆ ನಮ್ಮ ಸಮ್ಮೇಳನಗಳು 'ದಿವ್ಯ ಸಾನ್ನಿಧ್ಯ'ಗಳಿಂದಲೇ ವೇದಿಕೆಗಳನ್ನು ಝಗಮಗಿಸುವಂತೆ ಮಾಡುತ್ತಿವೆ.


ಧಾರ್ಮಿಕ ನಾಯಕತ್ವವನ್ನು ವಹಿಸಿದಂತೆ, ಜನಹಿತವೇ ತಮ್ಮ ಪರಮಗುರಿ ಎಂದು ಬಹಿರಂಗದಲ್ಲಿ ತೋರಿಸಿಕೊಳ್ಳುತ್ತಿರುವ ಮಠಗಳು, ಪೀಠಗಳು, ಧರ್ಮಕ್ಷೇತ್ರಗಳು ವಾಸ್ತವದಲ್ಲಿ ಹಾಗಿವೆಯೇ? ಶಿಕ್ಷಣವನ್ನು, ಆರೋಗ್ಯ ಸೇವೆಯನ್ನು ಒಂದು ವ್ಯಾಪಾರವಾಗಿ ಮಾಡಿಕೊಂಡಿರುವ ಈ ಸ್ವಯಂಘೋಷಿತ 'ಧರ್ಮಾಧಿಕಾರಿ'ಗಳು ಕೋಮುಸೌಹಾರ್ದವನ್ನು ಕಾಯ್ದಿರುವ ಉದಾಹರಣೆಗಳು ಇವೆಯೇ? ಸಂಘ ಪರಿವಾರದ ದುಷ್ಟ ರಾಜಕೀಯಕ್ಕೆ ತಮ್ಮ ಕಾವಿಗಳ ಮರೆಯಲ್ಲಿಯೇ ತುಪ್ಪವನ್ನು ಸಮೃದ್ಧವಾಗಿ ಸುರಿಯುವ, ಚುನಾವಣೆ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೆ ತೆರೆಮರೆಯಲ್ಲಿಯೇ 'ಕಾಣಿಕೆ' ಸಲ್ಲಿಸುವ, 'ಆಶೀರ್ವದಿಸುವ', ಮಠ, ಪೀಠ, ಧರ್ಮಕ್ಷೇತ್ರಗಳು ಅಧಿಕವಾಗಿರುವ (ಒಂದೆರಡು ಅಪವಾದಗಳಿರಬಹುದೇ?) ಈ ನಾಡಿನಲ್ಲಿ ಅಲ್ಪಸಂಖ್ಯಾತರು ನೆಮ್ಮದಿಯಿಂದ ಉಸಿರಾಡಿದ್ದೇ ಈ ದಿನಗಳಲ್ಲಿ ಕಾಣಿಸುತ್ತಿಲ್ಲ. ಸರ್ವಧರ್ಮ ಸಮ್ಮೇಳನಗಳನ್ನು ನಡೆಸುತ್ತ ಧರ್ಮ ಪಾರಾಯಣವನ್ನು ಮಾಡುತ್ತ ಆಸ್ಥಾನ ವಿದ್ವಾಂಸರಿಗೆ ಶಾಲುಗಳನ್ನು ಹೊದ್ದಿಸುವ ಈ ಧರ್ಮಗುರುಗಳು ಎಂದಾದರೂ ಜಾತ್ಯತೀತ ನೆಲೆಯಲ್ಲಿ ನಿಂತು ಚಿಂತಿಸಿ, ಜಾತಿ ರಾಜಕಾರಣವನ್ನು ಕಟುವಾಗಿ ಟೀಕಿಸಿರುವ ಉದಾಹರಣೆಗಳು ಸಿಕ್ಕುತ್ತವೆಯೇ? ಎಲ್ಲ ಮಠಾಧೀಶರು ತಾವು ಜಾತಿಗಳ ಸಂಕುಚಿತ ಮನೋಧರ್ಮವನ್ನು ಮೀರಿದವರು ಎಂದು ಹೇಳಿಕೊಂಡರೂ, ಜಾತಿಯ ಕಟ್ಟುಪಾಡುಗಳನ್ನು ಮೀರಿ 'ಮಾನವ ಕುಲಂ ತಾನೊಂದೆವಲಂ' ಎಂದು ಧೈರ್ಯವಾಗಿ ನುಡಿಯುವ, ನುಡಿದಂತೆ ನಡೆಯುವ ಎದೆಗಾರಿಕೆಯನ್ನು ಯಾವುದಾದರೂ ಒಂದು ಸಂದರ್ಭದಲ್ಲಿ ತೋರಿಸಿದ್ದಾರೆಯೇ? ಜಾತಿಗಳು, ಅವುಗಳ ಒಳಗೇ ಉಪಜಾತಿಗಳು ಹೀಗೆ ತಮ್ಮದೇ ಜಗತ್ತನ್ನು ಕಟ್ಟಿಕೊಳ್ಳುತ್ತ ಅವುಗಳಿಗೆ ಜಗದ್ಗುರುಗಳಾಗುತ್ತ ಮನುಷ್ಯರನ್ನು ಒಡೆಯಲು ನೋಡುವ, ಇಂದಿಗೂ ಅಸ್ಪೃಶ್ಯತೆಯನ್ನು ಆಚರಿಸುತ್ತ, ಬಹಿರಂಗದಲ್ಲಿ ತಾವು ಜಾತಿಯನ್ನು ವಿರೋಧಿಸುವ ಧರ್ಮಗುರುಗಳೆಂದು ಸಾರುತ್ತ ಜನರನ್ನು ವಂಚಿಸುತ್ತಿರುವ, ಸಮಾನತೆ ಮತ್ತು ಜಾತ್ಯತೀತ ತತ್ವಗಳನ್ನು ಗಾಳಿಗೆ ತೂರಿ ನಿಜವಾದ ಪ್ರಜಾಪ್ರಭುತ್ವಕ್ಕೆ ದ್ರೋಹ ಬಗೆಯುತ್ತಿರುವಂಥ ವ್ಯಕ್ತಿಗಳ ಸಾನ್ನಿಧ್ಯ ಹೇಗೆ 'ದಿವ್ಯ'ವಾಗುತ್ತದೆ? ಇಡೀ ಕನ್ನಡಿಗರ ಗೌರವಕ್ಕೆ ಪಾತ್ರರಾದವರು ಎಂದು ಆಯ್ಕೆಮಾಡುವ ಸಮ್ಮೇಳನಾಧ್ಯಕ್ಷರ ಸಾನ್ನಿಧ್ಯವನ್ನೂ 'ದಿವ್ಯ' ಎಂದು ಪರಿಗಣಿಸದ ಪರಿಷತ್ತು ಈ 'ದಿವ್ಯ ಸಾನ್ನಿಧ್ಯ' ಎನ್ನುವ ಪದವನ್ನು ಹೇಗೆ ಮತ್ತು ಯಾವ ಅರ್ಥದಲ್ಲಿ ಬಳಸುತ್ತದೆ? 'ಸಾಮಾನ್ಯ' ಕನ್ನಡಿಗರಿಗೆ ಅದನ್ನು ವಿವರಿಸಿ ಹೇಳುವ ಕೃಪೆಯನ್ನಾದರೂ ಮಾಡಬೇಕಾಗುತ್ತದೆ. ಹಾಗೆಯೇ ಸಮ್ಮೇಳನಾಧ್ಯಕ್ಷರಿಗೆ ಒಂದು 'ಶ್ರೀ' ಗೌರವದ ಬೆಂಗಾವಲಾದರೆ ಈ 'ಗುರು'ಗಳಿಗೆ 'ಶ್ರೀ ಶ್ರೀ'ಗಳ ಬೆಂಗಾವಲು ಹೇಗೆ ಎಂಬುದನ್ನೂ ವಿವರಿಸಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಮಾನ, ಪ್ರತಿಯೊಬ್ಬನಿಗೂ ಇರುವುದು ಒಂದೇ ಓಟು. ಆದರೂ ಈ ಶ್ರೀ ಶ್ರೀಗಳ ತಾರತಮ್ಯ ಯಾಕೆ? ಕೊಡುವುದಾದರೆ ಎಲ್ಲರಿಗೂ ನಾಲ್ಕೋ ಆರೋ ಶ್ರೀಗಳನ್ನು ಸಮಾನವಾಗಿ ಕೊಡಬಹುದಲ್ಲ! ಇದು ಯಾವ ಜಾತ್ಯತೀತ ತತ್ವ? 'ಜಾತ್ಯತೀತ' ಎಂದರೆ ಎಲ್ಲ ಜಾತಿಗಳನ್ನೂ, ಧರ್ಮಗಳನ್ನೂ ಇಟ್ಟುಕೊಂಡು, ಅವುಗಳನ್ನೆಲ್ಲ ಸಮಾನವಾಗಿ ನೋಡುವುದು ಎಂದು ಅರ್ಥೈಸುವವರೂ ಇದ್ದಾರೆ. ಹಾಗೆ ಭಾವಿಸಿದರೂ ಈ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೆ ಎಲ್ಲ ಜಾತಿಮತಧರ್ಮಗಳ 'ಗುರು'ಗಳೂ ಇರುತ್ತಾರೆಯೇ? ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಸಿಖ್ ಇತ್ಯಾದಿ ಧರ್ಮ ಗುರುಗಳಿಗೆ ಯಾಕೆ ಜಾಗ ಇರುವುದಿಲ್ಲ. ಹೀಗೆ 'ಕುರ್ಚಿ' ಕಲ್ಪಿಸುತ್ತಾ ಹೋದರೆ ಸಾಹಿತ್ಯ ಸಮ್ಮೇಳನ ಧರ್ಮ ಸಮ್ಮೇಳನವೇ ಆಗುತ್ತದೆಯಲ್ಲವೇ? ವಾಸ್ತವ ಎಂದರೆ ಪ್ರಭಾವಿ ರಾಜಕಾರಣಿಗಳು, ಅವರ ಹಿಂದಿರುವ ಪ್ರಭಾವಿ ಮಠಾಧಿಪತಿಗಳು ವೇದಿಕೆಯ ಮೇಲೆ ಮಿಂಚಬೇಕು. ಇದಿಷ್ಟೇ ಉದ್ದೇಶ.

ಸಮ್ಮೇಳನಗಳಿಗೆ ಜನಪ್ರತಿನಿಧಿಗಳನ್ನು ಮತ್ತು ಮಠಾಧೀಶರನ್ನು ಆಹ್ವಾನಿಸಿ, ವೇದಿಕೆಯ ಮೇಲೆ ಅವರನ್ನು ಪ್ರತಿಷ್ಠಾಪಿಸಿ ಅವರನ್ನು ಸಂಪ್ರೀತಗೊಳಿಸುವುದು, ಸಮಾಧಾನಪಡಿಸುವುದು ಒಂದು ತಂತ್ರದಂತೆಯೇ ಕಾಣಿಸುತ್ತದೆ. ಪರಿಷತ್ತಿನಂಥ ಒಂದು ಸಂಸ್ಥೆ ಇಂಥ ತಂತ್ರಗಾರಿಕೆಯನ್ನು ಮಾಡಬಾರದು. ರಾಜಕಾರಣದಲ್ಲಿ ಇಂಥ ತಂತ್ರಗಳು, ಪ್ರತಿತಂತ್ರಗಳು ಸಹಜವಾಗಿ ಕಾಣಿಸಬಹುದು. ಅಲ್ಲಿಯೂ ಅವು ಕೈಕೊಡುವ ಸಂಭವವೇ ಹೆಚ್ಚು, ಆದರೆ ಪರಿಷತ್ತು ಕೇವಲ ಹಣ ಪಡೆಯುವುದಕ್ಕೆ ಇಲ್ಲವೇ ಸಮ್ಮೇಳನದ ಸವಲತ್ತುಗಳನ್ನು ರೂಪಿಸುವುದಕ್ಕೆ ಇಂಥ ತಂತ್ರಗಳನ್ನು ಮಾಡಬಹುದೇ? ಇದು ತಾತ್ವಿಕವಾಗಿ ಖಂಡನಾರ್ಹವಾದದ್ದು. ಸರ್ಕಾರ ಕೊಡುವ ಹಣ ಜನತೆಯ ಹಣ. ಈ ಹಣವನ್ನು ಕೊಡುವುದು ಸರ್ಕಾರದ ಕರ್ತವ್ಯ; ಪಡೆಯುವುದು ಪರಿಷತ್ತಿನ ಹಕ್ಕು. ಈ ಒಂದು ಅರಿವು ಮತ್ತು ಅದನ್ನು ಪಡೆಯುವ ಶಕ್ತಿ ಮತ್ತು ಎದೆಗಾರಿಕೆ ಪರಿಷತ್ತಿಗೆ ಇರಬೇಕು. ಇದು ಕನ್ನಡಿಗರ ಶಕ್ತಿಯೂ ಆಗಿ ಮಾರ್ಪಡಬೇಕು.

'ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ' ಎಂದು ಕುವೆಂಪು ಹೇಳಿದ್ದು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಪರಿಷತ್ತಿಗೇ ಕೇಳಿಸದೆ ಇರುವ ವಿಚಿತ್ರ ಸನ್ನಿವೇಶದಲ್ಲಿ ನಾವಿಂದು ಇದ್ದೇವೆ. ದಕ್ಷಿಣ ಕನ್ನಡದಂಥ ಜಿಲ್ಲೆಗಳಲ್ಲಿ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಭೀತಿಯ ನೆರಳಲ್ಲೇ ಬದುಕುತ್ತಿರುವುದು, ಮತಾಂತರವನ್ನು ಒಂದು ಭೂತವಾಗಿ ತೋರಿಸಿ ಮುಸ್ಲಿಮರ ಮತ್ತು ಕ್ರಿಶ್ಚಿಯನ್ನರ ವಿರುದ್ಧ ಇತರ ಧರ್ಮೀಯರನ್ನು ಎತ್ತಿಕಟ್ಟುತ್ತಿರುವ ಕ್ರೂರ ರಾಜಕೀಯ ಹುನ್ನಾರಗಳು ಬಲಿಷ್ಠವಾಗುತ್ತಿರುವುದು, ಇಡೀ ರಾಷ್ಟ್ರದ ರಾಜಕೀಯವನ್ನು ನಿಯಂತ್ರಿಸಲು ಮೂಲಭೂತವಾದಿಗಳು ನೋಡುತ್ತಿರುವುದು, ಧರ್ಮದ ಹೆಸರಿನಲ್ಲಿ ಭಯೋತ್ಪಾದಕರನ್ನು ಹುಟ್ಟುಹಾಕುತ್ತಿರುವುದು, ಕಾನೂನನ್ನೇ ಕೈಗೆ ತೆಗೆದುಕೊಂಡು ಪತ್ರಿಕಾ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ಬಲಿಕೊಡಲು ಹವಣಿಸುತ್ತಿರುವುದು ಇತ್ಯಾದಿ ಭೀಕರ ಸಮಸ್ಯೆಗಳಿರುವ ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾದ ಸಂವಾದಗಳಿಗಾಗಿ ಚಿಂತಿಸಬೇಕೇ ಹೊರತು ಹಣಕಾಸನ್ನು ಗಿಂಜುವ ತಂತ್ರಗಳಿಗಲ್ಲ.

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 6



ಅಕ್ಷರ ರೂಪ: ಅಕ್ಷತಾ ಕೆ.

ಕರಡಿ ಕ್ಯಾಂಪ್‌ನಿಂದ ಭಗವತಿಕೆರೆ ತನಕ...

ಭಗವತಿಕೆರೆಯಲ್ಲಿ ಜಮೀನು ಖರೀದಿ ಮಾಡಿದ ತರಲ್ಲಿ ಮೈಸೂರಿಗೊಮ್ಮೆ ಹೋದವನು ತೇಜಸ್ವಿ ಗೆ ಹೋಗಿ ಪುಟ್ಟಪ್ಪನವರನ್ನು, ಹೇಮಾವತಕ್ಕ ನ್ನು ಕಂಡು ಈ ವಿಷಯ ತಿಳಿಸಿದಾಗ ಹೇಮಾವತಕ್ಕ ರು "ಭಗವತಿಕೆರೆ ಹೆಸರು ಆ ಊರಿಗೆ ಮೊದಲೇ ಮ್ಮೋ ಅಥವಾ ನೀವೇ ಇಟ್ಟ ಹೆಸರಾ?" ಎಂದು ನ್ದರು. ಇಲ್ಲ ಅದು ಮೊದಲಿನಿಂದ ಇದ್ದ ಹೆಸರು ನು ಬದಲಾವಣೆ ಮಾಡಿಲ್ಲ ಎಂದು ತಿಳಿಸಿದ್ದೆ. ವನಗೆ ಈ ಬಗ್ಗೆ ಕುತೂಹಲ ಹುಟ್ಟಿ ಇಲಾಖೆಗೆ ಗಿ ಪಾಣಿ ಪಟ್ಟಿಗಳನ್ನೆಲ್ಲ ತೆಗೆಸಿ ನೋಡಿದಾಗ ನಾರು ವರ್ಷದ ಹಿಂದೆ ಈ ಊರಿಗೆ ಭಗವತಿಕೆರೆ ಹೆಸರಿತ್ತು ಎಂಬ ದಾಖಲೆ ಸಿಕ್ಕಿತು. ನಮ್ಮ ೀನಿನ ಪಕ್ಕದಲ್ಲೆ ನನ್ನ ದೊಡ್ಡಪ್ಪನ ಮಗ ಹಾಲಪ್ಪಣ್ಣ ೀನು ಕೊಂಡಿದ್ದರು. ಅವರು ಜಮೀನಿಗೆ ಬಾಗಲೆಲ್ಲ ಅವರ ಕಾರಿಗೆ ಪ್ರತಿಬಾರಿಯು ಎರಡು ರು ಕರಡಿಗಳು ಅಡ್ಡ ಹಾಕ್ತಿದ್ದವು. ಅದಕ್ಕೆ ಅವರು ಶೆಯಾಗಿ ಭಗವತಿಕೆರೆಯನ್ನು ಕರಡಿ ಕ್ಯಾಂಪ್ ಮ ಕರೆದಿದ್ದರು. ನಂತರದಲ್ಲಿ ಜನರ ಬಾಯಲ್ಲಿ



ಊರಿನ ಹೆಸರು ಕರಡಿ ಕ್ಯಾಂಪ್ ಎಂದೇ ಪ್ರಚಾರ ಯಿತು. ಆದರೆ ಈ ನಲವತ್ತು ವರ್ಷಗಳಲ್ಲಿ ಗಳಷ್ಟೆ ಅಲ್ಲ ಕರಡಿಕ್ಯಾಂಪ್ ಕೂಡಾ ಅಳಿದುಹೋಗಿ ವತಿಕೆರೆ ಹೆಸರೇ ಉಳಿದುಕೊಂಡಿದೆ. ಕರಡಿ ಕ್ಯಾಂಪ್ ಭಗವತಿಕೆರೆ ಕ್ಯಾಂಪ್ ಆಗುವವರೆಗಿನ ಹಂತದ ವಣಿಗೆಗಳ ಪ್ರತ್ಯಕ್ಷದರ್ಶಿಯು, ಪಾಲುದಾರನು ಆಗಿರುವುದರಿಂದ ಅದನ್ನು ನನಗಿಲ್ಲಿ ದಾಖಲಿಸ ನಿಸಿದೆ.

ಭಗವತಿಕೆರೆಯಲ್ಲಿ ಕಾಯಂ ನೆಲೆಯಾದ ಒಂದೆರಡು ದ ನಂತರ ಗದ್ದೆಯಲ್ಲಿ ಕಬ್ಬು ಹಾಕಿದ್ವಿ. ಭದ್ರಾ ಲ್ ನೀರು ಹೇರಳವಾಗಿ ಸಿಗುತ್ತಿದ್ದರಿಂದ ಒಳ್ಳೆ ಯೂ ಬಂತು. ಆದರೆ ಕಟಾವಿನ ಸಮಯದಲ್ಲಿ ಗಳ ಸಮಸ್ಯೆ ತಲೆದೋರಿತು. ಊರಲ್ಲಂತೂ ಬೇರೆ ಮ ಮನೆಯು ಇರ್ಲಿಲ್ವಲ್ಲ, ಅದಕ್ಕೆ ಬೇರೆ ಊರಿನಿಂದ ಕಟಾವು ಮಾಡಲು ಜನರನ್ನು ಕರೆಸಬೇಕಾಯಿತು. ಂದಿಚಟ್ನಳ್ಳಿಯಿಂದ ಪುಟ್ಟಪ್ಪ ಜೋಗಿ, ದೊಡ್ಡನರಸಪ್ಪ ತ್ತು ಮೇಷ್ಟ್ರು ಮಲ್ಲೇಶಪ್ಪ ತುಕ್ಕಪ್ಪ ಮತ್ತು ದೇವರ ಪ್ಪ ಎನ್ನುವವರ ಹಂದಿ ಜೋಗಿಯರ ಜಾತಿಗೆ ದ ಹಾಗೂ ಲಕ್ಕಿಬಾಯಿ ಎಂಬ ಒಂದು ಲಂಬಾಣಿ ಟುಂಬ ಕಬ್ಬು ಕಟಾವಿಗಾಗಿ ನಮ್ಮೂರಿಗೆ ಬಂತು. ಲತಃ ಅಲೆಮಾರಿ ಕುಟುಂಬಗಳಾದ್ದರಿಂದ ಎಲ್ಲೂ ಯಂ ಆಗಿ ನೆಲೆಸದ ಇವರು ಕಬ್ಬು ಕಟಾವು ಗಿವವರೆಗೆ ನೆಲೆಸಲು ಅನುಕೂಲವಾಗುವಂತೆ ತ್ಕಾಲಿಕವಾಗಿ ನಮ್ಮ ಗದ್ದೆಗೆ ಸ್ವಲ್ಪ ದೂರದಲ್ಲಿ ತ್ತೂತ್ತಿಗೆ ಕಬ್ಬಿನ ಸೋಗೆ ಹೊದೆಸಿದ ಗುಡಿಸಲನ್ನು ಕೊಂಡು ಇದ್ದರು.


ಒಂದು ದಿನ ಮಟಮಟ ಮಧ್ಯಾಹ್ನ ಎಲ್ಲರೂ ಕಡಿಯೋದರಲ್ಲಿ ನಿರತರಾಗಿದ್ದಾಗ ಇದ್ದಕ್ಕಿದ್ದಂತೆ ಡಿಸಲು ಕಟ್ಟಿಕೊಂಡಿದ್ರಲ್ಲ ಅಲ್ಲಿ ದಟ್ಟವಾದ ಹೊಗೆ ತ್ತಿ ಇರೋದು ಕಣ್ಣಿಗೆ ಬಿತ್ತು, ಜೊತೆಗೆ ಮಕ್ಕಳ ಗಾಟ ಆಕ್ರಂದನ ಕೇಳಿಸ್ತು. ಎಲ್ಲರು ಓಡಿಹೋಗಿ ೀಡಿದ್ರೆ, ಇವರೆಲ್ಲ ಕೆಲಸಕ್ಕೆ ಬಂದಿರೋ ಸಂದರ್ಭದಲ್ಲಿ ಕ್ಕಳು ಮನೆ ಮುಂದೆ ಆಟ ಆಡ್ತಾ ಇರ್‍ತಿದ್ದು. ತ್ತು ಅವುಗಳ ಕೈಗೆ ಬೆಂಕಿಕಡ್ಡಿ ಹೆಂಗೆ ಸಿಗ್ತೋ ತ್ತಿಲ್ಲ ಬೆಂಕಿ ಹೊತ್ತಿಕೊಂಡು ಕಬ್ಬಿನ ಸೋಗೆಯ ದ್ದರಿಂದ ಮನೆಗಳಿಗೂ ಬೆಂಕಿ ಆವರಿಸಿದೆ. ಬೆಂಕಿ ಮಕ್ಕಳು ಭಯದಿಂದ ರಕ್ಷಣೆಗಾಗಿ ಗುಡಿಸಿಲಿನೊಳಗೆ ಹೋಗಿವೆ. ತಗ್ಗು ಮಾಡಿನ ಮನೆಗಳಾದ್ದರಿಂದ ಬೆಂಕಿ ಮನೆಯ ಒಳಗೂ ಹಬ್ಬಲು ತಡವಾಗಿಲ್ಲ. ಗ್ರಹಚಾರಕ್ಕೆ ಆ ದಿನವೇ ಚಾನಲ್ ನೀರನ್ನು ಸಹ ನಿಲ್ಲಿಸಿದ್ರು. ಬೆಂಕಿಯ ಜ್ವಾಲೆಯಲ್ಲಿ ಸಿಕ್ಕಿಕೊಂಡ ಮಕ್ಕಳನ್ನು ಹೇಗೋ ಮಾಡಿ ಹೊರಗೆ ಎಳೆದುಕೊಂಡು ಬಂದು ರಕ್ಷಿಸಿದೆವು. ಆದರೆ ಒಂದು ಚಿಕ್ಕ ಮಗುವನ್ನು ಮಾತ್ರ ರಕ್ಷಿಸಲಾಗಲೇ ಇಲ್ಲ. ಆ ಮಗುವಿನ ಅಪ್ಪ ಅಮ್ಮ ಅದರ ಕೂಗು ಕೇಳಿ ಗುಡಿಸಲ ಒಳಗೆ ನುಗ್ಗಿದವರು ಬೆಂಕಿಯ ಆರ್ಭಟಕ್ಕೆ ತತ್ತರಿಸಿ ಮಗುವನ್ನು ರಕ್ಷಿಸಲಾರದೇ ಏನೂ ಮಾಡಲಾಗದ ಸಂಕಟದಿಂದ ಹೊರಗೆ ಓಡಿಬಂದರು.

ಸುಮಾರು ಹೊತ್ತಿನ ಮೇಲೆ ಅಂತೂ ನಮ್ಮ ಹಲವು ಪ್ರಯತ್ನಗಳಿಂದ ಜೊತೆಗೆ ಎಲ್ಲ ಗುಡಿಸಲುಗಳು ಸುಟ್ಟು ಬೂದಿಯಾಗಿ ಇನ್ನೇನೂ ಹೊತ್ತಿ ಉರಿಯುವಂತದ್ದು ಇಲ್ಲದಿದ್ದಾಗ ಬೆಂಕಿ ತನ್ನಷ್ಟಕ್ಕೆ ತಾನೇ ತಣ್ಣಗಾಗುತ್ತ ಬಂತು. ಆಗ ನೋಡಿದರೆ ಬೆಂಕಿಗೆ ಆಹುತಿಯಾದ ಮಗುವಿನ ದೇಹ ಕರಟ ಉಂಡೆಯಾಗಿತ್ತು. ಆ ಮಗುವಿನ ದೇಹದ ಪಕ್ಕದಲ್ಲೆ ಒಂದು ಮೆಲ್ಟ್ ಆದ ಕನ್ನಡಿಯ ಚೂರು ಬಿದ್ದಿತ್ತು. ಅದೇನು ಎಂದರೆ ಆ ಮನೆಯ ಗೋಡೆಯ ಮೇಲೆ ಒಂದು ದೊಡ್ಡ ದೇವರ ಫೋಟೋ ತೂಗು ಹಾಕಿದ್ದರು. ಆ ಫೋಟೊದ ಚೌಕಟ್ಟು, ಕಾಗದ ಎಲ್ಲ ಬೆಂಕಿಗೆ ಸಿಕ್ಕಿ ಭಸ್ಮವಾಗಿದ್ದರೆ ಅದರ ಹೊದಿಕೆಯ ಕನ್ನಡಿ ಮೆಲ್ಟ್ ಆಗಿ ಶೆಲ್ ಆಕಾರಕ್ಕೆ ತಿರುಗಿತ್ತು. ಆವತ್ತು ಆ ಮಗುವಿಗಾದ ಸ್ಥಿತಿ, ಅದರ ಅಪ್ಪ ಅಮ್ಮನ ಗೋಳು ಎಲ್ಲ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ನಾನು ಅಂದೇ ಭದ್ರಾವತಿ ಪೊಲೀಸ್ ಸ್ಟೇಷನ್‌ಗೆ ಹೋಗಿ ವಿಷಯ ತಿಳಿಸಿದೆ. ಎಲ್ಲ ಗುಡಿಸಲುಗಳು ಸುಟ್ಟು ಹೋಗಿದ್ದರ ಜೊತೆಗೆ ಮಗುವು ಬೆಂಕಿಗೆ ಆಹುತಿಯಾಗಿದ್ದರಿಂದ ಸಮಸ್ಯೆಯ ತೀವ್ರತೆ ಹೆಚ್ಚಿತ್ತು. ಮರುದಿನವೇ ತಹಶೀಲ್ದಾರ್ ಬಂದು ಮಹಜರ್ ಮಾಡಿದ್ರು. ಆಗ ಭದ್ರಾವತಿಯಲ್ಲಿ ಬಿಡಿಓ ಆಗಿ ಪ್ರಕಾಶ್ ಇದ್ರು. ಅವರಿದ್ದೊರು ಬಂದು ನೋಡಿ ಒತ್ತೊತ್ತಿಗೆ ಜೋಪಡಿ ಕಟ್ಕಂಡು ಬಿಡ್ತಾರೆ, ಮಾಡನ್ನು ಎತ್ತರ ಕಟ್ಕೊಳಲ್ಲ ಅದಕ್ಕೆ ಇಂಥ ಸಮಸ್ಯೆಗಳು ಬರತ್ತೆ ಇವರಿಗೆಲ್ಲ ಜನತಾ ಮನೆಗಳನ್ನ ಕಟ್ಟಿಸಿ ಕೊಡೋಣ ಅಂತ ಭರವಸೆ ಕೊಟ್ಟರು. ಆಗಿನ ಕಾಂಗ್ರೆಸ್ ಸರ್ಕಾರ ಬಹಳಷ್ಟು ಜನತಾ ಮನೆಗಳನ್ನು ಕಟ್ಟಿಸಿ ಕೊಡೋದಕ್ಕೆ ಆದ್ಯತೆ ಕೊಟ್ಟಿತ್ತು, ಆದರೆ ಊರಿಗೆ ಒಂದು ಅಥವಾ ಎರಡ್ಮೂರು ಮನೆಗಳನ್ನಷ್ಟೆ ಕಟ್ಟಿಸಿ ಕೊಡೋದಕ್ಕೆ ಅವಕಾಶ ಇದ್ದಿದ್ದು, ಮನೆ ಕೊಡ್ತಾರೆ ಸರ್ಕಾರದೋರು ಅಂತ ತಿಳಿದಿದ್ದೆ ಇನ್ನೊಂದಿಷ್ಟು ಜನ ಇಲ್ಲೆ ನೆಲೆಸಲು ಮನಸ್ಸು ಮಾಡಿದರು. ಬಿಡಿಓ ಪ್ರಕಾಶ್ ಇದ್ದವರು ತಾವೇ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಒಂದು ವರ್ಷದಲ್ಲೆ ಒಟ್ಟು 18 ಜನತಾ ಮನೆಗಳನ್ನು ಮಂಜೂರು ಮಾಡಿಸಿ ಕಟ್ಟಿಸಿ ಕೊಟ್ಟರು.

ಅವರವರ ಮನೆ ಕಟ್ಟುವ ಜವಾಬ್ದಾರಿ ಆ ಮನೆಯಲ್ಲಿ ವಾಸಿಸುವವರೇ ವಹಿಸಿಕೊಂಡರು. ಆನವೇರಿ ಕೆನರಾ ಬ್ಯಾಂಕ್‌ನಲ್ಲಿ ರಾಧಕ್ಕ ಸುಬ್ಬಯ್ಯ, ಚಂದ್ರಾನಾಯ್ಕ, ಪಾರ್ವತಮ್ಮ, ರತ್ನಪ್ಪ ಮತ್ತು ನನ್ನ ಹೆಸರಿನಲ್ಲಿ ಜಾಯಿಂಟ್ ಅಕೌಂಟ್ ತೆರೆದು ಪ್ರತಿ ಹಂತದ ಕಾಮಗಾರಿ ಮುಗಿದ ಹಾಗೂ ಹಂತಹಂತವಾಗಿ ಬಿಲ್ ಹಣ ಮನೆ ಮಾಲೀಕರ ಕೈಸೇರುವಂತೆ ವ್ಯವಸ್ಥೆ ಮಾಡಲಾಯಿತು. ಇದರಲ್ಲಿ ಎಲ್ಲೂ ಗೋಲ್‌ಮಾಲ್ ಆಗಲು, ಅವರಿವರಿಗೆ ಪರ್ಸಂಟೇಜ್ ಸೇರಲು ಅವಕಾಶ ನೀಡದಂತೆ ಪ್ರಕಾಶ್ ಬಹಳ ಪ್ರಾಮಾಣಿಕತೆಯಿಂದ ನಡೆದುಕೊಂಡರು. ಕಾಮಗಾರಿಯಲ್ಲಿ ಪರಸ್ಪರರು ನೆರವಾಗಿದ್ದರಿಂದ ಕೂಲಿ ಹಣ ಉಳಿತಾಯವಾಯಿತು. ಮನೆ ನಿರ್ಮಾಣವಾದ ಮೇಲೆ ಸ್ವಲ್ಪ ಹಣ ಉಳಿದಿತ್ತು, ಯಾರ ಮನೆಯಲ್ಲೂ ರುಬ್ಬುವ ಕಲ್ಲು ಇರಲಿಲ್ಲ, ಬೀದಿ ಮೇಲೆ ಬಿದ್ದಿರುವ ಕಲ್ಲಲ್ಲೇ ಕಾರ ಮಸಾಲೆ ಎಲ್ಲ ರುಬ್ಬುತಿದ್ದರು. ಕಾರ ಅರೆಯುವ ಕಲ್ಲಿನ ಮೇಲೆ ನಾಯಿಗಳು ಕಾಲೆತ್ತಿ ಉಚ್ಚೆ ಹೊಯ್ಯೋದು ಮಾಡುತಿದ್ದವು. ಈಗ ಹಣ ಉಳಿತಲ್ಲ ಅದರಲ್ಲಿ ಪ್ರತಿ ಮನೆಗೂ ಒಂದು ಕಾರ ಕಡೆಯುವ ಕಲ್ಲು ಹಾಗೂ ಬೀಸುವ ಕಲ್ಲನ್ನು ಕೊಡಿಸಲಾಯಿತು. ಮನೆ ಕಟ್ಟುವ ಜಾಗದ್ದು ಅಷ್ಟೆ ಬಯಲು ಸೀಮೆಯ ರೀತಿ ಒತ್ತೊತ್ತಿಗೆ ಮನೆ ಕಟ್ಟಿಸಿ ಕೊಡದೇ ಪ್ರತಿಯೊಬ್ಬರಿಗೂ ಮನೆ ಕಟ್ಟಿಸಿಕೊಳ್ಳಲು ದೊಡ್ಡ ದೊಡ್ಡ 40x60 ಸೈಟ್ ಅಳೆದುಕೊಟ್ಟ. ಸರ್ಕಾರದ ಜಾಗವಾದ್ದರಿಂದ ಹಾಗೆ ಮಾಡಲು ಅವಕಾಶವಿತ್ತು. ಜೊತೆಗೆ ಒಂದೊಂದು ಜಾತಿಯವರಿಗೆ ಒಂದೊಂದು ಕಡೆ ಕೇರಿ, ಮನೆ ಹೀಗೆಲ್ಲ ಮಾಡಲಿಲ್ಲ, ಲಾಟರಿ ಎತ್ತಿದ್ವಿ ಯಾರಿಗೆ ಎಲ್ಲಿ ಬರುತ್ತೋ ಅಲ್ಲಿ ಸೈಟ್ ಕೊಟ್ವಿ. ಎಲ್ಲ ಜಾತಿ ಧರ್ಮದವರು ಒಂದೇ ಕಡೆ ಬದುಕೋದಕ್ಕೆ ಆದಾಗಲೇ ನಿಜವಾದ ಸೌಹಾರ್ದ ಸಾಧ್ಯವಾಗೋದು ಇಲ್ಲ ಅಂದ್ರೆ ನಾವು ಮೇಲು ಅವರು ಕೀಳು ಹೀಗೆಲ್ಲ ಶುರುವಾಗುತ್ತೆ. ಹೀಗೆ ತಲೆ ಎತ್ತಿದ ಬಡಾವಣೆಗೆ ಭಗವತಿಕೆರೆ ಹಳ್ಳಿ ಎಂದು ಹೆಸರಿಟ್ವಿ. ಒಂದು ಎಂಟ್ಹತ್ತು ವರ್ಷದ ನಂತರ ಸೋಷಿಯಲಿಸ್ಟ್ ಗೆಳೆಯ ವಕೀಲರಾಗಿದ್ದ ಶಂಕರನಾರಾಯಣ ಭಟ್ಟರು ನೋಟರಿಯಾಗಿದ್ದ ಸಂದರ್ಭದಲ್ಲಿ ಅವರಿಗ್ಹೇಳಿ ಇವರುಗಳ ಮನೆಗಳಿದ್ದ ಜಾಗ ಹಾಗೂ ಜಮೀನನ್ನು ಇವರುಗಳ ಹೆಸರಿಗೆ ರಿಜಿಸ್ಟ್ರೇಷನ್ ಮಾಡಿಸಿದ್ವಿ.

ಭಗವತಿಕೆರೆ ಹಳ್ಳಿಯಲ್ಲಿ ವಾಸಿಸುತಿದ್ದ ಎಲ್ಲರು ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದು ಅಕ್ಷರಸ್ಥರು ಯಾರು ಇರಲಿಲ್ಲ, ಸಿಕ್ಕಿದ ದುಡ್ಡೆಲ್ಲ ಸಾರಾಯಿಗಾಕೋರು, ಜೊತೆಗೆ ದೇವರಿಗೆ ಬಿಡೋದು ಮುಂತಾದ ಮೂಢ ನಂಬಿಕೆಗಳು ಇದ್ದವು. ಬೆಳೆ ಬೆಳೀರಿ ಅಂತ ಜಮೀನು ಕೊಟ್ಟರೆ ಆ ಜಮೀನಲ್ಲೆ ಬೆಳೆಯ ಮಧ್ಯೆ ಗಾಂಜಾ ಬೆಳೆದು ಅದೇನೋ ಚಿಲುಮೆ ಅಂತ ಮಾಡಿಕೊಂಡು ಸೇದೋದಕ್ಕೆ ಶುರು ಮಾಡಿದ್ರು. ವಿದ್ಯಾವಂತರಾದರೆ ಇವರಿಗೆ ತಿಳುವಳಿಕೆ ಬರತ್ತೆ ಅಂತ ಭಾವಿಸಿ ನಾನು ಶ್ರೀ ಒಂದು ಜನತಾ ಮನೆಯಲ್ಲಿ ರಾತ್ರಿ ಶಾಲೆ ಶುರು ಮಾಡಿದ್ವಿ. ಇನ್ನೂ ಊರಿಗೆ ಕರೆಂಟ್ ಬಂದಿರಲಿಲ್ಲವಾದ್ದರಿಂದ ದಿನಾ ರಾತ್ರಿ ಇಬ್ಬರು ಒಂದೊಂದು ಲಾಟೀನು ಹಿಡ್ಕಂಡು ಹೋಗಿ ಜನರನ್ನೆಲ್ಲ ಸೇರಿಸಿ ಓದುಬರಹ ಕಲಿಸ್ತಿದ್ವಿ. ಹೆಂಗಸರು ಓದು ಬರಹ ಕಲಿಯೋದಕ್ಕೆ ಹೆಚ್ಚಿನ ಆಸಕ್ತಿ ತೋರಿಸ್ತಿದ್ರು. ಅಷ್ಟೆ ಅಲ್ಲ, ತಮ್ಮ ದುಸ್ಥಿತಿಗೆ ಕಾರಣಗಳನ್ನು ಕಂಡುಕೊಳ್ಳತೊಡಗಿದರು. ಇದರ ಪ್ರತಿಫಲವಾಗಿ ತಮ್ಮ ಶೋಷಣೆಗೆ, ಬಡತನಕ್ಕೆ ಕಾರಣವಾದ ಸಾರಾಯಿ ವಿರುದ್ಧ ಅವರೆಲ್ಲ ಸಂಘಟಿತ ಹೋರಾಟಕ್ಕಿಳಿದರು. ಯಾವುದೇ ಊರಲ್ಲಿ ಹತ್ತು ಮನೆಗಳಾದರೆ ಸಾಕು ಅಲ್ಲಿ ಆಸ್ಪತ್ರೆ, ಶಾಲೆ ಯಾವುದೂ ಇರಲ್ಲ ಆದರೆ ಕಡ್ಡಾಯವಾಗಿ ಒಂದು ಸಾರಾಯಿ ಅಂಗಡಿ ತಲೆ ಎತ್ತಿಯೇ ಬಿಡತ್ತೆ. ಭಗವತಿಕೆರೆಯಲ್ಲಾಗಿದ್ದೂ ಅಷ್ಟೆ.



ಸಾರಾಯಿ ವಿರುದ್ಧ ಪ್ರತಿಭಟನೆ

ಜನತಾಮನೆಗಳ ಜೊತೆ ಒಂದು ಸಾರಾಯಿ ಅಂಗಡಿಯು ಹುಟ್ಟಿಕೊಂಡಿತು. ಹೆಚ್ಚಿನ ಗಂಡಸರು ಅದರ ದಾಸರಾದರು. ಹೆಂಗಸರು ಅದರ ವಿರುದ್ಧ ಹೋರಾಟ ಮಾಡೋದೇನು ಸುಲಭದ ಮಾತಾಗಿರಲಿಲ್ಲ, ಏಕೆಂದರೆ ಅವರು ಸಾರಾಯಿ ವಿರುದ್ಧ ಹೋರಾಟ ಮಾಡುವುದೆಂದರೆ ಅವರ ಗಂಡಂದಿರ ವಿರುದ್ಧವೇ ತಿರುಗಿ ನಿಲ್ಲುವುದಾಗಿತ್ತು, ಅವರ ಬದುಕನ್ನು ಮೂರಾಬಟ್ಟೆ ಮಾಡುತ್ತಿರುವ ಸಾರಾಯಿ ವಿರುದ್ಧ ಶ್ರೀದೇವಿ, ರಾಧಕ್ಕ ಇಬ್ಬರೂ ಸೇರಿ ಆ ಹೆಂಗಸರನ್ನೆಲ್ಲ ಸಂಘಟಿಸಿದರು. ಆ ಹೆಂಗಸರು ಸಹ ಹೆಚ್ಚಿನ ವಿದ್ಯೆ ಏನೂ ಇಲ್ಲದಿದ್ದರೂ ಈ ವಿಷಯದಲ್ಲಿ ಇವರ ಜೊತೆ ದೃಢವಾಗಿ ನಿಂತರು. ತಾವು ಮಾಡುತ್ತಿರುವ ಹೋರಾಟ ತಮ್ಮ ಸಂಸಾರದ ನೆಮ್ಮದಿಗೆ ಎಂಬ ಅರಿವು ಆ ಹೆಂಗಸರಲ್ಲಿತ್ತು, ಒಂದು ದಿನ ಊರಿನ ಎಲ್ಲ ಹೆಂಗಸರು ಸೇರಿ ಸಾರಾಯಿ ಅಂಗಡಿಗೆ ಮುತ್ತಿಗೆ ಹಾಕಿದರು. ಸಾರಾಯಿ ಅಂಗಡಿಯ ಕಂಟ್ರಾಕ್ಟರ್ ಸಾರಾಯಿ ಮಾರಾಟ ಮಾಡಲು ಒಬ್ಬ ಹುಡುಗನನ್ನು ನೇಮಿಸಿದ್ದ. ಆ ಹುಡುಗನ ತಲೆಮೇಲೆ ಸಾರಾಯಿ ಕ್ಯಾನನ್ನು ಹೊರಿಸಿ ಊರಿಡೀ ಪ್ರತಿಭಟನಾ ಮೆರವಣಿಗೆ ಮಾಡಿದರು. ಕೊನೆಗೆ ಗುಡ್ಡದ ಮಲ್ಲಾಪುರದ ಮಲ್ಲೇಶ್ವರ ದೇವಸ್ಥಾನಕ್ಕೆ ಹೋಗಿ ಸಾರಾಯಿ ತುಂಬಿದ ಕ್ಯಾನನ್ನು ಅರ್ಪಿಸಿ 'ಸ್ವಾಮಿ ನಮಗೆ ನೀನೇ ರಕ್ಷೆ, ಇನ್ನಾವತ್ತೂ ಸಾರಾಯಿ ಅನ್ನೋದು ನಮ್ಮೂರೊಳಗೆ ಬರದೇ ಇರೋ ಹಾಗೆ ನೋಡಿಕೋ' ಅಂತ ಬೇಡಿಕೊಂಡು ಮರಳಿ ಬಂದರು. ಈ ಹೋರಾಟ ನಡೆದಾಗ ಲಾಜವಂತಿ ಇನ್ನೂ ಬಹಳ ಚಿಕ್ಕವಳು. ಅವಳಮ್ಮನ ಜೊತೆ ಅವಳು ಹೋರಾಟಕ್ಕೆ ಹೋಗಿದ್ದಳು. ಅವಳ ಹಾಗೆ ರಾಧಕ್ಕನ ಮಗಳು ನಾಗಲಕ್ಷ್ಮಿ ಹಾಗೂ ಹಲವು ಹತ್ತು ಮಕ್ಕಳು ಅವರವರ ಅಮ್ಮಂದಿರ ಜೊತೆ ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಹಾಗೆ ಮುಚ್ಚಿದ ಸಾರಾಯಿ ಅಂಗಡಿ ಮತ್ತೆ ಒಂದೇ ಒಂದು ತಿಂಗಳಿಗೆ ಬಾಗಿಲು ತೆರೆಯಿತೆಂಬುದು ವಾಸ್ತವ. ಆದರೆ ಈ ಹೋರಾಟ ನಮ್ಮೂರಿನಲ್ಲಿ ಹಲವು ಬದಲಾವಣೆಗಳಿಗೆ ಕಾರಣವಾಯಿತು. ಶಾಲೆ ಪ್ರಾರಂಭಿಸಿದ್ವಿ. ಎಇಓ ಆಗಿ ಭದ್ರಾವತಿಯಲ್ಲಿ ರಾಮಕೃಷ್ಣ ಅಂತ ಇದ್ದರು. ಅವರ ನೆರವಿನಿಂದ ನಮ್ಮೂರಿಗೆ ಶಾಲೆ ಬಂತು. ಒಂದು ವಿವೇಕಾನಂದ ಜಯಂತಿಯ ದಿನ ಶಾಲೆ ಪ್ರಾರಂಭವಾಯಿತು. ಊರಿನವರೆಲ್ಲ ಸೇರಿ ಊರಿನ ಉಸ್ತುವಾರಿ ಸಮಿತಿ ಅಂತ ಮಾಡಿಕೊಂಡ್ವಿ. ದೊಡ್ಡನರಸಪ್ಪ ಅಂತ ಇದ್ದರು. ಅವರನ್ನು ದಾದ ಅಂತಿದ್ವಿ. ಅವರೇ ಈ ಸಮಿತಿಯ ಮುಖಂಡರು. ಊರಿನ ಸಮಸ್ಯೆಗಳನ್ನು ಪರಿಹರಿಸೋದು, ಊರಿಗೆ ಮತ್ತು ಇಲ್ಲಿನ ಜನಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡೋದು ಈ ಸಮಿತಿಯ ಕಾರ್ಯ. ಸಕ್ಕರೆ ಕಾರ್ಖಾನೆಯಲ್ಲಿ ನೀರಾವರಿ ಪ್ರದೇಶದಲ್ಲಿ ಕಬ್ಬು ಬೆಳೆ ಬೆಳೆಯೋದನ್ನು ಉತ್ತೇಜಿಸಲು ಆ ಭಾಗದಲ್ಲಿ ಸಾರಿಗೆ ಸಂಪರ್ಕ ಕಲ್ಪಿಸುವುದಕ್ಕಂತ ಸ್ವಲ್ಪ ಹಣ ಇರತ್ತಿತ್ತು. ನಮ್ಮೂರಿನಲ್ಲಿ ಈ ಹಣದಿಂದಲೇ ರಸ್ತೆ ಮಾಡಿಸಿದ್ವಿ. ಆಮೇಲೆ ಮಲ್ಲಿಕಾರ್ಜುನ್ ಅನ್ನೋ ಬಸ್ ಮಾಲೀಕರಿಗೆ ಹೇಳಿ ಈ ಭಾಗದಲ್ಲಿ ಒಂದು ಬಸ್ ಓಡಾಡೋದಕ್ಕೆ ವ್ಯವಸ್ಥೆ ಮಾಡಿಸಿದ್ವಿ. ಆವತ್ತಿಂದ ಇವತ್ತಿಗೂ ಮಲ್ಲಿಕಣ್ಣನ ವೀರಭದ್ರಸ್ವಾಮಿ ಬಸ್ ಒಂದೇ ದಿನಾ ಎರಡು ಬಾರಿ ನಮ್ಮೂರಿಗೆ ಬರೋದು. ಬೇರೆ ಯಾವ ಬಸ್ ವ್ಯವಸ್ಥೆ ಇಲ್ಲ. ಆದರೆ ಎಲ್ಲ ಊರುಗಳಂತೆ ಭಗವತಿಕೆರೆ ಸಹ ಈ ಅವಧಿಯಲ್ಲಿ ಹತ್ತು ಹಲವು ಬೆಳವಣಿಗೆಗೆ, ಬದಲಾವಣೆಗಳಿಗೆ ಒಳಗಾಗಿದೆ. ನಮ್ಮೂರಿನ ಮನೆಗಳಿಗೆ ಶೌಚಾಲಯ ಬಂದಿದ್ದಂತೂ ದೊಡ್ಡ ಕಥೆಯೇ. ಅದನ್ನು ಮುಂದೆ ಹೇಳುವೆ.

ಮುಂದುವರೆಯುವುದು

ಆನಾಡಿ ಜಗಳಾಡಕ್ಕೆ ಬೆಳಗಾವಿಗಂಟ ಹೋಗಬೇಕಾಗಿತ್ತ

ಬೆಳಗಾವಿ ಅಧಿವೇಶನದ ಗಲಾಟೆ ಕೇಳಿದ ಕಾಳಮಾವ ತುಸು ಯೋಚಿಸಿ.

"ಅಲ್ಲಿಗಂಟ ಹೋಗಿ ಆನಾದಿ ಜಗಳಾಡದಕಿಂತ ಇಲ್ಲೆ ಆದಿಕಂಡಿದ್ರಾಯ್ತಿರಲಿಲ್ವೆ?" ಎಂದ.

"ನೀನೇಳದು ನಿಜ ಕಣಮಾವ. ಕೋಟ್ಯಾಂತರುಪಾಯಿ ಕರ್ಚು ಮಾಡಿಕಂಡು ಬೆಳಗಾವಿಗಂಟ ಹೋಗಿ ಹರಿಯ ಮುರಿಯ ಜಗಳಾಡದಕಿಂತ ಇಲ್ಲೆ ಆದಿದ್ರಾಯ್ತಿತ್ತು. ಆ ಮರಾಠಿಗಳಿಗೂ ನಮಿಗೂ ಜಗಳನೇ ಆಯ್ತಿರಲಿಲ್ಲ" ಎಂದ ಉಗ್ರಿ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಆ ಮರಾಠಿಗಳಿಗೆ ಮಕ್ಕುಗಿಬೇಕು ಕಂಡ್ಯ" ಎಂದ ಸೀರ.

"ಉಗಿಯೊ, ಇಲ್ಲೆ ಅವುರಲ್ಲ ಕಿಷ್ಕೊಜಿ, ಸೀನೋಜಿ, ವೆಂಕೋಜಿ ಸಿಕ್ಕದ್ರೆ ಉಗ್ರಿ"

"ಥೂ ಇವುರಲ್ಲ ಕಂಡ್ಯ. ಮಾರಾಷ್ಟದ ಮರಾಟಿನನ ಮಕ್ಕಳಿಗೆ ಕಂಡ್ಯ ಮಕ್ಕುಗಿಬೇಕು ಅಂದಿದ್ದು."

"ಮಕ್ಕುಗಿಬೇಕು ಅಂತ ನೀನಂತಿ, ತಿಕ್ಕುಗಿಬೇಕು ಅಂತ ಠಾಕ್ರೆ ಅಂತನೆ. ಒಟ್ಟಿನಲ್ಲಿ ನಿಮ್ಮಂಥೋರಿಂದ ಆ ಮಾರಾಷ್ಟ್ರದ ಮಾನವಂತ್ರಿಗೂ ಕರ್ನಾಟಕದ ಗೌರವಸ್ಥರಿಗೂ ನೆಮ್ಮದಿನೆ ಇಲ್ಲಕಣ ಮಾವ."

"ಮಾರಾಷ್ಟದಲ್ಲಿ ಯಾವ ಮಾನವಂತರಿದ್ದರ್ಲ?"

"ಯಲ್ಲ ಠಾಕ್ರೆಯಂಗೆ ಅವುರೆ ಅನ್ನು. ಅಲ್ಲಾ ಒಂದು ಸತಿ ಬಂಬಾಯಿಗೋಗಿ ಬಂದಿದ್ದೆ ಇಡೀ ಮಾರಾಷ್ಟ್ರ ಗೊತ್ತು ಅನ್ನಂಗೆ ಮಾತಾಡ್ತಿಯಲ್ಲೊ ಮಾವ?"

"ಸೀರ ಮಾವ ಯಾವಾಗ ಬಂಬಾಯಿಗೋಗಿದ್ದಾ?" ಎಂದಳು ಜುಮ್ಮಿ.

"ಅವುನ ಮಗ ತಪ್ಪಿಸಿಗಂಡಿದ್ದಾಗ ಹೋಗಿದ್ದ ಕಣೇ. ಕುರ್ಲಾದಲ್ಲಿ ಜನತಾ ಹೋಟ್ಯಲ್ಲಿ ಲೋಟ ತ್ವಳಿಯಕ್ಕೆ ಅಂತ ಬುಟ್ಟು ಬಂದಿದ್ದ ಅವುನತ್ತಾಗ ಚಂಬೂರು ಕಡಿಗೋಗಿ ಯಾವುದೊ ಮಿಲಿಟ್ರಿ ಹೋಟ್ಯಲ್ಲಿ ಸೇರಿಕಂಡಿದ್ದ. ಅವುನ್ನ ಹುಡಕಕ್ಕೆ ಅಂತ ಹೋಗಿ ಇಡೀ ಬಂಬಾಯಿನೆ ತಿರುಗಿಬಂದ. ಅದ್ಕೆ ಬಂಬಾಯಿ ಅಂದ್ರು ಸಾಕು ನನಿಗ್ಯಲ್ಲ ಗೊತ್ತು ಅಂತನೆ."

"ಕಾಲಾದಿಂದ ಆವು ಮಾಡ್ತಯಿರೊ ದಾನ್ನಿ ನೋಡಿದ್ರೆ ಗೊತ್ತಾಗದಿಲವೇನ್ಲ? ಮಾರಾಟ ಬಡ್ಡೆತ್ತವು ಯಾವತ್ತು ನ್ಯಟ್ಟಗೆ ನ್ಯಡಕಂಡಿದ್ದವ್ರಾ?" ಎಂದ ಸೀರ.

"ಅವುಕು ಅಂಗಾಗ್ಯದೆ ಕಣೊ ಮಾವ. ಇಡೀ ಉತ್ತರ ಭಾರತದ ಜನ್ಯಲ್ಲ ಬಂದು ತುಂಬಿಕಂಡವುರೆ. ಅವುರ್ಕಲ್ಲ ಬರೀ ಹಿಂದಿ ಮಾತಾಡತರೇ ವರತೂ ಮರಾಟ ಮಾತಾಡದಿಲ್ಲ, ಅದ್ಕೆ ಠಾಕ್ರೆ ಅಂಥೋನು ಹುಲಿ ಯಾಸ ಹಾಯ್ಕಂಡು ಹೆದ್ರಿಸಿಗಂಡು ಕಾಲಾಮಾಡ್ತ ಅವುನೆ. ಇನ್ನೊಸಿದಿನೋದ್ರೆ ಬೆಂಗಳೂರಲ್ಲೂ ಯಾವನಾರ ಠಾಕ್ರೆ ಅಂಥೋನು ಹುಟ್ಟಿಗಂಡು ಅವುಂದು ಒಂದು ರಾಜಕಾರಣ ಸುರುಮಾಡ್ತನೆ."

"ಅಂಗಂತಿಯಾ?"

"ಊ ಮತ್ತೆ? ಈಗಾಗ್ಲೆ ನಾರಾಯಣಗೌಡ ಆಡದ ನೋಡಿದ್ರೆ ಅಂಗೆ ಕಾಣತದೆ. ಅವುನು ಬೆಂಗಳೂರಲ್ಲಿ ಮಾಡಿದ ಸಬೆ ಅದ್ದೂರಿ ನೋಡಿದ್ರೆ ಇನ್ನೇಟು ದುಡ್ಡು ಮಡಗ್ಯವುನಪ್ಪ ಅಂತ ಬಿಜೆಪಿಗಳೆ ಬಾಯಿಮಾಲೆ ಕೈ ಮಡಗಿದರಂತೆ."

"ಅಂಥೋರು ಇರಬೇಕು ಸುಮ್ಮನಿರ್ಲ. ಇಲ್ದೆಯಿದ್ರೆ ಕರನಾಟಗವ ಹರಕಂಡು ತಿಂದುಬುಡ್ತರೆ" ಎಂದ ಸೀರ.

"ಈಗಾಗಲೇ ಹರಕಂಡು ತಿಂತಾ ಅವುರೆ ಕಣಮಾವ. ಆ ಮರಾಠಿಗಳು ಬೆಳಗಾವಿ ನಮಿಗೆ ಸೇರಬೇಕು ಅಂತ ಕುಣಿತಯಿದ್ರೆ, ಜನಾರ್ದನ ರೆಡ್ಡಿ ಕರ್ನಾಟಕದ ಗಡಿನೆ ಆಗದು ಆಂದ್ರದ ಕಡಿಕೆ ಯಸಿತಯಿದ್ಯನಂತೆ."

"ಏನು ಮಾಡ್ತ ಅವುನ್ನ ಎಡೂರಪ್ಪ?" ಎಂದ ಕಾಳಮಾವ.

"ಕೇಂದ್ರಕ್ಕೆ ಕಾಗದ ಬರದಿದ್ದಿನಿ ಅಂತ ಅವುನೆ. ಆ ಕಾಂಗ್ರೆಸ್‌ನವು ಈ ಬಿಜೆಪಿ ಸರ್ಕಾರದ ಕಾಗದವ ತಿರುಗ್ಯೂ ನೋಡದಿಲ್ಲ, ಎಡೂರಪ್ಪ ಅವುರ ಕಡಿಕೇ ಕೈತೋರಿಕಂಡು ಕಾಲ ಹಾಕ್ತನತ್ತಗೆ."

"ತಗಳಪ್ಪ, ಈಗ ಮುಖ್ಯಮಂತ್ರಿಗೆ ವತ್ತುವರಿಗೆ



ಅವುಕಾಸ ಕೊಟ್ಟಂಗಾಯ್ತು ಅಂಗರೆ?"

"ಅಂಗೆ ಆಯ್ತಪ್ಪ ಈಗ ನೋಡಿದ್ರೆ."

"ಈಗ ಜನಾರ್ದನ ರೆಡ್ಡಿ ವತುವರಿ ಮಾಡಿಕಂಡಿರೊ ಜಾಗಕ್ಕೆ ಕುಮಾರಸ್ವಾಮಿಗೆ ಇನ್ನೂರು ಕೋಟಿ ಕೊಡಕ್ಕೆ ಬಂದಿದ್ನಂತೆ ಕಂಡ್ಯ ಉಗ್ರೀ" ಎಂದ ಸೀರ.

"ನೂರೈವತ್ತು ಕೋಟಿ ಅಲವೇನೊ ಮಾ... ಎಂದಳು ಜುಮ್ಮಿ.

"ಆ ಮಾತುಕತೆಲಿ ನೀವೆ ಇದ್ದೊರಂಗೆ ಮಾತಾ... ಸುಮ್ಮನಿರೊ ಹೋಗ್ಲಿ" ಎಂದ ಉಗ್ರಿ.

"ಪೇಪ್ರಲ್ಲೆ ಕೊಟ್ಟವುರೆ ಕಂಡ್ಯ, ರೆಡ್ಡಿ ಕುಮಾರಸ್ವಾ... ಬಂದು ಇನ್ನೂರು ಕೋಟಿ ತಗಂಡು ಗಡಿ ವತ್ತು... ಸಯಿನು ಮಾಡು ಅಂತ ಅಂದನಂತೆ. ಇವುನು ಆಗ... ಅಂದನಂತೆ."

"ಅಂಗಲ್ಲ ಕಣೊ, ರೆಡ್ಡಿ ನೂರೈವತ್ತು ಕೋಟಿ ಕೊಡ್ತಿನಿ ಅಂದ. ಕುಮಾರಸ್ವಾಮಿ ಇನ್ನೂರು ಕೋಟಿ ಕೇಳಿದ. ಅಲ್ಲಿಗೆ ಯವಾರ ನಿಂತೋಗಿ ಇಬ್ಬರಿಗೂ ಜಗಳತ್ತಿಗತ್ತು."

"ತಗಳಪ್ಪ, ನಿನ್ನ ಬಾಯಿಲೆ ಬತ್ತಲ್ಲ ಹೇಳು."

"ನಿಮ್ಮ ಮಾತ ಆಡಿಕಂಡೆ ಕಣೊ. ಮುಂಡೆಮಕ್ಕಳು ಆಡ್ತಯಿರೊ ಯಾವ ಮಾತು ನಿಜ, ಯಾವ ಮಾತು ಸುಳ್ಳು ಅನ್ನದು ಇಡೀ ಕರ್ನಾಟಕಕ್ಕೆ ಅರ್ಥವಾಯ್ತಾಯಿಲ್ಲ, ಇಂಥ ಮಾತಿನಲ್ಲೇ ಇಡೀ ಬೆಳಗಾವಿ ವಿಧಾನಸಭೆ ಹಾಳುಮಾಡಿಕಂಡು ಬೆಂಗಳೂರಿಗೆ ಬತ್ತಾ... ಅವೆ" ಎಂದ ಉಗ್ರಿ.

"ಅಕ್ಕ ನಿನ್ನ ಮ್ಯಾಲೆ ಒಂದು ಕ... ಬರೆದಿದ್ದಿನಿ ಓದ್ಲೇನಕ್ಕ" ಎಂದುಕೊಂಡು ಪಾ... ಹಾಜರಾಗಿ ಸರಿಯಾಗಿ ನಿಲ್ಲ... ಯತ್ನಿಸತೊಡಗಿದ.

"ನನ್ನ ಮ್ಯಾಲ್ಯಾಕ್ಲ ಬರಿತಿ, ನಿನ್ನೆಡ್ತಿ ಮ್ಯಾಲೆ ಬರಿ..."

"ಅವುಳು ಖಾಸಗಿ ವ್ಯಕ್ತಿ ಕಣಕ್ಕ. ಆದ್ರೆ ನೀ... ಸಾರ್ವಜನಿಕ ಪ್ರತಿನಿಧಿ. ನಿನ್ನ ಮ್ಯಾಲೆ ಬರಿಬವ್ರು... ಅಧಿಕಬವುದು ಅದ್ಕೆ ಬರದೆ."


"ಅದೇನು ಈಗ ಬರದಿದ್ದಿಯಲ್ಲಾ?" ಎಂದ ಉ...

ಶಾಮಿಯಾನ ಹಾಕೋಕೂ ಭೂಮಿ ಪೂಜೆ!

ಶಿಲಾನ್ಯಾಸ ಮಾಡುವಾಗ ಸಂವಿಧಾನಾತ್ಮಕವಾಗಿ ರೂಪಿತಗೊಂಡ ಧರ್ಮ ನಿರಪೇಕ್ಷಿತ ಸರ್ಕಾರಗಳು ಪ್ರಸಿದ್ಧ ಜ್ಯೋತಿಷಿಗಳ ಆಣತಿಯಂತೆ ದಿನ, ಕಾಲ ನಿಗದಿಪಡಿಸು ವುದು ಲಾಗಾಯ್ತಿನಿಂದಲೂ ಬಂದಿರುವ ಪದ್ಧತಿ. ಅನೂಚಾನವಾಗಿ ನಡೆದ ಈ ಸಂಪ್ರದಾಯದ ರೀತಿಯಲ್ಲೇ ಸದರಿ ಸರ್ಕಾರವೂ ನಡೆದುಕೊಂಡಿದ್ದು ಆಶ್ಚರ್ಯವಲ್ಲ, ಸುವರ್ಣಸೌಧ ನಿರ್ಮಾಣದ ಪ್ರಾರಂಭೋತ್ಸವವೂ ಈ ಸತ್ ಸಂಪ್ರದಾಯದಂತೆಯೇ ನಡೆಯಬೇಕಾಗಿತ್ತು, ನಡೆಯುತ್ತಿತ್ತು ಕೂಡ. ಆದರೇನು ಮಾಡುತ್ತೀರಿ. ಆಸ್ಥಾನ ಜ್ಯೋತಿಷಿಗಳಂತೆಯೇ ಅಡುಗೆಮನೆ ಜ್ಯೋತಿಷಿಗಳು ಇರುತ್ತಾರೆಂಬುದು ಸರ್ವರಿಗೂ ವಿದಿತವಾದ ಸಂಗತಿ ಯಾಗಿದೆ. ಸನ್ಮಾನ್ಯ ಯಡ್ಯೂರಪ್ಪನವರಿಗೂ ಅಂತಹ ಜ್ಯೋತಿಷಿಗಳು ಇದ್ದರು. ಅವರ ನುಡಿವ ಭವಿಷ್ಯ ಯಾವಾಗಲೂ ಕಿವಿಗೆ ಇಂಪಾಗಿರುವುದು ಸಹಜ. ಅವರು ಏನು ನುಡಿದರು ಎಂದರೆ: ಪ್ರಸಿದ್ಧ ಜ್ಯೋತಿಷಿಗಳು ನಿಗದಿಪಡಿಸಿರುವ ವೇಳೆ ಅಮಂಗಳಕಾರಿಯಾಗಿದೆ. ಹಾಗೆ ಮಾಡಿದರೆ ಅನಾಹುತ ಸಂಭವಿಸುವುದು ಖಚಿತ! ಈ ಸಂಭವನೀಯ ಅಪಘಾತ ತಡೆಯಲು 'ಸುವರ್ಣ ಸೌಧ'ದ ಪ್ರಾರಂಭೋತ್ಸವವನ್ನು ಒಂದು ದಿವಸ ಮುಂಚೆಯೇ ಅಡುಗೆಮನೆ ಜ್ಯೋತಿಷಿ ನಿಗದಿ ಗೊಳಿಸಿದ ವೇಳೆಯಲ್ಲಿ ನೆರವೇರಿಸಿದರು. ಅನಿರೀಕ್ಷಿತವಾಗಿ ಹಾಗೆ ಮಾಡಬೇಕಾಗಿ ಬಂದು ದರಿಂದ ತಮ್ಮ ಆಪ್ತರನ್ನು ಹೊರತುಪಡಿಸಿ ಬೇರೆ ಯಾರಿಗೂ ಆಮಂತ್ರಣ ಪತ್ರಿಕೆ ನೀಡಲಾಗಿ ರಲಿಲ್ಲ!

ಇದುವರೆವಿಗೂ ಎಲ್ಲವೂ ಸುಗಮವಾಗಿ ನಡೆಯಿತು. ಆದರೆ ಯಡ್ಯೂರಪ್ಪನವರ ಈ ದಿಢೀರ್ ಶಿಲಾನ್ಯಾಸ ವಿಪಕ್ಷ ನಾಯಕರಿಗೆ ಮೂಢನಂಬಿಕೆಯ ಪರಮಾವಧಿಯಾಗಿ ಗೋಚರಿಸಿತು. ಶಾಸನ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಭಾಜಪ ಅಧ್ಯಕ್ಷ ಹಲ್ಕುಪಿಗೌಡರೇನಾದರೂ ಅಲ್ಲಿದಿದ್ದರೆ 'ದೇವರಲ್ಲಿ ವಿಶ್ವಾಸ ವಿಲ್ಲದವರು ಈ ದೇಶ ಬಿಟ್ಟುಹೋಗಿ' ಎನ್ನುತ್ತಿದ್ದರೇನೋ? ಅವರು ಅಲ್ಲಿರಲಿಲ್ಲ, ವೈದ್ಯಕೀಯ ಶಿಕ್ಷಣ ಸಚಿವರು ಅದನ್ನು ಕೈಗೆತ್ತಿಕೊಂಡರು. 'ಮಾನ್ಯ ಸದಸ್ಯರುಗಳು ಹೀಗೆ ದೋಷಾರೋಪ ಮಾಡುತ್ತಿರುವುದು ಅವರಿಗೆ ಮಾಹಿತಿ ಕೊರತೆ ಇರುವುದರ ದ್ಯೋತಕವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಪೂಜೆ ನೆರವೇರಿಸಿದ್ದು ಸುವರ್ಣಸೌಧ ನಿರ್ಮಾಣಕ್ಕಲ್ಲ, ಪರಂತು ನಾಳೆ ನಡೆಯಲಿರುವ ಶಿಲಾನ್ಯಾಸಕ್ಕೆ ಆಗಮಿಸುವ ಅತಿಥಿಗಳ ಅನುಕೂಲಕ್ಕಾಗಿ ಶಾಮಿಯಾನ ಹಾಕಬೇಕಾಗಿತ್ತು, ಅದಕ್ಕೆ ಭೂಮಿ ಪೂಜೆ ನೆರವೇರಿಸಿದರು' ಎಂದು ಅಮೋಘವಾಗಿ ಪ್ರತಿಪಾದಿಸಿದರು!

ವೈದ್ಯ ಸಚಿವರ ಪುಣ್ಯಕ್ಕೆ ಶಿಲಾನ್ಯಾಸಕ್ಕೆ ಕಾರ್ಯಕ್ರಮದ ಪೂರ್ವಭಾವಿಯಾಗಿ ಶಾಮಿಯಾನ ಹಾಕಬೇಕಾಗಿತ್ತಲ್ಲ ಅದಕ್ಕೆ ಭೂಮಿಪೂಜೆ ಮಾಡಿದರು ಎನ್ನುತ್ತೀರಿ; ಹೀಗೆ ಹಿಂದು ವರೆದರೆ ಶಾಮಿಯಾನ ಒಂದು ಬಿದ್ದಾಗಲೂ ಪೂಜೆ, ಹೊರಟಾಗಲೂ ಪೂಜೆ, ತಯಾರಾದಾಗಲೂ ಪೂಜೆ, ಪ್ರಾರಂಭಿಸಿದಾಗಲೂ ಪೂಜೆ, ಆಮೇಲೆ ಬಳಸಿದ ಕಟ್ಟಾವಸ್ತು ಕಡಿಸಿದ್ದು, ಬೆಳೆಸಿದ್ದು ಹೀಗೆ ಪೂಜೆ ಮಾಡ್ತಾ ಹೋಯ್ತೀರಾ ಅಂತ ಯಾರೂ ಮರುಪ್ರಶ್ನೆ ಕೇಳಿದ್ದು ತಿಳಿದುಬಂದಿಲ್ಲ, ಅವರ ಉತ್ತರವೇ ಸಮರ್ಪಕವಾಗಿತ್ತು ಎಂದು ಸುಮ್ಮನಾದರೋ ಅಥವಾ 'ಮೂರ್ಖರಿಗೆ ನೂಕಾಟ....' ನೆನಪಾಯಿತೋ ಗೊತ್ತಿಲ್ಲ.



ಇಂತಹ ಸುಳ್ಳುಗಳ ಸರದಾರರ ನೆನಪು ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಇರಬೇಕಾದರೆ ಯಾವ ವಿಧಾನ ಅನುಸರಿಸಬೇಕು ಅನ್ನುವ ತುಂಟ ಯೋಚನೆ ಬಂದಾಗ ನೆನಪಾದದ್ದು ಮಾಯಾವತಿ. ಈ ದಲಿತ್ ಕಿ ಬೇಟಿಯ ಹುಟ್ಟಿದ ಹಬ್ಬವನ್ನು ಅದ್ದೂರಿಯಾಗಿ ಆಚರಿಸಿಕೊಂಡು ಅದರ ನೆಪದಲ್ಲಿ ಸಾಮಾನ್ಯ ಜನರ ಕಾಣಿಕೆ ಅಂತ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹಿಸುತ್ತಾರೆ ಅನ್ನುವ ವರದಿ ಬಂದಿತ್ತು. ಆದರೆ ಆಕೆಯ ನಸೀಬು ಸರಿ ಇರಲಿಲ್ಲ, ಇಂಜಿನಿಯರೊಬ್ಬರಿಂದ ಐವತ್ತು ಲಕ್ಷ ರೂಪಾಯಿ ವಸೂಲಿ ಮಾಡಲು ಹೋಗಿ ನಿರಾಕರಿಸಿದಾಗ ಕೊಲೆ ಆದದ್ದು ರಣರಂಪ ಆಗಿಹೋಗಿತ್ತು. ಅನಿವಾರ್ಯವಾಗಿ ಈ ದಲಿತ್ ಕಿ ಬೇಟಿ ಸರಳವಾಗಿ ತನ್ನ ಜನ್ಮದಿನಾಚರಣೆ ಮಾಡಿಕೊಳ್ಳ ಬೇಕಾಯಿತು. ಸರಳ ಅಂದರೆ ಹನ್ನೆರಡು ಕೋಟಿಯಷ್ಟು ಸರಳ. ನಾಲ್ಕು ನೂರಮೂರ ವಿಧಾನಸಭಾ ಕ್ಷೇತ್ರಗಳಿಂದ ಒಂದೊಂದಕ್ಕೂ ಮೂರು ಲಕ್ಷ ರೂಪಾಯಿನಂತೆ ಸುಮಾರು ಹನ್ನೆರಡು ಕೋಟಿ ಹಣವನ್ನು ಪಕ್ಷದ ಕಾರ್ಯಕರ್ತರು ನೀಡಿದರಂತೆ. ಒಂದು ಸಾವಿರ ಕೋಟಿ ಎಲ್ಲಿ, ಜುಜುಬಿ ಹನ್ನೆರಡು ಕೋಟಿ ಎಲ್ಲಿ. ದಲಿತ್ ಕಿ ಬೇಟಿಗೆ ತೀರ ನಿರಾಸೆ ಆಗಿರಬೇಕು!

ಹನ್ನೆರಡು ಕೋಟಿ ಸರಳ ಜನ್ಮದಿನಾಚರಣೆ ಯನ್ನು ಬಹುಜನ ಸಮಾಜ ಪಕ್ಷ ಹೇಗೋ ಆಚರಿಸಿತು. ಆಯಿತು. ಈ ಪಕ್ಷದ ಆಜನ್ಮ ವೈರಿ ಸಮಾಜವಾದಿ ಪಕ್ಷ ಆಕೆಯ ಜನ್ಮದಿನ ಆಚರಿಸುವುದು ಎಂದರೇನು. ಆದರೂ ಆಚರಿ ಸಿತು! 'ಥೂ ಥೂ ದಿನ'ವಾಗಿ! 'ಧಿಕ್ಕಾರದ ದಿವಸ' ಆಗಿ!

ಆಯಿತಲ್ಲ. ಹಾಗಾದರೆ ಮುಲಾಯಂ ಸಿಂಗ್ ಯಾದವ್‌ರ ಹುಟ್ಟಿದ ದಿನವನ್ನು ಏನೆಂದು ನೆನೆಯಬೇಕು?

ಮಾಯಾವತಿಯೇ ಹೇಳಿದ್ದಾರೆ- 'ದಲ್ಲಾಳಿಗಳ ದಿನ!'

ಯಾಕೆ ಇದು? ಮುಲಾಯಂರ ಗೆಳೆಯರೆಲ್ಲ ದಲ್ಲಾಳಿಗಳು!

ಆಯಿತು. ಹಾಗಾದರೆ ಕಾಂಗ್ರೆಸ್ ನಾಯಕರ ಜನ್ಮದಿನ ಏನಾಗಬೇಕು?

'ಗುಲಾಮರ ದಿವಸ!'

ವಿದೇಶಿ ಮಹಿಳೆಯೊಬ್ಬಳು ಹೇಳಿದಂತೆ ಕೇಳು... ಬದ್ದಿಲ್ಲವೆ ಈ ಮಂದಿ?

ಇನ್ನೊಂದು ರಾಷ್ಟ್ರೀಯ ಪಕ್ಷ ಇದೆಯಲ್ಲ, ಅದೇನು... ಅಲ್ಲವೆ ಹಾಗಾದರೆ?

ಇದೆ. ಭಾಜಪ ನಾಯಕರ ಹುಟ್ಟಿದ ದಿನ 'ಧೋ... ದಾರಿ ದಿನ'

ಅಣಕ

ಎಚ್.ಎಲ್. ಕೇಶವಮೂರ್ತಿ

ಮಾಯಾವತಿಯವರೇನೋ ತಮ್ಮ ಅನುಭವ... ಆಧಾರದ ಮೇಲೆ ಈ ರೀತಿ ಪ್ರತಿಕ್ರಿಯಿಸಿರಬಹುದು... ಮತದಾರ ಮಹಾಪ್ರಭುವಿನ ಮಾತಿನಲ್ಲೇ ಹೇಳುವುದಾದರೆ... ಯಾವುದೇ ರಾಜಕೀಯ ಧುರೀಣರ ಹುಟ್ಟಿದ ದಿನವನ್ನು 'ವಂಚಕರ ದಿನ' ಅನ್ನಬಹುದಾ..... ಅಲ್ರೀ ದಿನಾ ಒಬ್ಬನ... ಒಬ್ಬನ ಹುಟ್ಟಿದ ದಿನ ಬಂದೇ ಬರ್ತದೆ. ದಿನಾ ವಂಚಕ... ದಿನ ಅಂತ ಆಚರಿಸೋಕೆ ಆಗುತ್ತಾ ಅಂದಿರಾ.... ಹಾ... ಯೋಚಿಸಿಯಾದರೂ ಬದಲಾವಣೆ ತರಬಹುದಾ ಅನ್ನೋ... ಒಳಾಸೆ ಕಣ್ರೀ ಅಷ್ಟೆ....

ಹೀಗೆ ಸಾರಾಸಗಟಾಗಿ ನಾಮಕರಣ ಮಾಡುವುದು... ಸರಿ ಇಲ್ಲ ಅನ್ನುವುದಾದರೆ ಯಡ್ಯೂರಪ್ಪನವರ ಜನ್ಮದಿನ... 'ಬುರುಡೆ ದಿನ' ಅನ್ನಿ; ರಾಮಚಂದ್ರೇಗೌಡರದ್ದನ್ನ 'ಸುಳ್ಳ... ದಿನ' ಅನ್ನಿ... ಹೀಗೇ....

ಬರೀ ರಾಜಕಾರಣಿಗಳದ್ದೇ ಗೋಳಾಯ್ತಲ್ಲ, ನಮ್ಮ... ಸಾಂಸ್ಕೃತಿಕ, ಸಾಹಿತ್ಯಿಕ ನಾಯಕರುಗಳೇ ಇಲ್ಲವೆ. ಅವ... ಜನ್ಮದಿನವನ್ನು ಗುರುತಿಸುವುದು ಹೇಗೆ ಅನ್ನುವ ಅನುಮಾನ... ಬರಬಹುದು. ಜ್ಞಾನಪೀಠ ಪ್ರಶಸ್ತಿ ವಿಜೇತ ಯು.ಆರ್. ಅನಂತಮೂರ್ತಿಯವರ ಜನ್ಮ ದಿನ.... 'ಮೂರ್ಖರ ದಿನ'... ಆಗಬಹುದು! ಯಾಕೆ ಅಂತ ಆಶ್ಚರ್ಯಪಡಬೇಡಿ. ಗ... ರೆಡ್ಡಿ ಬ್ರದರ್ಸ್ ಅವರನ್ನ 'ಮೂರ್ಖ ಸಾಹಿತಿ' ಅಂತ... ಬಿರುದು, ಬಾವಲಿ ಕೊಟ್ಟಿದ್ದಾರಲ್ಲ! ಅವರು ಜ್ಞಾನಪೀ...

ಗಿ ಸಾಯಿತ್ಯ ಸಮ್ಮೇಳನ ನ್ಯಡಿವಾಗ ಒಂಥರಾ ಸ್ಫೂರ್ತಿ ಬತ್ತದೆ
ಗ್ರಿ. ಅದ್ಕೆ ಚಿತ್ರದುರ್ಗದ ಸಾಹಿತ್ಯ ಸಮ್ಮೇಳನದ ಟೈಮಿಗೆ ಸರಿಯಾಗಿ
ಬಂದದೆ ಕಣೊ."

ಯಾಗಿ ಯಣ್ಣೆವಡದೇನೊ, ಅದ್ಕೆ ಬಂದದೆ."

ಒಂದು ವೀಕನೆಸ್ ಹೇಳದು ಮರತುಬುಟ್ಟೆ. ನನಿಗೆ ಯಾವಾಗ್ಲು
ತದಾಗ್ಲೆ ಕಣೊ ಸ್ಫೂರ್ತಿಬರದು. ಅದ್ಕೆ ಕೂಡ್ಯೆ ಕ್ಯರದು ಬುದ್ತಿನಿ.
ಫ್ರೆಂಡ್ಸ್ ಸಿಕ್ಕಿದ್ರೆ ಓತ್ತಿನಿ, ಅವುರು ಕೇಳದೆಯಿದ್ರೂ ಓತ್ತಿನಿ."

ಪ್ಪ, ಅದೇನು ಕ್ಯರದಿದ್ದಿ" ಎಂದು ಉಗ್ರಿ ನಕ್ಕ.

ನಮ್ಮಕ್ಕ ಜುಮ್ಮಕ್ಕ.
ದುರು ಅನಿತಕ್ಕ ಯಾವ ಲೆಕ್ಕ?
ಟಮ್ಮನ್ಯಾವ ಮೂಟ್ಯಮ್ಮ?
ಹರೆಯದೆದುರು
ಪ್ಲಾಜಮ್ಮನೂ ಖುಲ್ಲ
ಮದ್ದೂರು ಕಲ್ಪನ
ಮೊನ್ನೆಯ ವಿಧವೆ.
ತಲೆಗೂದಲು ನಮ್ಮೂರ
ಮೇಗಲ ಕಾರೆ ಮೆಳೆ.
ಯುದಿಕೆ ತುಟಿಯಂತೂ
ಕೋಳಿಯ ಗಂದೊಗಲು
ಕರೆಹಿಡಿದ ದಾಳಿಂಬೆ ಬೀಜ...."

ಲೆ ಸಾಕು. ದಾಳಿಂಬೆ ಬೀಜವಂತೆ ಹಲ್ಲು, ಹಂದಿರೊ ಚಂದಕೆ
ತೆ ಜರಿತು ಅಂತ ಪದಬರಕಂಡು ಬಂದವುನೆ" ಎಂದಳು ಜುಮ್ಮಿ.

ಅಲ್ಲ ಕಣಕ್ಕ, ಕವನ. ನಾನು ಕವಿಯಾಗಿಬುಟ್ಟದಿನಿ."

ಹಹಹ ಕವಿ ಇವುನು. ಕೋತಿ ಮುಂಡೆದೆ, ನ್ಯಟ್ಟಗೆ ಮಾತಾಡಕ್ಕೆ
ಕವಿಯಂತೆ ಕವಿ."

ಗೆ ಬೆಲೆಯಿಲ್ದೆಯಿರೊ ಜಾಗದಲ್ಲಿ ನಾನಿರದಿಲ್ಲ ಕಣಕ್ಕ."

ಗೋದಿಲ?"

ದುರ್ಗಕ್ಕೋಯ್ತಿನಿ."

ದ್ರೆ ಅಲ್ಲಿ ಬಿ.ಎಲ್. ವೇಣು ಅಂತ ಅವುನೆ, ಅವುನ್ನ ಕುಂದ್ರಿಸಿಗಂದು
ಪಾಟಸ್ನೆ" ಎಂದು ಉಗ್ರಿ ಕೂಗಿ ಹೇಳಿದ. ■

ಜೇತರು ಅಂತ ಹೇಳ್ತೀರಲ್ಲ, ಗಣೆಕಳ್ಳತನ ಮಾಡುವ ವಿಧಾನಗಳು
ಷಯದ ಕುರಿತು ಪ್ರಶಸ್ತಿ ಇದ್ದರೆ ಈ ಬ್ರದರ್ಸ್ ಮೀರ್ಲ್ಯೋರು ಯಾರ್ರಿ
ಅನಂತಮೂರ್ತಿ ಕಾಂಪೀಟ್ ಮಾಡಕ್ಕಾಗುತ್ತಾ!

ಹ ಗಣಿ ಬ್ರದರ್ಸ್‌ಗೆ ಸಭ್ಯತೆಯಿಂದ ವರ್ತಿಸಲು ಪಾಠ ಹೇಳಿ
ಕಾಗಿದೆ ಎಂದು ಯಾರೋ ಅಂದರಂತೆ. ಎಲ್ಲರನ್ನೂ ಹೋಗು ಬಾ
ಮಾತನಾಡಿಸಿಯೇ ಅವರಿಗೆ ಅಭ್ಯಾಸ. ವಿಧಾನಮಂಡಳ ಆದರೂ
ದರ ಹೊರಗೂ ಅಷ್ಟೆ. ಸ್ಥಳ ಮಹಾತ್ಮೆ ಅನ್ನುವುದು ಇಲ್ಲ, ಹಣ
ಯಲ್ಲಿ ನಂಬಿಕೆ. ಅದಕ್ಕೇ ವಿಧಾನಸಭೇಲೂ ನೀನು ತಾನು ಅಂತ
ದಲ್ಲೇ ಮಾತನಾಡುತ್ತಾರೆ. ಇದೇನು ಅನ್ ಪಾರ್ಲಿಮೆಂಟರಿವರ್ಡ್ಸ್.
ದ್ದರೆ ಕಡತಗಳಿಂದ ಕಿತ್ತಾಕಿ ಅನ್ನಬೇಕಿತ್ತು ಸ್ಪೀಕರು! 'ನಿನ್ನ ಹಣೆಬರ
ಅನ್ನೊ ತಾಕತ್ತು ಯಾವ ದೇವರಿಗೆ ತಾನೆ ಇದೇರಿ. ಅದು ರೆಡ್ಡಿ
ಇದೆ!

ದು ಇಂತಹವರ ಹುಟ್ಟಿದ ದಿನವನ್ನ 'ಮದರ ದಿನ' ಅನ್ನಬಹುದಾ...
ಲ್ಲಿಗೇ ಬಂತಲ್ಲಾ.

ಸರ್ಕಾರ ಮೂಢನಂಬಿಕೆಯ ಪ್ರತೀಕವಾಗಿದೆ ಅನ್ನೋ ವಿಷಯಕ್ಕೆ
ವಂತೆ. ಈ ಸಂಪ್ರದಾಯಾನ ಎಷ್ಟು ಷಸಂದಾಗಿ ಕೆಳಗಿನ ಅಧಿಕಾರಿಗಳು
ಸುತ್ತಿದ್ದಾರೆ ಅಂತ ನೋಡಿದರೆ ಮನಸ್ಸಿಗೆ ಮುದ ತರುತ್ತೆ.
ಸೇಟೆಯಲ್ಲಿ ನಡೆದ ಘಟನೆ ಇದಕ್ಕೆ ತಾಜಾ ಉದಾಹರಣೆ.

ಏನಾಗಿತ್ತಪ್ಪ ಅಂದರೆ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಸಾಹೇಬರು
ಪಂಚಾಯಿತಿ ಕಾರ್ಯದರ್ಶಿಗಳ ಸಭೆ ಕರೆದಿದ್ದರು. ತುಂಬಿದ ಸಭೆ
ಇದೆ. ಆಗ ಏನಾಯ್ತು ಅಂತೀರಿ. ಒಂದು ಕಾಗೆ ಸಭಾಂಗಣಕ್ಕೆ
ಒಂದೆರಡು ಸುತ್ತು ಸುತ್ತಿ ಹೊರಗೆಹೋಯಿತು. ತುಂಬಿದ ಸಭೆಗೆ
ಗ್ಗಿತು ಅಂದರೆ ಅಪಶಕುನ ಅಲ್ಲವಾ. ಸಭೆ ಕರೆದಿದ್ದವರು ಸಾಮಾನ್ಯರಲ್ಲ
ಬು ಪಡೆದಿರೋರು- ಡಾ. ವೆಂಕಟಸ್ವಾಮಿ ಅಂತ. ಓಹೋ ಏನೋ
ಬಲ ಕಾಯ್ದಿದೆ ಅನ್ನುಸ್ತು ಅವರಿಗೆ. ಇದಕ್ಕೆ ಪರಿಹಾರ ಆಗಲೇಬೇಕು
ಂದ ಹೋಮಹವನ ನಡೆಸಲು ತೀರ್ಮಾನಿಸಿದರು. ದಿನ ನಿಗದಿಪಡಿಸಿ
ನ ಅಪಶಕುನ ನಿವಾರಣೆಯಲ್ಲಿ ಮಗ್ನರಾದರು. ಯಾರೂ? ಅವರು
ಅವರ ಸಿಬ್ಬಂದಿ. ಕಚೇರಿಗೆ ಅನಧಿಕೃತ ರಜೆ ಗೋಚರಿಸಲಾಗಿತ್ತು.
ಅನ್ನಿ. ಎಲ್ಲಾ ದೇವರ ಸೇವೆಯಲ್ಲಿ ಮಗ್ನರಾಗಿರುವಾಗ ಜನರ ಸೇವೆ
ಪುರುಸೊತ್ತು ಎಲ್ಲಿ ಇರುತ್ತೆ. ಇದರ ಅರಿವಿಲ್ಲದೆ ದೂರದ
ಂದ ಬಂದ ಜನ ಹಿಡಿಶಾಪ ಹಾಕಿದರಂತೆ. ಅಲ್ಲ ಜನ ಶಾಪ
ನು ಅಪಶಕುನ ಪರಿಹಾರ ಆಯಿತಲ್ಲಾ!

ವೆಂಕಟಸ್ವಾಮಿ ವಿಷಯ ತಿಳಿದ ಸರ್ಕಾರ ಅವರಿಗೆ ಬಡ್ತಿ ನೀಡಲು
ಯುತ್ತಿದೆ ಎನ್ನುವುದು ಖಚಿತ ಆಗಿಲ್ಲ! ■

ರಕ್ತವಾಗದ ವೈನ್, ಮಾಂಸವಾಗದ ಬ್ರೆಡ್

ಮರೆಯುವ ಮುನ್ನ




■ಪಿ. ಲಂಕೇಶ್ -ಏಪ್ರಿಲ್ 14, 1991

ನನ್ನ ದಲಿತ ಮಿತ್ರರೊಬ್ಬರು ನಿನ್ನೆ ಬಂದಿದ್ದರು. ದಿನವಿಡೀ ಕೆಲಸ ಮಾಡಿ ಈ ನನ್ನ ಮಿತ್ರರೊಂದಿಗೆ ಮಾತಾಡುತ್ತ ಕೂರುವುದೆಂದರೆ ನನಗೆ ನಿತ್ಯದ ಸಂತೋಷ. ಅವರು ಹೇಳಿದರು: "ನಾನು ಒಂದು ವಿಚಿತ್ರ ಗಮನಿಸಿದ್ದೇನೆ."

"ಏನು ಹೇಳಿ ಸಾರ್" ಅಂದೆ, ಅವರು ಹೇಳುವುದು ಖಂಡಿತ ಎಂದು ಗೊತ್ತಿದ್ದೂ.


"ನಾನು ಅನೇಕ ಹರಿಜನರ ಮನೆಗಳಿಗೆ ಆಗಾಗ ಆಹ್ವಾನಿತನಾಗಿ ಊಟಕ್ಕೆ ಹೋಗ್ತಿರ್ತೇನೆ. ಅವರಲ್ಲಿ ಕೆಲವರು ಒಳ್ಳೆಯವರಿರ್ತಾರೆ, ಕೆಲವರು ಕೆಟ್ಟವರು, ಲಂಚಕೋರರು ಸಮಾಜದ್ರೋಹಿಗಳು ಇರ್ತಾರೆ. ವಿಚಿತ್ರವೇನು ಗೊತ್ತ ಸಾರ್. ಲಂಚಕೋರರ ಮನೆಯಲ್ಲಿ ತುಂಬ ಹುಷಾರಾಗಿರ್ತಾರೆ. ಹರಿಜನರ ವಿಚಾರ ಅನೇಕರಿಗೆ ಗೊತ್ತಿಲ್ಲ. ಹಳ್ಳಿಗಾಡಿನಲ್ಲಿ ಎಷ್ಟೇ ಬಡವರಾಗಿದ್ದೂ ಈ ದಲಿತರು ಮದ್ಯಪಾನವನ್ನು ತಮ್ಮ ಬದುಕಿನ ಭಾಗವನ್ನಾಗಿ ಮಾಡ್ಕೊಂಡಿರ್ತಾರೆ. ಆದರಿಂದ ಹಾಳಾದವರೂ ಇದ್ದಾರೆ, ಹಾಡಿ ನಲಿದಾಡಿದವರೂ ಇದ್ದಾರೆ. ಈ ಭ್ರಷ್ಟ ದಲಿತರ ಮನೆಗೆ ಹೋದಾಗ ಕುಡಿತವೇ ಇಲ್ಲ, ತಮಗೆ ಬರೋ ದುಡ್ಡು ಸಾಲದೆಂಬಂತೆ, ತಾವು ಪ್ರಾಮಾಣಿಕರಾದ್ರಿಂದ ತಾಪತ್ರಯ ಅನುಭವಿಸ್ತಿರುವಂತೆ ನಟಿಸ್ತಾರೆ. ಅಲ್ಲದೆ ಅವರ ಮನೇ ಹೆಂಗಸ್ರು "ಬಂದವರು ಕುಡಿದರೆ ಕುಡಿಸಿ. ನೀವು ಮಾತ್ರ ಮುಟ್ಟಬೇಡಿ-ಒಳಗಿರುವ ಗುಟ್ಟನ್ನೆಲ್ಲಾ ಕುಡಿದಿದ್ದಾಗ ಹೊರಗೆ ಹಾಕಿಬಿಡ್ತೀರಿ" ಎಂದು ಹೇಳಿರುತ್ತಾರೆಂದು ಕಾಣುತ್ತದೆ.



ಆದರೆ ಅನೇಕ ಪ್ರಾಮಾಣಿಕರಾದ ದಲಿತ ಅಧಿಕಾರಿಗಳು, ನೌಕರರು ಇದ್ದಾರೆ. ಅವರ ಮನೆಗೆ ಊಟಕ್ಕೆ ಹೋದಾಗ ಯಾವುದೇ ಅಳುಕು, ಪಾಪಪ್ರಜ್ಞೆ ಇಲ್ಲದೆ 'ಸ್ವಲ್ಪ ಕುಡಿದು ಊಟ ಮಾಡೋಣ ಸಾರ್' ಎಂದು ಮನೆಯ ಹೆಂಗಸರು, ಮಕ್ಕಳನ್ನೊಳಗೊಂಡು ಎಲ್ಲರೂ ಹಿತಮಿತವಾಗಿ ಕುಡಿದು ನಲೀತಾರೆ. ಅತಿಥಿ ಕಮ್ಮಿ ಕುಡಿದು, 'ಯಾಕೆ ಸಾರ್, ಇನ್ನೊಂದು ತಗೊಳ್ಳಿ' ಎಂದು ಪ್ರೀತಿಯಿಂದ ಒತ್ತಾಯ ಮಾಡ್ತಾರೆ!"

ಹೇಗಿದೆ ನಮ್ಮ ಜೀವನ ಕ್ರಮ? ಜೀಸಸ್ ಕ್ರೈಸ್ಟ್ ತನ್ನ ಅನುಯಾಯಿಗಳು ಆತ್ಮವಂಚನೆ ಮಾಡಿಕೊಳ್ಳದಿರಲೆಂದು ಅವರಿಗೆ ತನ್ನ ದೇಹದ ಮಾಂಸ, ರಕ್ತವೆಂದುಕೊಂಡು ಬ್ರೆಡ್, ವೈನ್ ತೆಗೆದುಕೊಳ್ಳಲು ಹೇಳಿದ. ಇಲ್ಲಿ ಏನೇನೂ ತಿನ್ನುವುದಿಲ್ಲ, ಕುಡಿಯುವುದಿಲ್ಲ ಎಂದು ಹೇಳುತ್ತಲೇ ಇಡೀ ದೇಶವನ್ನು ನುಂಗುವ ಜನರೇ ಇದ್ದಾರೆ!

ಬೌದ್ಧ ಧರ್ಮಕ್ಕೆ



ಮೇಲಿನ ದಲಿತ ಮಿತ್ರರು ಇನ್ನೊಂದು ವಿಷಯ ಹೇಳಿದರು. ಮೊನ್ನೆ ಬೀದರ್‌ನಲ್ಲಿ ಸುಮಾರು ಹತ್ತು ಸಾವಿರದಿಂದ ಹದಿನೈದು ಸಾವಿರ ಹರಿಜನರು ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ನಾನು ಅಚ್ಚರಿಯಿಂದ "ಅಷ್ಟೊಂದು ಜನರೆ?" ಅಂದೆ. "ಹೌದು, ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲ, ಹದಿನೈದು ಸಾವಿರ ಇದ್ದರೂ ಇರಬಹುದು" ಅಂದರು.

ಅಷ್ಟೇ ಅಲ್ಲ, ಲಕ್ಷಾಂತರ ಜನ ಬೌದ್ಧ ಧರ್ಮಕ್ಕೆ ಹೋಗುವ (ಅಥವಾ ಬರುವ) ಸಂಭವವಿದೆ. ಯಾಕೆಂದರೆ ಬಡವರಾಗಿದ್ದರೂ, ಸ್ಥಿತಿವಂತರಾಗಿದ್ದರೂ-ಹರಿಜನರ ನೋವು, ಅವಮಾನ ಭೀಕರ ರೀತಿಯಲ್ಲಿ ಮುಂದುವರಿದಿದೆ. ಒಬ್ಬ ನಾಯ್ಡು, ಬ್ರಾಹ್ಮಣ, ಲಿಂಗಾಯತ, ಉಪ್ಪಾರ ಹುಡುಗ ಅಥವಾ ಹುಡುಗಿಯನ್ನು ಮದುವೆಯಾದ ದಲಿತ ವ್ಯಕ್ತಿ ಹರಿಜನ ಎಂಬ ಕಾರಣಕ್ಕೇ ನೋವು ಅನುಭವಿಸಬೇಕಾಗಿದೆ. ಇದು ಹರಿಜನೇತರಿಗೆ ಅರ್ಥವಾಗುವುದಿಲ್ಲ. ಒಂದು ಬಾಡಿಗೆ ಮನೆಗಾಗಿ ಪ್ರಯತ್ನಿಸಿದಾಗ, ಒಂದು ಅಂಗಡಿ ಇಟ್ಟಾಗ, ಒಂದು ಹೋಟೆಲ್ ತೆರೆದಾಗ, ಒಂದು ನೌಕರಿಯಲ್ಲಿದ್ದಾಗ- ಇನ್ನೂ ಅನೇಕ ಬದುಕಿನ ದಾರಿಗಳಲ್ಲಿ ಇದು ಗೊತ್ತಾಗುತ್ತದೆ. ಗೌಡರು ಅಥವಾ ಲಿಂಗಾಯತರು ಎಂದು ಬಾಡಿಗೆ ಮನೆ ಕೊಟ್ಟವರು ದಲಿತ ಎಂದು ಗೊತ್ತಾದೊಡನೆ ವರಾತ ಶುರುಮಾಡುತ್ತಾರೆ. ಇದು ಕೇವಲ ಅನಾನುಕೂಲವಲ್ಲ, ಮನುಷ್ಯತ್ವಕ್ಕೆ, ಸ್ವಾಭಿಮಾನಕ್ಕೆ ಒಡ್ಡಿದ ಸವಾಲು.

ನಾನೆಂದೆ, "ಸರಿ, ಬೌದ್ಧ ಧರ್ಮಕ್ಕೆ ಸೇರಿದರೆ ಈ ನೋವು ಕಡಿಮೆಯಾಗುತ್ತೆ ಅನ್ನುತ್ತ?"

"ಬೌದ್ಧ ಧರ್ಮಕ್ಕೆ ಹೋದರೆ ಈಗಿನ ಮೀಸಲಾತಿ ಮುಂತಾದ ಸವಲತ್ತು ಮುಂದುವರಿಯುತ್ತವೆ- ಬೌದ್ಧರೆಂದರೆ ಅವಮಾನ ಮಾಡುವುದಿಲ್ಲ" ಅಂದರು.

ನಾನೆಂದೆ, "ಸ್ವಲ್ಪ ಯೋಚಿಸಿ ಮುಂದುವರಿಯಬೇಕು. ಡಾ. ಅಂಬೇಡ್ಕರ್ ಅವರು ಕೂಡ ಸ್ವಲ್ಪ ಆತುರದಿಂದ ಬೌದ್ಧರಾದರು ಅನ್ನಿಸುತ್ತೆ, ಯಾಕೆಂದರೆ ಭಾರತದಲ್ಲಿ ಬೌದ್ಧರು ಕಮ್ಮಿ. ಈಗ ಬೌದ್ಧರಾದ ಎಲ್ಲರನ್ನೂ ದಲಿತರೆಂದು ಪರಿಗಣಿಸಿ ಮುಂಚಿನ ವರ್ತನೆಯನ್ನೇ ಮುಂದುವರಿಸುವ ಅಪಾಯವಿದೆ. ಆದ್ದರಿಂದ ಕುಂಬಾರರು, ಉಪ್ಪಾರರು, ಲಿಂಗಾಯತರು, ಒಕ್ಕಲಿಗರು-ಯಾರೇ ಆದರೂ ಈ ಹೊಸ ಗುಂಪು ಹಳೆಯ ಗುಂಪಿನೊಂದಿಗೆ ಮಿಳಿತವಾಗುವುದು ಸುಲಭ. ಆದರೆ ದಲಿತರಿಗೆ ಬೇರೆ, ಮೇಲುವರ್ಗಗಳ ದಬ್ಬಾಳಿಕೆಯ ಬಗ್ಗೆ ಸಿಟ್ಟಿದೆ. ನನಗೆನ್ನಿಸುವಂತೆ, ಎಲ್ಲರೂ ಬೌದ್ಧರಾಗುವ ಸಾಮೂಹಿಕ ಚಳವಳಿಯಾದರೆ ಒಳ್ಳೆಯದು. ವಿಚಾರವಂತರಾದ ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು-ಎಲ್ಲರೂ.... ಆದರೆ ನನಗೆ ಈ ವಿಚಾರದಲ್ಲಿ ಪೂರ್ತಿ ಸ್ಪಷ್ಟತೆ ಇಲ್ಲ, ನಾವೇಕೆ ಇದನ್ನು ಪೂರ್ಣಪ್ರಮಾಣದಲ್ಲಿ ವಿಚಾರ ಸಂಕಿರಣದಲ್ಲಿ ಚರ್ಚಿಸಬಾರದು?" ಅಂದೆ. ■

ಶಾಪ ಹಾಕಿರಿ

ನಮ್ಮನ್ನು ಆಳುವ ಹಮ್ಮೀರರು
ರಕ್ತದ ಹನಿಗಳನ್ನು
ಮಂಜುಗಡ್ಡೆಯ ಚೂರುಗಳೆನ್ನುತ್ತಾರೆ!

ಭಜರಂಗಿಗಳಿಂದ ಹಲ್ಲೆಗೀಡಾಗಿ
ಚೆಲ್ಲಿದ ಕ್ರೈಸ್ತರ ನೆತ್ತರಿನ ಹನಿಗಳವು
ನೀರ್ಗಲ್ಲಿನ ತುಣುಕುಗಳು!
ಧರ್ಮದ ಕೋಟೆಗೆ ಕೊಳ್ಳಿಯಿಟ್ಟು
ಬೆಳಕಿನ ನಂದಾದೀಪಿಕ ಉರಿಯುತ್ತಿವೆ ಎನ್ನುತ್ತಾರೆ.

ಸಂತ ಮೇರಿಯ ಪ್ರತಿಮೆ
ಏಸು ಹೊತ್ತ ಶಿಲುಬೆಗಳನ್ನು ಪುಡಿಗುಟ್ಟುವಾಗ
ಹೊಮ್ಮುವ ಶಬ್ದವೇ
ಸಂಘಪರಿವಾರದ ಮುಕ್ತಮನಸ್ಸಿನ
ಕಿಲಕಿಲಿ ನಗು ಎಂದು ಬೀಗುತ್ತಾರೆ.

ಇವರು ಅಂತಿಂತವರಲ್ಲ
ಗುಡಿ ಚರ್ಚ್ ಮಸೀದಿಗಳು ಉರಿದು ಬೀಳುವ
ಬೆಂಕಿಯ ಬೆಳಕಿನಲ್ಲಿ
ತಮ್ಮ ಸಾಧನೆಗಳ ಪಟ್ಟಿ ಮಾಡುತ್ತಾರೆ!

ಶಾಂತಿ ಬೇಡಲು ಬಯಸಿ
ಆಲಯಕ್ಕೆ ಬಂದವರ ಮೇಲೆ



ಹಲ್ಲೆ ಮಾಡುವುದನ್ನೇ
ಶಾಂತಿಸ್ಥಾಪನೆ ಎನ್ನುತ್ತಾರೆ.

ಸಾವಿರಾರು ವರ್ಷಗಳಿಂದ
ಸನಾತನ ಧರ್ಮದ ಸಂಸ್ಥಾಪನೆಯ ಹೆಸರಿನಲ್ಲಿ
ಈ ನೆಲದ ಮೂಲನಿವಾಸಿಗಳನ್ನೇ
ಅಸ್ಪೃಶ್ಯರನ್ನಾಗಿ ಮಾಡಿ
ನಡೆಯುವ ದಾರಿ ನಿರಾಕರಿಸಿ


ಕುಡಿಯುವ ನೀರು ನಿರಾಕರಿಸಿ
ಪ್ರಾರ್ಥಿಸಲು ಆಲಯವ ನಿರಾಕರಿಸಿ
ಹಕ್ಕು ಕೇಳಲು ಬರುವವರನ್ನು
ಕೊಂದು ಸಾಯಿಸುವುದು ಕ್ರೂರತನವಲ್ಲವೆನ್ನುತ್ತಾರೆ.

ಅಸ್ಪೃಶ್ಯರು ದೇವರನ್ನು ಹುಡುಕಿ
ದೇವಾಲಯಗಳಿಗೆ ಹೋಗುವುದ
ಸಹಿಸಲಾರದೆ, ಶಾಂತಿಭಂಗವೆನ್ನುತ್ತಾರೆ.

ಇನ್ನು ಮೌನವೇಕೆ?
ಹೊಡೆದುರುಳಿಸಿ, ಛಿದ್ರಗೊಳಿಸಿರುವ
ಏಸುವಿನ ಕೈಗಳನ್ನೆತ್ತುಕೊಂಡು
ಮಣ್ಣಲ್ಲಿ ಬಸಾಡಿ ಹೋಗಿರುವ
ಮೇರಿಯನ್ನು ಹಿಡಿದುಕೊಂಡು
ಸುಟ್ಟ ಆಲಯದ ಹೊಗೆಯನ್ನು ನೋಡುತ್ತಾ
ಇನ್ನು ಮೌನವೇಕೆ?

ನಿಮ್ಮ ಬೆಂದ ಮನಸ್ಸಿನೊಳಗಿನ ಆರ್ದ್ರ
ಧ್ವನಿಗಳನ್ನು ಹೊರಹಾಕಿ
ಈ ಕೆಟ್ಟ ಆಡಳಿತ ನಾಶವಾಗಲೆಂದು
ಶಾಪ ಹಾಕಿ.

■ಎಸ್. ಶಿವಲಿಂಗಂ



ಪುಣ್ಯಯೋನಿ ಪೇಜಾವರರ ನೆಂಟಸ್ತಿಕೆ ಬೇಕೆ? ಗೀತೆ ಓದಿ

ಇತ್ತೀಚೆಗೆ ಗುಲ್ಬರ್ಗಾದಲ್ಲಿ ನಡೆದ ಗೀತಾ ಅಭಿಯಾನ ಸಮಾರಂಭದಲ್ಲಿ ನಮ್ಮ ಪೇಜಾವರರು ದಲಿತರನ್ನು ಶುದ್ಧಿಗೊಳಿಸಲು ಭಗವದ್ಗೀತಾ ಚಳವಳಿಯನ್ನು ಹಮ್ಮಿಕೊಳ್ಳಲಿದ್ದಾರೆ ಎಂಬ ಸುದ್ದಿ ಬಂದಿದೆ. ದಲಿತರ ಕೈಗೆ ಗೀತೆ ಕೊಟ್ಟು, ದಲಿತರ ಕೇರಿಗಳಿಗೆ ಮೈಕ್ ಮೂಲಕ ಗೀತೆಯನ್ನು ಬಿತ್ತರಿಸುವ ಮೂಲಕ ಈ 'ಪಾಪಯೋನಿ'*ಗಳನ್ನೆಲ್ಲ (ಮಾಂಹಿ ಪಾರ್ಥ ವ್ಯಪಾಶ್ರಿತ್ಯಯೇಪಿ ಸ್ಯಃ ಪಾಪಯೋನಯಃ ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂ ಗತಿಂ ಗೀತೆ 9 ನೇ ಅಧ್ಯಾಯ 32 ನೇ ಶ್ಲೋಕ= ನನ್ನ ಆಶ್ರಯದ ಕಾರಣಕ್ಕೆ "ಪಾಪಯೋನಿ"ಗಳಾದ ಸ್ತ್ರೀಯರು, ವೈಶ್ಯ-ಶೂದ್ರರೂ ಕೂಡ ಪರಮಪದವನ್ನುಪಡೆಯಬಲ್ಲರು)ಪುಣ್ಯಯೋನಿಗಳನ್ನಾಗಿ ಪರಿವರ್ತಿಸುತ್ತಾರಂತೆ, ವ್ಹಾ ವ್ಹಾ!

ಇದೇ ಗುಲ್ಬರ್ಗಾದಲ್ಲಿ ಕೆಲ ವರ್ಷಗಳಿಂದ 75 ಎಕ್ರೆ ಜಾಗದಲ್ಲಿ ಹಾಳಾದ ಆ ದಲಿತ ಖರ್ಗೆ ಸಖತ್ ಆತ ಬೌದ್ಧವಿಹಾರವನ್ನು ಸ್ಥಾಪಿಸಿ ಮೊನ್ನೆ ಅದನ್ನು ಸ್ವತಃ ರಾಷ್ಟ್ರಪತಿ ಹಾಗೂ ದಲೈಲಾಮಾರಂತವರಿಂದಲೇ ಉದ್ಘಾಟಿಸಿ ಮೆರೆದ ಮೇಲೆ ದಲಿತರೆಲ್ಲ ಆ ಹಾಳು ಬುದ್ಧನ ಕಡೆಗೆ ವಾಲಿ ಬಿಟ್ಟರೆ ಹೇಗೆ? ಎಂಬ ಕಾರಣಕ್ಕಾಗಿ ಪವಿತ್ರ (ಕೋರ್ಟಿನಲ್ಲಿ ಕೊಡುವಂತೆ) ಗೀತೆಯನ್ನು ದಲಿತರಿಗೆ ಹಂಚಿಯಾದರೂ ಅವರನ್ನು ಇಲ್ಲೇ ಉಳಿಸಿಕೊಳ್ಳೋಣ ಎಂಬುದು ಪೇಜಾವರ ಪ್ಲಾನ್ ಅಂತೆ. ಯಾಕೆಂದರೆ ವೈದಿಕ ಧರ್ಮಕ್ಕೆ ಸೆಡ್ಡುಹೊಡೆದು ರೆಬೆಲ್ ಆಗಿ ಹುಟ್ಟಿಮೆರೆದ ಈ ಬೌದ್ಧಧರ್ಮ ಅನ್ಯದೇಶದ ಇಸ್ಲಾಂ-ಕ್ರಿಶ್ಚಿಯಾನಿಟಿಗಿಂತಲೂ ಅಪಾಯಕಾರಿ ಅಂತೆ. ಅದಕ್ಕೆ ಅದನ್ನು ದೇಶದಿಂದಲೇ ನಮ್ಮ ಶಂಕ್ರಾಚಾರಿ ಓಡಿಸಿ ಬಿಟ್ರಲ್ಲ. ಹೀಗಾಗೇ ನಮ್ಮ ಜೂನಿಯರ್ ಶಂಕ್ರಾಚಾರಿ ಪೇಜಾವರರು "ದಲಿತರೇ, ಬೇಕಿದ್ರೆ ನೀವು ನಮ್ಮ ಆರ್ಯ ಸಮಾಜ ಸೇರಿ, ಆ ಬೌದ್ಧರ ಸಾವಾಸ ಮಾತ್ರ ಬೇಡ" ಅಂತ ಹೇಳಿದ್ದಲ್ವೇ?

ಅಷ್ಟಕ್ಕೂ ಈ ಹಾಳಾದ ದಲಿತರೆಲ್ಲ ಬೌದ್ಧರಾಗಿ ಬಿಟ್ರೆ ನಾಳೆ ಯಾರ ಹೆಸರಲ್ಲಿ ಪ್ರಚಾರ ಗಿಟ್ಟಿಸೋದು? ತಮ್ಮ ನಿಯಂತ್ರಣದ ಪೂರ್ಣಪ್ರಜ್ಞ ವಿದ್ಯಾಲಯದಲ್ಲಿ ನಾಡಿನ ಕಾನೂನಿನ ಗೌರವಕ್ಕಾಗಿಯಾದರೂ ಎಲ್ಲೂ ಹೆಸರಿಗಾದರೂ ದಲಿತರಿಗೆ ಸ್ಥಾನ ನೀಡದೇ ಇದ್ದರೂ, ನಾಡಿದ್ದು ಮಾತ್ರ ಇದೇ ದಲಿತರ-ದಲಿತೋದ್ಧಾರದ ಹೆಸರಿನಲ್ಲೇ ರಾಜ್ಯ ಬಜೆಟ್‌ನಿಂದ ನಮ್ಮ ಯಡ್ಯೂರಪ್ಪ ಮೂಲಕ 2 ಕೋಟಿ ಗಿಟ್ಟಿಸಿಕೊಳ್ಳುವ ಡೀಲ್ ಅಂತೂ ಯಶಸ್ವಿಯಾಗಿ ಮುಗಿದಿದೆ. (ಹಣ ಬರುವುದೊಂದು ಬಾಕಿ, ಪುಕ್ಕಟೆ ದುಡ್ಡು ನುಂಗಲೂ ದಲಿತರ ಹೆಸರೇ ಬೇಕು. ಇಂತಹ ದಲಿತರೆಲ್ಲ ನಾಳೆ ಸಾರಾಸಗಟಾಗಿ ಬೌದ್ಧ ಧರ್ಮಕ್ಕೆ ಗುಳೇ ಹೊರಟು ಇಲ್ಲವಾದರೆ ಯಾರು ಗತಿ? ಎಂಬುದೇ ಪೇಜಾವರರ ಚಿಂತೆಯಂತೆ. ಅದಕ್ಕೇ ಗೀತೆಯ ಮೊರೆ

(* ಯೋನಿ= ಹುಟ್ಟು ಎಂಬ ಅರ್ಥವಿದೆ. ಪೂರ್ವಜನ್ಮಗಳ ಪಾಪ ಕಾರ್ಯಗಳ ಕಾರಣಕ್ಕೆ ಸ್ತ್ರೀ, ವೈಶ್ಯ-ಶೂದ್ರರಂತ ನೀಚ ಜನ್ಮ ಬಂದಿದೆ ಎನ್ನುವುದೇ ಈ ಪಾಪಯೋನಿ ಪದದ ಅರ್ಥ.)

-ಶಶಿ ಪುತ್ತೂರು, ದಕ್ಷಿಣ ಕನ್ನಡ

ಉದಯವಾಣಿ ಅಲ್ಲ 'ಹಸಿಸುಳ್ಳು ವಾಣಿ'!

ಸಂಪಾದಕೀಯವಿಲ್ಲದ ಕರ್ನಾಟಕದ ಏಕೈಕ ಬೆಳಗಿನ ದೈನಿಕವಾದ 'ಉದಯವಾಣಿ' 'ಶಬರಿಮಲೆಯಲ್ಲಿ ಉಗ್ರರು' ಎಂಬ ಮುಖಪುಟದ ಸುದ್ದಿ ಪ್ರಕಟಿಸಿ ತನ್ನ ವಿಶ್ವಾಸಾರ್ಹತೆ ಕಳೆದುಕೊಂಡಿದ್ದು ನಿಜ. ಮೊದಲು ಈ ಪತ್ರಿಕೆ ಸ್ಥಳೀಯ ಸುದ್ದಿ ಸಹಿತ ಎಲ್ಲಾ ಸುದ್ದಿಗಳನ್ನು ಒಂದೆರಡು ದಿನ ತಡವಾಗಿ ಪ್ರಕಟಿಸಿ "ಹಳಸಲು ವಾಣಿ" ಆಗಿತ್ತು. ಈಗ 'ಶಬರಿಮಲೆ-ಉಗ್ರರು' ಸುದ್ದಿಯಿಂದಾಗಿ 'ಹಸಿ ಸುಳ್ಳು ವಾಣಿ' ಸಹ ಆಗಿದೆ.

ಹಿಂದೊಮ್ಮೆ ಇದೇ ಪತ್ರಿಕೆ 'ವಿಷ್ಣು ಸಹಸ್ರನಾಮ' ಪಠಣದಿಂದ ಕಡಲ್ಕೊರೆತ, ಸುನಾಮಿ ತಡೆಯಬಹುದೆಂದು ವೈಜ್ಞಾನಿಕವಾಗಿ ಸಾಬೀತಾಗಿದೆ ಎಂದು ಪ್ರಕಟಿಸಿತ್ತು. ನಂತರ ಭಾರತೀಯ ಮೂಲದ ವೆನೆಜುವೆಲಾದಲ್ಲಿರುವ ವಿಜ್ಞಾನಿಯೊಬ್ಬರು ಪೃಥ್ವಿಯು ಗುಂಡಗಾಗಿಲ್ಲ, ಅದು ಚಪ್ಪಟೆಯಾಗಿದೆ ಎಂದು ಸಿದ್ಧ ಮಾಡಿ ತೋರಿಸಿದ್ದಾರೆ ಎಂದು ಪ್ರಕಟಿಸಿತ್ತು. ಇನ್ನೊಮ್ಮೆ ಅಮೆರಿಕಾದವರು ಚಂದ್ರನ ಮೇಲೆ ಮಾನವನನ್ನು ಇಳಿಸಿಯೇ ಇಲ್ಲ, ಹಾಲಿವುಡ್‌ನಲ್ಲಿ ತಯಾರಿಸಿದ ಚಂದ್ರನ ಸೆಟ್ ತೋರಿಸಿ 'ನಾಸಾ' ಜಗತ್ತನ್ನೆಲ್ಲಾ ಮೋಸ ಮಾಡಿದೆಯೆಂಬ 'ತನಿಖಾ' ವರದಿ ಪ್ರಕಟಿಸಿತ್ತು. ಜಪಾನ್‌ನ ಬೋನ್ಸಾಯ್-ಕೃಷಿ ಕಲೆಯಿಂದ ಹಿಡಿದು, ಅಣುವಿಜ್ಞಾನದವರೆಗೆ ಎಲ್ಲವೂ ನಮ್ಮ ಹಿಂದಿನ ಭಾರತೀಯ ಋಷಿ-ಮುನಿಗಳು ಕಂಡುಹಿಡಿದಿದ್ದು, ಅದನ್ನು ಪಾಶ್ಚಾತ್ಯರು ನಮ್ಮಿಂದ ಕದ್ದಿದ್ದು ಎಂಬ ಘನ ಸಂಶೋಧನೆ ಈ ಪತ್ರಿಕೆಯದ್ದು. ದೇವರ ಪೂಜೆಯಿಂದ 'ಅದು ಸಾಧ್ಯ' ಭಜನೆಯಿಂದ 'ಇದು ಸಾಧ್ಯ' ಎಂದು ಕರಾವಳಿಯ ತುಂಬೆಲ್ಲಾ ತುಂಬಿರುವ ಕಾವಿಧಾರಿಗಳು, ಪುರೋಹಿತರು ಹೇಳಿದ ತಂಗಳನ್ನು ಅನುದಿನವೂ ಪ್ರಕಟಿಸಿ ಸಮಾಜವನ್ನು 15 ನೇ ಶತಮಾನಕ್ಕೆ ಹಿಂದೂಡುತ್ತಿರುವ 'ಉದಯವಾಣಿ' ಈಗ 'ಕಂದಾಚಾರ ವಾಣಿ' ಆಗಿದೆ. ಎಲ್ಲಾ ಕ್ರೀಡೆಗಳನ್ನು ಕಡೆಗಣಿಸಿ ಕೇವಲ ಕ್ರಿಕೆಟ್‌ನ ಸುದ್ದಿಗೆ ದಿನಾಲೂ ಎರಡು ಪುಟ ಮೀಸಲಿಡುವ ಅದು 'ಕ್ರಿಕೆಟ್ ವಾಣಿ' ಸಹಾ ಎನಿಸಿಕೊಂಡಿದೆ. ಬ್ಯಾಂಕ್ ರಾಷ್ಟ್ರೀಕರಣಕ್ಕೆ ಮುನ್ನ ತನ್ನದೇ ಗುಂಪಿನ ಬ್ಯಾಂಕಾಗಿದ್ದ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಯಾರು ಸೀನಿದರೂ ಅದನ್ನು ಸುದ್ದಿ ಮಾಡುವ ಈ ಪತ್ರಿಕೆಯನ್ನು 'ಸಿಂಡಿಕೇಟ್ ವಾಣಿ' ಎಂದು ಇತರ ಬ್ಯಾಂಕ್‌ನವರು ಕರೆಯುತ್ತಾರೆ. ಬೇರೆ ಬ್ಯಾಂಕ್‌ನವರ ಪ್ರೆಸ್-ರಿಲೀಸ್ ತಪ್ಪಿ ಪ್ರಕಟಿಸಿದರೂ ಅದರಲ್ಲಿ ಗ್ರಾಹಕರು ಬ್ಯಾಂಕನ್ನು ಹೊಗಳಿರುವ ಭಾಗವನ್ನು ಕಟ್ ಮಾಡಿ ಪ್ರಕಟಿಸಲು ಮರೆಯುವುದಿಲ್ಲ ಈ ಪತ್ರಿಕೆ.

ರಾಷ್ಟ್ರೀಯ ದುರಂತದ ನಡುವೆಯೂ ಪವಾಡ ಹುಡುಕುವ ಕೆಲಸ ಮಾಡುತ್ತದೆ ಈ ಪತ್ರಿಕೆ. ಮುಂಬೈಯಲ್ಲಿ ತಾಜ್ ಹೋಟೆಲಿಗೆ ಉಗ್ರರ ದಾಳಿಯ ಮರುದಿನ ಈ ಪತ್ರಿಕೆ ಪ್ರಕಟಿಸಿತ್ತು-ಹನುಮಾನ್ ಚಾಲಿಸಾ ಪಠಿಸಿದ್ದರಿಂದ ಒಬ್ಬನು ಉಗ್ರರ ಕೈಯಿಂದ ಬದುಕಿ ಬಂದಿದ್ದಾನೆ-ಎಂದು. ಆದರೆ ಜನರ ನ್ಯಾಚುರಲ್ ರಿಫ್ಲೆಕ್ಸ್ ಪ್ರಕಾರ ಅಂತಹ ಕಠಿಣ ಸಮಯದಲ್ಲಿ ಬದುಕುಳಿದವರು ಮಾತ್ರವಲ್ಲ, ಉಗ್ರರ ಗುಂಡಿನಿಂದ ಸತ್ತವರೂ ತಮ್ಮ ತಮ್ಮ ದೇವರ ನಾಮ ಪಠಿಸುತ್ತಲೇ ಸತ್ತಿದ್ದು, ಅದನ್ನು ಹೇಳಲು ಅವರು ಜೀವಂತವಿಲ್ಲ, ಎಂಬ ಕಾಮನ್‌ಸೆನ್ಸ್ ಉದಯವಾಣಿ ತೋರಿಸಲಿಲ್ಲ. ಒಟ್ಟಾರೆ ಈ ಪತ್ರಿಕೆ ತನ್ನ ಘನಸ್ತಿಕೆ ಕಳೆದುಕೊಂಡಿದೆ.

-ಪಿ.ಎಸ್. ಶೆಟ್ಟಿ, ಮಂಗಳೂರು



ವಿಕೃತ ಕಾಮಿಗಳಿಂದ ಧರ್ಮ ರಕ್ಷಣೆ?

ತನ್ನ ಹೆಸರನ್ನು ಬರೆಯಲೂ ಧೈರ್ಯವಿಲ್ಲದ ಆದರೆ ಹಿಂದೂ ಧರ್ಮ ರಕ್ಷಣೆಯ ಉನ್ಮಾದವನ್ನು ತಲೆಗೆ ಏರಿಸಿಕೊಂಡಿರುವ ವಿಕೃತ ಕಾಮಿಯೊಬ್ಬ ಇತ್ತೀಚೆಗೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ರಾಜ್ಯ ಕಾರ್ಯದರ್ಶಿ ಕೆ.ಎಲ್.ಅಶೋಕ್ ಹೆಸರಿಗೆ ಒಂದು ಪತ್ರ ಬರೆದಿದ್ದಾನೆ. ಪತ್ರ ಆರಂಭಿಸುವ ಮುನ್ನ 'ಇಂದ' ಎನ್ನುವಲ್ಲಿ "ಒಬ್ಬ ಭಾರತೀಯ ಹಾಗೂ ನಿನ್ನ ಹೆಂಡತಿಯ ಮಿಂಡ" ಎಂದು ತನ್ನನ್ನು ಗುರುತಿಸಿಕೊಂಡಿದ್ದಾನೆ. ಪತ್ರದಲ್ಲಿ "ಅಶೋಕ್ ಹಿಂದೂವಿಗೆ ಹುಟ್ಟಿಲ್ಲ ಕ್ರಿಶ್ಚಿಯನ್ ಅಥವಾ ಸಾಬರಿಗೆ ಹುಟ್ಟಿದ್ದಾನೆ. ನಿನ್ನ ತಾಯಿ ದೊಡ್ಡ ಸೂ-. ತಂದೆ ತ-ಹಿ-ಕ" ಎಂದೆಲ್ಲ ತನ್ನ ಮನಸ್ಸಿನಲ್ಲಿರುವ ಹೊಲಸನ್ನು ವಾಂತಿ ಮಾಡಿಕೊಂಡಿದ್ದಾನೆ. ಇಷ್ಟು ಸಾಲದೆಂಬಂತೆ "ಗೌರಿ ಲಂಕೇಶ್ ಹೆಣ್ಣು ಶಿಖಂಡಿ" ಎಂದು ಬರೆದು ಅದರೊಂದಿಗೆ ಗೌರಿ ಎಂಬ ಹೆಣ್ಣಿನ ನಗ್ನಚಿತ್ರವನ್ನೂ ಬಿಡಿಸಿದ್ದಾನೆ. "ಹಿಂದೂ ಧರ್ಮವನ್ನು ಕೆಣಕಿದರೆ ಏನಾಗುತ್ತದೆ ಎಂದು ಇನ್ನು ಕೆಲವೇ ದಿನಗಳಲ್ಲಿ ತೋರಿಸುತ್ತೇವೆ. ದತ್ತಪೀಠ ಎಂದೆಂದೂ ನಮ್ಮದೇ" ಎಂದೆಲ್ಲ ಗೂಂಡಾಗಿರಿ ಮೆರೆದಿದ್ದಾನೆ.

ಇಂಥ ಮನಸ್ಥಿತಿ ಹೊಂದಿರುವವರ ಧರ್ಮದಲ್ಲಿ ಹೆಣ್ಣುಗಳು ಮರ್ಯಾದೆಯಿಂದ ಬದುಕಲು ಸಾಧ್ಯವೇ? ತಾನು ಬೇರೆಯವರ ಹೆಂಡತಿಗೆ ಮಿಂಡ ಎಂದು ತನ್ನನ್ನು ತಾನೇ ಗುರುತಿಸಿಕೊಂಡಿರುವ ಇವನ ಸಂಸ್ಕೃತಿಯಾದರೂ ಎಂಥದ್ದು? ಇಂಥವರಿಂದ ಮಹಿಳೆಯರ, ಧರ್ಮದ ಮತ್ತು ದೇಶ ರಕ್ಷಣೆ ಸಾಧ್ಯವೇ. ಈತ ಮಹಿಳೆಯರ ಬಗ್ಗೆ ಕೀಳು ಭಾವನೆ ಹೊಂದಿದ್ದ ಮನುವಿನ ವಾರಸುದಾರ. ಅಂಥವರಿಂದ ಮಹಿಳೆಯರ ಬಗ್ಗೆ ಇಂತಹ ಭಾವನೆ ಬಿಟ್ಟು ಗೌರವ ಇರಲು ಸಾಧ್ಯವೇ?

ಈ ಮನಸ್ಥಿತಿಯವರೇ ಒರಿಸ್ಸಾದಲ್ಲಿ ಆದಿವಾಸಿ ಕೂಲಿ ಕಾರ್ಮಿಕ ಮಹಿಳೆಯರನ್ನು ಬೆತ್ತಲೆಗೊಳಿಸಿದ್ದು, ಗುಜರಾತಿನಲ್ಲಿ ಗರ್ಭಿಣಿಯ ಹೊಟ್ಟೆ ಸೀಳಿದ್ದು, ದೇಶದ ಹಲವಾರು ಕಡೆ ದಲಿತ ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದ್ದು ಕ್ರಿಶ್ಚಿಯನ್ ನನ್ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದು, ದೇಶದಲ್ಲಿ ಇಂದಿಗೂ ನಡೆಯುತ್ತಿರುವ ದೇವದಾಸಿ ಪದ್ಧತಿ, ಮಹಿಳೆಯರ ಬೆತ್ತಲೆ ಸೇವೆಗಳು ಇಂಥ ಹಿಂದೂ ಧರ್ಮದ ಪಟ್ಟಭದ್ರ ಕಾಮುಕ ಶಕ್ತಿಗಳ ಉತ್ಪನ್ನಗಳೇ ಆಗಿವೆ. ಇವನ್ನೆಲ್ಲಾ ನೋಡಿದರೆ ಇವರು ರಕ್ಷಿಸುವ ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮಾತ್ರವಲ್ಲ ಆದಿವಾಸಿಗಳಿಗೆ, ದಲಿತರಿಗೆ, ಮಹಿಳೆಯರಿಗೆ ಸ್ಥಾನವಿಲ್ಲ.


ಇವರ ಮಹಿಳಾ ವಿರೋಧಿ ಮನಸ್ಸಿಗೆ ಒರಿಸ್ಸಾದಲ್ಲಿ ಮಹಿಳೆಯರನ್ನು ಬೆತ್ತಲೆಗೊಳಿಸುವುದು ಎಷ್ಟು ಸುಲಭವೋ ಹಾಗೆಯೇ ಇವರ ಸಿದ್ಧಾಂತವನ್ನು, ದಬ್ಬಾಳಿಕೆಯನ್ನು ಒಪ್ಪದ, ಸಾಮರಸ್ಯ ಬಯಸುವ ಹಿಂದೂ ಧರ್ಮದ ಮಹಿಳೆಯರನ್ನು ಅದೇ ರೀತಿ ನಡೆಸಿಕೊಳ್ಳುವುದು ಅಷ್ಟೇ ಸುಲಭ.

ಚುನಾವಣೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಕ್ರಾಂತಿ ಹಬ್ಬವನ್ನೇ ನೆಪ ಮಾಡಿಕೊಂಡು ಮಹಿಳೆಯರಿಗೆ ಸೀರೆ, ಹರಿಶಿನ, ಕುಂಕುಮ ಹಂಚುವ ಇವರಿಗೆ ಬದುಕನ್ನೇ ಕಳೆದುಕೊಂಡ ಲಕ್ಷಾಂತರ ಹೆಣ್ಣುಗಳು ವೇಶ್ಯೆಯರಾಗಿಯೋ, ಇನ್ನಾರದೋ ಜೀತಗಳಾಗಿಯೋ, ರಾಜಕಾರಣಿಗಳ ಮತ್ತು ಶ್ರೀಮಂತರ ಮುಂಡಾಟಿಕೆಗೋ ಬಲಿಯಾಗುವುದು ಗೊತ್ತಿಲ್ಲವೆಂದಲ್ಲ, ಗೊತ್ತಿದೆ ಮತ್ತು ಅದಕೆಲ್ಲ ಅವರ ಸಮ್ಮತಿಯೂ ಇದೆ. ಯಾಕೆಂದರೆ ಇವರೆ ಅಲ್ಲವೆ, ಸಂಸ್ಕೃತಿ ಎಂದು ಬೊಬ್ಬಿಡುತ್ತಾ ಸಾಮಾಜಿಕ ಕಟ್ಟಳೆಗಳನ್ನು ಹೇರಿ ಮಹಿಳೆಯರನ್ನು ಆರ್ಥಿಕವಾಗಿ, ರಾಜಕೀಯವಾಗಿ ಹಿಂದಿಟ್ಟಿರುವುದು. ಎಲ್ಲಾ ಧರ್ಮಗಳಲ್ಲೂ ಮಹಿಳಾ ವಿರೋಧಿ ನೀತಿಗಳಿದ್ದರೂ ಸಂಘಪರಿವಾರದ ಮನುವಾದಿಗಳು ಹೇರುವ ಧರ್ಮದಲ್ಲಿ ಮಹಿಳೆಯರಿಗೆ ಎಂತಹ ಸ್ಥಾನವಿದೆ ಎಂದು ಅವರ ಕೊಳಕು ಮನಸ್ಸನ್ನು ಹೊಂದಿರುವ ಈ ಪತ್ರವನ್ನು ಬರೆದಿರುವವನು ಪ್ರತಿನಿಧಿಸುತ್ತಾನೆ.

- ಮಂಜುಳ,
ಶಿವಮೊಗ್ಗ

ಪತ್ರಕರ್ತನಿಗೆ ಕೈಕೋಳ ತೊಡಿಸಿದವರಿಗೆ ಹೇಳಿ ಧಿಕ್ಕಾರ

ರಾಜ್ಯದ ಹಿರಿಯ ಪತ್ರಕರ್ತ, 'ಕರಾವಳಿ ಅಲೆ' ಪತ್ರಿಕಾ ಬಳಗದ ಮುಖ್ಯಸ್ಥರಾದ ಬಿ.ವಿ.ಸೀತಾರಾಮ್ ಅವರಿಗೆ ಪೊಲೀಸರು ಕೈಕೋಳ ತೊಡಿಸಿ ಮೆರವಣಿಗೆ ಮಾಡಿ, ಪತ್ರಕರ್ತರ ಸಮುದಾಯಕ್ಕೆ ಮುಂದೆ ಎಂತಹ ಗತಿ ಕಾದಿದೆ ಎಂದು ತೋರಿಸಿದೆವು ಎಂದು ಸಂಭ್ರಮಿಸಿರಬಹುದು. ತಮ್ಮನ್ನು ಪೊರೆಯುವ ಆಡಳಿತಾರೂಢ ಬಿಜೆಪಿ ಸರಕಾರಕ್ಕೆ ಸಂತೃಪ್ತಿಗೊಳಿಸಿದ ಖುಷಿಯಿಂದ ಬೀಗುತ್ತಿರಬಹುದು. ಆಗಾಗ 'ಕರಾವಳಿ ಅಲೆ'ಯಲ್ಲಿ ಆಳುವ ಸರಕಾರದ ಅನ್ಯಾಯ-ಅಕ್ರಮಗಳ ಬೆಂಬತ್ತಿ ಸಂಪಾದಕೀಯ-ಅಂಕಣ-ಲೇಖನಗಳನ್ನು ಪ್ರಕಟಿಸುತ್ತಿದ್ದ ಬಿ.ವಿ.ಸೀಯವರನ್ನು ಹೆದರಿಸಿ ಬಿಟ್ಟೆವು ಎಂದು ಸಂತಸದಲ್ಲಿರಬಹುದು. ಆದರೆ ಪತ್ರಕರ್ತನೋರ್ವನಿಗೆ ಈ ದೇಶದ, ಈ ನೆಲದ ಕಾನೂನು ಉಲ್ಲಂಘಿಸಿ 'ವಿನಾಕಾರಣ' ಕೈಕೋಳ ತೊಡಿಸಿರುವುದು ದುರಂತ.




ಬಿ.ವಿ.ಸೀಯವರು ಕೊಲೆ ಪ್ರಕರಣದಲ್ಲಿ, ಅತ್ಯಾಚಾರ ಪ್ರಕರಣದಲ್ಲಿ, ದರೋಡೆ ಪ್ರಕರಣದಲ್ಲಿ ಆರೋಪಿಯಾಗಿ ಜೈಲು ಪಾಲಾಗಿದ್ದರೆ, ಆಗ ಅವರ ಕೈಗಳಿಗೆ ಕೋಳ ತೊಡಿಸಿದ್ದರೆ ಅವರೊಬ್ಬ ಪತ್ರಕರ್ತ ಎಂಬ ಕಾರಣಕ್ಕೆ ಅವರನ್ನು ಬೆಂಬಲಿಸ ಬೇಕಾಗಿರಲಿಲ್ಲ. ಆದರೆ ಬಿವಿಸೀಯವರಿಗೆ ಕೈಕೋಳ ತೊಡಿಸಿರುವುದು ಅವರು ಆಳುವ ಬಿಜೆಪಿ ಸರಕಾರ ಮತ್ತು ಆ ಪಕ್ಷದ ಜನವಿರೋಧಿ ನೀತಿಗಳನ್ನು ವಿರೋಧಿಸಿ ಸತತವಾಗಿ ತಮ್ಮ ಪತ್ರಿಕೆಯಲ್ಲಿ ಬರೆಯುತ್ತಿದ್ದರು ಎಂಬ ಕಾರಣಕ್ಕೆ ಎಂಬುದು ಕಣ್ಣಿಗೆ ರಾಚುತ್ತಿರುವ ಸತ್ಯ. ಮಾಧ್ಯಮ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲು ಸರಕಾರವೇ ಈ ಪ್ರಕರಣದಲ್ಲಿ ಪೊಲೀಸರನ್ನು ದುರುಪಯೋಗಪಡಿಸಿಕೊಂಡಿದೆ.

ಇಂದು ಬಿಜೆಪಿಯವರು ಪತ್ರಕರ್ತನಿಗೆ ಕೈಕೋಳ ಹಾಕಿದರೆ ನಾಳೆ ಕಾಂಗ್ರೆಸ್, ಜೆಡಿಎಸ್ ಪಕ್ಷದವರು ಕೂಡ ಪತ್ರಕರ್ತರನ್ನು ಹೆದರಿಸಲು, ಪ್ರತಿಭಟನೆಯ ದನಿ ಬಗ್ಗು ಬಡಿಯಲು ಇದೇ ಮಾರ್ಗ ಅನುಸರಿಸದಿರಲಾರರು. ಇದರಿಂದ ಅಂತಿಮವಾಗಿ ತೊಂದರೆಗೀಡಾಗುವುದು ಇಲ್ಲಿನ ಜನಸಾಮಾನ್ಯರೇ.

ಆದ್ದರಿಂದ ಇಂದು ಬಿವಿಸೀಯವರಿಗೆ ಕೋಳ ತೊಡಿಸಿರುವುದನ್ನು ವಿರೋಧಿಸದೇ ಇದ್ದರೆ ಅದು ನಮಗೆ ನಾವೇ ಮಾಡಿಕೊಳ್ಳುವ ವಂಚನೆಯಾಗುತ್ತದೆ. ಪತ್ರಕರ್ತ ಬಿವಿಸೀಯವರಿಗೆ ಕೋಳ ಹಾಕಿದ ಭ್ರಷ್ಟ ಪೊಲೀಸರಿಗೆ, ಅವರನ್ನಾಳುವ ಬಿಜೆಪಿ ಸರಕಾರಕ್ಕೆ, ಅನ್ಯಾಯ ನೋಡಿಯೂ ಸುಮ್ಮನಿರುವ ನರಸತ್ತ ಜನಗಳಿಗೆ ಹೇಳಿ ಧಿಕ್ಕಾರ. ಧಿಕ್ಕಾರ. ಧಿಕ್ಕಾರ.

- ನೋಯೆಲ್ ಚುಂಗಿಗುಡ್ಡೆ 'ಹೊಸ ಬದುಕು', ಕುಂದಾಪುರ

ಕರಾವಳಿ ಅಲೆಯ ಪತ್ರಿಕಾ ಬಳಗದ ಅಧ್ಯಕ್ಷ ಬಿ.ವಿ. ಸೀತಾರಾಂರವರಿಗೆ ಕೈಕೋಳ ಹಾಕಿದ್ದು ಕನ್ನಡಿಗರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೈಕೋಳ ಹಾಕಿದಂತೆ. ಇದು ಡಾ. ಯಡಿಯೂರಪ್ಪನವರ ಸರ್ಕಾರದ 200 ದಿನಗಳ ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ. ಜಿ. ರಾಜಶೇಖರವರು ಹೇಳಿರುವಂತೆ "ಸೀತಾರಾಂರವರ ಬಂಧನವನ್ನು ಪ್ರತಿಭಟಿಸುವುದರ ಜೊತೆಗೆ, ನಾವು ಈ ಕ್ರಿಮಿನಲ್ ಕಾಯಿದೆಯ (I.P.C. ಸೆಕ್ಷನ್ 499 ಮತ್ತು 500) ಕರಾಳ ಕಲಮಿನ ವಿರುದ್ಧ ಕೂಡ ಪ್ರತಿಭಟಿಸಬೇಕಾಗಿರುವುದು" ಇಂದು ಅನಿವಾರ್ಯವಾಗಿದೆ.



ಭಾರತೀಯ ದಂಡ ಸಂಹಿತೆ I.P.C. ಸೆಕ್ಷನ್ 499 (ಮಾನಹಾನಿ) ಮತ್ತು 500 (ಮಾನಹಾನಿಗಾಗಿ ದಂಡನೆ) ಅನ್ನು ದುರುಪಯೋಗಪಡಿಸಿಕೊಂಡು ಹಣವುಳ್ಳವರು ಪತ್ರಕರ್ತರಿಗೆ ಮತ್ತು ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ಹಾಗೂ ಧೈರ್ಯವಾಗಿ ಹೇಳುವವರಿಗೆ ತೊಂದರೆ ಕೊಡುತ್ತಿದ್ದಾರೆ. I.P.C. ಸೆಕ್ಷನ್ 499 ಮತ್ತು 500 ರ ಅಡಿಯಲ್ಲಿ ಶಿಕ್ಷೆ ಆಗಿರುವುದು ಅತ್ಯಲ್ಪ ಪ್ರಕರಣಗಳಲ್ಲಿ ಮಾತ್ರವಾಗಿದ್ದರೂ ದಿಟ್ಟೆದೆಯ ಪತ್ರಕರ್ತರಿಗೆ ಕಿರುಕುಳ ಕೊಡಲು ಈ ಕರಾಳ 'ಕಲಂ'ಗಳು ಅವಕಾಶ ಕಲ್ಪಿಸಿವೆ.


ಈ ಮಾನಹಾನಿ ಕಾನೂನಿನ ಬಗ್ಗೆ ನನ್ನದೊಂದು ಸ್ವಂತ ಅನುಭವವನ್ನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದೆಂದು ಭಾವಿಸಿದ್ದೇನೆ. ನಮ್ಮೂರಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕಿನಲ್ಲಿ ನಡೆದಿದ್ದ ಅವ್ಯವಹಾರವೊಂದನ್ನು ನಾನು ಅಧ್ಯಕ್ಷನಾಗಿರುವ ಜನಜಾಗೃತಿ ವೇದಿಕೆಯು ಸಾಕ್ಷ್ಯಾಧಾರಗಳ ಸಮೇತ ಬಯಲಿಗೆಳೆದಾಗ (28.9.05ರ ಲಂಕೇಶ್ ಪತ್ರಿಕೆಯಲ್ಲೂ ಪ್ರಕಟವಾಗಿದೆ) ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಪ್ರಬಲವಾಗಿರುವ ಸೊಂಟೇಕೊಪ್ಪದ ಪ್ರಾ.ಕೃ.ಪ.ಸ. ಬ್ಯಾಂಕಿನ ಆಡಳಿತ ಮಂಡಳಿ 2004ರಲ್ಲಿ ಜನಜಾಗೃತಿ ವೇದಿಕೆಯ ಐದು ಜನ ಪದಾಧಿಕಾರಿಗಳ ವಿರುದ್ಧ ತಲಾ ಹತ್ತು ಲಕ್ಷ ರೂ.ಗಳ ಮಾನನಷ್ಟ ಮೊಕದ್ದಮೆಯನ್ನು ಹೂಡಿದರು.

ನಾಲ್ಕು ವರ್ಷಗಳ ಕಾಲ ನಡೆದ ಈ ಮೊಕದ್ದಮೆಯಲ್ಲಿ ಈಗ ನಮಗೇ ಜಯವಾಗಿದೆ. ಆದರೆ ಅವ್ಯವಹಾರವನ್ನು ಸಾಕ್ಷ್ಯಾಧಾರಗಳ ಸಮೇತ ಬಯಲಿಗೆಳೆದ "ತಪ್ಪಿಗಾಗಿ" ನಾವು ಐದು ಜನ ಪದಾಧಿಕಾರಿಗಳು ನ್ಯಾಯಾಲಯದಲ್ಲಿ ಜಾಮೀನು ಪಡೆಯಬೇಕಾಯಿತು ಮತ್ತು ಅನಗತ್ಯವಾಗಿ ನಾಲ್ಕು ವರ್ಷಗಳ ಕಾಲ ನ್ಯಾಯಾಲಯಕ್ಕೆ ಅಲೆದಾಡಬೇಕಾಯಿತು. ಇದು ನಮಗಾದ ಅನ್ಯಾಯ ಮತ್ತು ಈ ಅನ್ಯಾಯಕ್ಕೆ ಕಾರಣ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ವರದಿಯ ಆಧಾರದ ಮೇಲೆ ನಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ಅವಕಾಶ ಮಾಡಿಕೊಟ್ಟ I.P.C. ಸೆಕ್ಷನ್ 499 ಮತ್ತು 500. ಇಂತಹ ಕರಾಳ ಕಾಯಿದೆಯ ವಿರುದ್ಧ ಪ್ರತಿಭಟಿಸಬೇಕಾಗಿರುವುದು ಇಂದು ಅನಿವಾರ್ಯವಾಗಿದೆ.

-ಎಸ್.ಎಸ್. ವೆಂಕಟೇಶ್
ಅಧ್ಯಕ್ಷ
ಜನ ಜಾಗೃತಿ ವೇದಿಕೆ
ದಾಸನಪುರ ಹೋಬಳಿ

...ವೆಂಪು' ಕುತೂಹಲಗಳು

...ಸುಮುಪಿ ಕುವೆಂಪು' ಚಿತ್ರದ
...ಣಾ ಬಹುತೇಕ ಮುಕ್ತಾಯ
...ದೆ. ಸಿ.ಆರ್. ಸಿಂಹ ಅವರು
...ು ಆಗಿ ನಟಿಸುತ್ತಿರುವ ಈ
...ನ್ನ ಅವರ ಮಗ ಋತ್ವಿಕ್
...ಸುತ್ತಿರುವುದು ಎಲ್ಲರಿಗೂ
...ುವ ವಿಚಾರ. ಆದರೆ ಈ
... ಸಂಬಂಧಪಟ್ಟಂತೆ ಇನ್ನೂ
...ರು ಕುತೂಹಲಕಾರಿ ವಿಷಯ


ಸಿ.ಆರ್.ಸಿಂಹ

... ವಿಶ್ವಮಾನವ, ರಾಷ್ಟ್ರಕವಿ
...ು ಕುರಿತ ಈ ಚಿತ್ರವನ್ನು
...ಸುತ್ತಿರುವವರು ಒಬ್ಬ ಸಾಫ್ಟ್
...ಇಂಜಿನಿಯರ್. ಅವರ ಹೆಸರು ಅರವಿಂದ್.
...ವೇರ್ ಉದ್ಯೋಗಿಗಳಿಗೆ ಕನ್ನಡ ಸಂಸ್ಕೃತಿ, ಭಾಷೆ
...ಲವು ಅಷ್ಟಕಷ್ಟೇ... " ಎಂಬ ಮಾತನ್ನು
...ದ್ ಸುಳ್ಳು ಮಾಡಿದ್ದಾರೆ.

... ಈ ಚಿತ್ರದ ಹಾಡೊಂದರಲ್ಲಿ ಬರುವ ಕೆಲ
...ಷೆಯ ಸಾಲುಗಳನ್ನು ರಿಯಲ್‌ಸ್ಟಾರ್ ಉಪೇಂದ್ರ
...ದ್ದಾರೆ. ಈ ಮೂಲಕ ಕಲಾತ್ಮಕ ಚಿತ್ರಗಳ ಬಗ್ಗೆ
...ರ್ಷಿಯಲ್ ನಟರಿಗೆ ಗೌರವವಿದೆ
...ದನ್ನು ಉಪ್ಪಿ ತೋರಿಸಿಕೊಟ್ಟಿದ್ದಾರೆ.
...ತ್ತು ಸಿ ಕೇಂದ್ರದ ಪ್ರೇಕ್ಷಕರಿಗಷ್ಟೇ
...ಗುವ ಡೈಲಾಗ್‌ಅನ್ನು ಹೊಡೆ
... ಉಪ್ಪಿ, ಇದೀಗ ಕುವೆಂಪುರವರ
...ವನ್ನು ಹೇಗೆ ಹೇಳುತ್ತಾರೋ?
... ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ?
...ದನ್ನು ಕಾದುನೋಡಬೇಕಷ್ಟೇ.


ಅರವಿಂದ್

...ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ
... ಹೆಸರು ಮಾಡಿರುವ ಆರ್.ಕೆ.
...ಭನ್ ಅವರು ಮೊದಲ ಬಾರಿಗೆ
...ತ್ರಕ್ಕೆ ಹಿನ್ನೆಲೆ ಗಾಯಕರಾಗಿದ್ದಾರೆ. ಅವರು
...ುರವರ 'ಓ ನನ್ನ ಚೇತನಾ...' ಹಾಡನ್ನು ಹೊಸ
...ಸಂಯೋಜನೆಯಲ್ಲಿ ಹಾಡಿ ರಾಷ್ಟ್ರ
...ತಮ್ಮ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.
...ಂದೆಡೆ ಶಿವಮೊಗ್ಗ ಸುಬ್ಬಣ್ಣ ತನ್ನ
...ನದ ಪರಾಕಾಷ್ಠೆಯ ದಿನಗಳಲ್ಲಿ
...ನ್ನ 'ಆನಂದಮಯ....' ಹಾಡನ್ನು
...ರೀತಿ ಉಳಿಸಿಕೊಳ್ಳಲು ನಿರ್ದೇಶಕರು
...ಸಿದ್ದಾರೆ. ಈ ಹಾಡು ಸುಬ್ಬಣ್ಣ ಅವ
...ತಾರಾಮೌಲ್ಯ ತಂದುಕೊಟ್ಟಂತಹ
...ಬುದನ್ನು ಇಲ್ಲಿ ಸ್ಮರಿಸಬಹುದು.


ಋತ್ವಿಕ್

... 'ಅಮೆರಿಕಾ ಅಮೆರಿಕಾ' ಚಿತ್ರದಲ್ಲಿ
...ನ್ನ ಹೇಮಾ ಪಂಚಮುಖಿ ಈ
...ಲ್ಲಿ ನೃತ್ಯ ನಿರ್ದೇಶಕಿಯಾಗಿ ತನ್ನ ಪ್ರತಿಭೆ ಹಾಗೂ
... ಅವತಾರವನ್ನು ಪ್ರದರ್ಶಿಸಿದ್ದಾರೆ. ಅಂದು
...ರುಳಿಯಂತಿದ್ದ ಈಕೆ ಇಂದು ಜಪಾನಿನ 'ಸುಮೋ'
...ಟುವಂತೆ ಮೈ ಬೆಳೆಸಿಕೊಂಡಿದ್ದಾರೆ. ಆದರೂ

ಪ್ರಭಾತ್ ಕಲಾವಿದರ ಕುಟುಂಬದ ಈ ಹುಡುಗಿಯ ಪ್ರತಿಭೆಯನ್ನು ಮಾತ್ರ ಯಾರೂ ಪ್ರಶ್ನಿಸುವಂತಿಲ್ಲ. ಅಷ್ಟು ಚೆನ್ನಾಗಿ ಕುವೆಂಪು ಹಾಡುಗಳಿಗೆ ನೃತ್ಯಸಂಯೋಜನೆಯನ್ನು ಮಾಡಿದ್ದಾರೆ. ಹಾಗೆಯೇ ಕುವೆಂಪುರವರ ಶೃಂಗಾರ ಗೀತೆಯೊಂದಕ್ಕೆ ಖ್ಯಾತ ನೃತ್ಯಗಾರ್ತಿ ನಿರುಪಮಾರ್ರ್ರೀ ಕಥಕ್ ಶೈಲಿಯಲ್ಲಿ ನರ್ತಿಸಿದ್ದಾರೆ.

* ಈ ಚಿತ್ರದ ಎಲ್ಲಾ ಹಾಡುಗಳು ಕುವೆಂಪುರವರು ಬರೆದಿರುವ ಹಾಡುಗಳೇ ಆಗಿವೆ. ಈಗಾಗಲೇ ಕುವೆಂಪುರವರ 'ಕನ್ನಡವೇ ಸತ್ಯ...' ಹಾಡನ್ನು ಸಿ.ಅಶ್ವತ್ಥ್, ಕಾಳಿಂಗರಾಯರು, ಅನಂತಸ್ವಾಮಿ ಮತ್ತು ಡಾ. ರಾಜ್‌ಕುಮಾರ್ ಹಾಡಿ ಕನ್ನಡಿಗರ ಹೃನ್ಮನ ಗೆದ್ದಿದ್ದಾರೆ. ಆದರೆ ಈಗ ಇದೇ ಹಾಡಿಗೆ ಸಂಗೀತ ನಿರ್ದೇಶಕ ವಿ.ಮನೋಹರ್ ಹೊಸದಾಗ ಸಂಯೋಜನೆ ಮಾಡಲು ನಿರ್ಧರಿಸಿದ್ದಾರೆ. ಹೊಸ ರೂಪದಲ್ಲಿ ಮೂಡಿಬರಲಿರುವ ಈ ಹಾಡನ್ನು ಯಾರು ಹಾಡುತ್ತಾರೆ ಎಂಬುದು ಗೊತ್ತಿಲ್ಲ. ಆದರೆ ಕುವೆಂಪು ಹಾಡುಗಳೆಂದರೆ ರತ್ನಮಾಲಾ ಪ್ರಕಾಶ್ ಕಂಠಸಿರಿ ಇರಲೇಬೇಕಲ್ಲವೇ? ಆದ್ದರಿಂದ ರತ್ನಮಾಲಾ ಅವರೂ ಒಂದು ಹಾಡಿಗೆ ದನಿ ನೀಡಿದ್ದಾರೆ.


* ಕುವೆಂಪುರವರ ಕನ್ನಡ ಗೀತೆಗಳು ಮಾತ್ರವಲ್ಲ, ಅವರು ಎಂದೋ ಬರೆದಿದ್ದ ಇಂಗ್ಲಿಷ್ ಹಾಡುಗಳ ಚಿಕ್ಕ ಚಿಕ್ಕ ತುಣುಕುಗಳನ್ನೂ ಕೂಡಾ ಈ ಚಿತ್ರದಲ್ಲಿ ಬಳಸಲಾಗಿದೆಯಂತೆ.

* ಕುವೆಂಪು ಬರೆದ 'ಬಾ ಚಕೋರಿ ಚಂದ್ರ ಮಂಚಕ್ಕೆ...' ಎಂಬ ಶೃಂಗಾರ ಗೀತೆ ಈ ಚಿತ್ರದಲ್ಲೂ ಇದೆ. ಆದರೆ ಇದೇ ಹಾಡು ಗುರುಪ್ರಸಾದ್ ನಿರ್ದೇಶನದ 'ಎದ್ದೇಳು ಮಂಜುನಾಥ' ಚಿತ್ರದಲ್ಲೂ ಇದೆ. ಅಂದರೆ ಇವತ್ತಿಗೂ ಕುವೆಂಪುರವರ ಗೀತೆ ಕಲಾತ್ಮಕ ಮತ್ತು ಕಮರ್ಷಿಯಲ್ ಚಿತ್ರಗಳಿಗೆ ಏಕಪ್ರಕಾರವಾಗಿ ಅನ್ವಯಿಸುತ್ತದೆ ಎಂದಲ್ಲವೇ?

ಕಳೆದ ವರ್ಷ ಕುವೆಂಪು ಅವರ ಶತಮಾನೋತ್ಸವವನ್ನು ಸರ್ಕಾರ ನೀರಸವಾಗಿ ನಡೆಸಿತ್ತು. ಆದರೆ ಈಗ, ಕನ್ನಡ ಚಿತ್ರರಂಗ ಅಮೃತಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಕುವೆಂಪು ಅವರನ್ನು ಕುರಿತ ಚಿತ್ರಕ್ಕೆ ವಿವಿಧ ವಲಯದ ಜನರು ಒಂದುಗೂಡಿ ಅವರ ವಿಶ್ವಮಾನವ ಸಂದೇಶವನ್ನು ಸಾರಲು ಹೊರಟಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ.

■ ಶೆಣೈ

ಚಂದೂಲಾಲ್‌ರ ಚಂದದ ಬರ್ತ್‌ಡೇ



ಇತ್ತೀಚೆಗೆ ಸಿನಿಮಾ ಲೋಕದ ನಾಯಕ ನಟರು ತಮ್ಮ ಬರ್ತ್‌ಡೇ ಅನ್ನು ಅದ್ದೂರಿಯಾಗಿ ಆಚರಿಸಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಇನ್ನು ನಾಯಕಿಯರಂತೂ ಅಂಧ ಅಥವಾ ಅನಾಥ ಮಕ್ಕಳಿಗೆ ಊಟ ನೀಡಿ ಅದರ ಫೋಟೋವನ್ನು ಪತ್ರಿಕೆಗಳಲ್ಲಿ ಹಾಕಿಸಿಕೊಳ್ಳುವ ಚಟವನ್ನು ಹಚ್ಚಿಕೊಂಡಿದ್ದಾರೆ. ಇಂತಹವರ ಮಧ್ಯೆ ಮೊನ್ನೆ ಅಪರೂಪದ ಹೃದಯಸ್ಪರ್ಶಿ ಬರ್ತ್‌ಡೇ ಸಮಾರಂಭವೊಂದು ನಡೆಯಿತು.

ಚಂದೂಲಾಲ್ ಜೈನ್ ಎಂಬ ಹಳೇ ಕಾಲದ ನಿರ್ಮಾಪಕ ತನ್ನ ಎಪ್ಪತ್ತಾಲ್ಕನೆಯ ಬರ್ತ್‌ಡೇಯನ್ನು ಆಚರಿಸಿದರು. ಅದು ಅವರ ಐವತ್ತನೇ ವರ್ಷದ ವಿವಾಹ ವಾರ್ಷಿಕೋತ್ಸವವೂ ಆಗಿದ್ದರಿಂದ ಅವರ ಪತ್ನಿಯೂ ಜೊತೆಗಿದ್ದರು.

ಚಂದೂಲಾಲ್ ಜೈನ್ ದೇಹದಲ್ಲಿ ಕಳೆದ ವರ್ಷ ಕ್ಯಾನ್ಸರ್ ಕಾಣಿಸಿಕೊಂಡಿತ್ತು. ಆಗ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಜೈನ್ ಆಶ್ಚರ್ಯಕರ ರೀತಿಯಲ್ಲಿ ಸುಧಾರಿಸಿಕೊಂಡು ಈಗ ಹೊಸ ಉತ್ಸಾಹ- ಹುಮ್ಮಸ್ಸಿನಿಂದ ಮತ್ತೆ ಸಿನಿಮಾ ಮಾಡಲು ಹೊರಟಿದ್ದಾರೆ. ಊರುಗೋಲಿನ ಸಹಾಯದೊಂದಿಗೆ ನಿಧಾನವಾಗಿ ಕುಂಟುತ್ತಾ ನಡೆಯುವ ಚಂದೂಲಾಲ್ ಜೈನ್ ಅವರ ಹೊಸ ಚಿತ್ರದ ಹೆಸರು 'ವಿದೇಶ'. ಅದನ್ನು ಭಾರತ ಮತ್ತು ಲಂಡನ್‌ನಲ್ಲಿ ಚಿತ್ರೀಕರಿಸುವ ಯೋಜನೆ ಅವರಿಗೆ.

'ಭೂತಯ್ಯನ ಮಗ ಅಯ್ಯು', 'ತಬ್ಬಲಿ ನೀನಾದೆ ಮಗನೇ', 'ವೀರಪ್ಪನ್', 'ಗಂಗವ್ವ ಗಂಗಮಾಯಿ', 'ಹೇಮಾವತಿ', 'ಭಕ್ತಸಿರಿಯಾಳ', ನಲ್ವತ್ತೆಂಟು ಗಂಟೆಗಳಲ್ಲಿ ತೆಗೆದ 'ಇದು ಸಾಧ್ಯ' ಚಿತ್ರವೂ ಸೇರಿದಂತೆ ಸುಮಾರು 45ಕ್ಕೂ ಹೆಚ್ಚು ಚಿತ್ರಗಳನ್ನು ಇವರು ನಿರ್ಮಿಸಿದ್ದಾರೆ. ಏಳೆಂಟು ಬಾರಿ ರಾಜ್ಯ ಪ್ರಶಸ್ತಿ ಮತ್ತು ಎರಡು ಬಾರಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುವ ಚಂದೂಲಾಲ್ ಜೈನ್ ಎಂಬ ಈ ಬರ್ತ್‌ಡೇ ಬಾಯ್‌ಗೆ ಬೆಂಗಳೂರಿನಲ್ಲಿ ಇನ್ನೂ ಒಂದು ನಿವೇಶನ ಇಲ್ಲ, ಸ್ವಂತಮನೆಯೂ ಇಲ್ಲವೆಂದರೆ ನೀವು ನಂಬಲೇಬೇಕು. ಅಂದು ಬರ್ತ್‌ಡೇಗೆ ಅವರ ಸಮಕಾಲೀನರಾದ ಆರ್.ಲಕ್ಷ್ಮಣ್ ಮತ್ತು ಪಾಲ್ ಬಂದು ಶುಭ ಹಾರೈಸಿದರು. ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ಈ ಮಾರ್ವಾಡಿ ಚಂದೂಲಾಲ್ ದಂಪತಿಗಳು ನೂರ್ಕಾಲ ಬಾಳಲಿ ಎಂದು ಹಾರೈಸೋಣ. ■

'ಬಿರುಗಾಳಿ' ಎಬ್ಬಿಸಿದ ಗಾಂಧಿ


ದಿನೇಶ್ ಗಾಂಧಿ


ದಿನೇಶ್ ಗಾಂಧಿ

'ಗೆಳೆಯ' ಚಿತ್ರದಿಂದ ನಿರ್ದೇಶನಕ್ಕೂ ಇಳಿದ ಡ್ಯಾನ್ಸ್ ಮಾಸ್ಟರ್ ಹರ್ಷ ಅವರ 'ಬಿರುಗಾಳಿ' ಸದ್ಯದಲ್ಲೇ ಬಿಡುಗಡೆಗೊಳ್ಳಲಿದೆ.

ಕಳೆದ ಬಾರಿ ಕಥೆಗಾರ ಪ್ರೀತಂ ಗುಬ್ಬಿಯನ್ನು ನಂಬಿದ್ದ ಹರ್ಷನ 'ಗೆಳೆಯ' ಸುಸ್ತು ಹೊಡೆದಿತ್ತು. ಮತ್ತೊಮ್ಮೆ 'ಪರರ ಕಥೆಯನ್ನು ನಂಬಿ ಹಾಳಾಗುವುದು ಬೇಡ' ಎಂದು ತೀರ್ಮಾನಿಸಿದ ಹರ್ಷ ಸ್ವತಃ ತಾನೇ ಕೂತು ಕಥೆ, ಚಿತ್ರಕಥೆ ಬರೆದು 'ಬಿರುಗಾಳಿ'ಯನ್ನು ನಿರ್ದೇಶಿಸಿದರು. ಆದರೆ 'ವೀರಮದಕರಿ' ಚಿತ್ರದ ನಿರ್ದೇಶಕ ದಿನೇಶ್ ಗಾಂಧಿ ಒಂದು ಬಾಂಬ್ ಸಿಡಿಸಿದರು. 'ಬಿರುಗಾಳಿ' ಚಿತ್ರದ ಟ್ರಯಲರ್‌ಗಳನ್ನು ನೋಡಿದ ದಿನೇಶ್ ಗಾಂಧಿ "ಇದು ತೆಲುಗಿನ 'ಛತ್ರಪತಿ' ಚಿತ್ರದ ಕಾಪಿ. ಅದರ ರಿಮೇಕ್ ಹಕ್ಕು ನನ್ನ ಬಳಿ ಇದೆ. ಹರ್ಷ ನನಗೆ ಅನ್ಯಾಯ ಮಾಡಿದ್ದಾರೆ" ಎಂದೆಲ್ಲಾ ಆರೋಪಿಸಿ ಛೇಂಬರ್‌ಗೂ ಕಂಪ್ಲೇಂಟು ಕೊಟ್ಟಿದ್ದರು.

ಈ ಪುಣ್ಯಾತ್ಮ ದಿನೇಶ್ ಗಾಂಧಿ ಎಂಥಾ ಯಡವಟ್ಟು ಗಿರಾಕಿ ಅನ್ನೋದು ಇಡೀ ಉದ್ಯಮಕ್ಕೇ ಗೊತ್ತಿರುವುದರಿಂದ, ಛೇಂಬರ್‌ನವರೂ ಗಾಂಧಿಯ ಮಾತಿಗೆ ಕಿವಿಗೊಡದೆ "ಮೊದಲು ಸಿನಿಮಾ ನೋಡ್ರಿ, ಆಮೇಲೆ ಆರೋಪ ಮಾಡಿವ್ರಂತೆ" ಎಂದು ಹೇಳಿ ಕಳಿಸಿದ್ದರು. ಮೊನ್ನೆ ಹರ್ಷ ನಿರ್ದೇಶಕ ಇಂದ್ರಜಿತ್ ಲಂಕೇಶ್, ನಿರ್ಮಾಪಕ ಎನ್. ಕುಮಾರ್, ಜಾಕ್ ಮಂಜ ಸೇರಿದಂತೆ ನಿರ್ಮಾಪಕರ ಸಂಘದ ಹಲವರನ್ನು ಕರೆದೊಯ್ದು ರೇಣುಕಾಂಬ ಸ್ಟುಡಿಯೋದಲ್ಲಿ ಒಂದು ಪ್ರೀವ್ಯೂ ಶೋವನ್ನೂ ತೋರಿಸಿದ್ದಾರೆ.

ಸಿನಿಮಾ ನೋಡಿದ ಅವರೆಲ್ಲರನ್ನು ದಿನೇಶ್ ಗಾಂಧಿಯ ಆರೋಪ ನಿಜಾನಾ, ಸುಳ್ಳಾ ಎಂದು ಕೇಳಿದಾಗ ಅವರು ಗಾಂಧಿಯನ್ನೇ ಗುರಾಯಿಸಿದ್ದಾರೆ. ಗಾಂಧಿ ಕೂಡ ಹರ್ಷನ ಬಳಿ ಬಂದು "ಐ ಯಾಮ್ ವೆರಿ ಸಾರಿ ಹರ್ಷ" ಎಂದು ಹೇಳಿ ನುಣುಚಿಕೊಂಡಿದ್ದಾನೆ. ಇತ್ತೀಚಿಗಷ್ಟೇ ಸುದೀಪ್ ಅವರು "ದಿನೇಶ್ ಗಾಂಧಿ ಮಹಾ ಯಡವಟ್ಟು ಮತ್ತು ವಿಚಿತ್ರ ಮನುಷ್ಯ" ಎಂದು ಹೇಳಿದ್ದರು. ಈಗ 'ಬಿರುಗಾಳಿ' ವಿವಾದ ಸುದೀಪ್ ಮಾತಿಗೆ ಮತ್ತಷ್ಟು ಪುಷ್ಟಿ ನೀಡಿದೆ. ■

...ರೂಪಕಿಯರ ಆಭಾಸ-ಅತಿಥಿಗಳ ಪೇಚಾಟ

...ರ್ಯಕ್ರಮವೊಂದನ್ನು ಅಚ್ಚುಕಟ್ಟಾಗಿ ನಿಭಾಯಿಸಲು
...ಇಡೀ ಕಾರ್ಯಕ್ರಮಕ್ಕೆ ಒಂದು ರೀತಿಯ ಕಳೆ
... ನಿರೂಪಕಿಯರನ್ನು ಕರೆತರುವುದು ಸಾಮಾನ್ಯ
...ಲ್ಲಾ ಗ್ಲಾಮರ್ ಮತ್ತು ತೋರಿಕೆಗೇ
...ದ್ಯತೆ ಕೊಡುವ ಸಿನಿಮಾ ಸಮಾರಂಭ
...ನಿರೂಪಕರಿಲ್ಲದಿದ್ದರೆ ಹೇಗೆ?
...ಪಟ್ಟು ಸಿನಿಮಾ ನಿರ್ಮಿಸಿರುವ
...ಪಕ ತನ್ನ ಚಿತ್ರದ ಬಗೆಗಿನ ಸಮಾರಂಭ
... ಮೂಡಿಬರಲಿ ಎಂಬ ಕಾರಣಕ್ಕೆ
... ಬಳುಕುವ ನಿರೂಪಕಿಯನ್ನು ಕರೆತಂದು
...ತೋರಿಸುತ್ತಾನೆ. ಆದರೆ ಆಗ ಆ
...ಯ ಘನಘೋರವಾದ ಭಾಷಾ ಹತ್ಯೆ
... ಆಂಗಿಕ ಅಭಿನಯವೂ ಶುರುವಾಗುತ್ತದೆ.




...ದೆಲ್ಲಾ ಅಪರ್ಣ, ಶೈಲಜಾರಂಥ ನಿರೂಪಕಿಯರು
...ಪವಿರಾದ ನಿರೂಪಣೆಯಿಂದ ಇಡೀ ಸಭೆಯನ್ನು
...ಸುತ್ತಿದ್ದರಲ್ಲದೇ, ಎಲ್ಲೂ ನೆರೆದವರಿಗೆ ಬೋರು
...ಸುದಂತೆ ಕಾರ್ಯಕ್ರಮವನ್ನು ನಿರ್ವಹಿಸಿ
...ಭದಲ್ಲಿ ಅವರೂ ಒಂದು ಭಾಗವಾಗುತ್ತಿದ್ದರು.
...ರೆ ಈಚೆಗೆ ಬರುತ್ತಿರುವ ಹುಡುಗಿಯರ
...ೆಯಿಂದ ಎದುರು ಕುಳಿತವರ ಮೆದುಳಿಗೇ

ಹಾರೆ, ಪಿಕಾಸಿ ಏಟುಬಿದ್ದಂತಹ ಅನುಭವವಾಗುತ್ತದೆ. ಯಾಕೆಂದರೆ ಈ ಹುಡುಗಿಯರಿಂದ ಆಗುವ ಆಭಾಸಗಳು ಒಂದೆರಡಲ್ಲ!

ಉದಾಹರಣೆಗೆ ಮೊನ್ನೆ 'ಅಭಿಮಾನಿ' ಎಂಬ ಚಿತ್ರದ ಆಡಿಯೋ ರಿಲೀಸ್ ಕಾರ್ಯಕ್ರಮದಲ್ಲಿ ಆದದ್ದು. ಆಡಿಯೋ ಅನ್ನು ಬಿಡುಗಡೆ ಮಾಡಲು ಹಿರಿಯ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಆಗಮಿಸಿದ್ದರು. ಅವರನ್ನು ವೇದಿಕೆಗೆ ಕರೆಯಲು ಅಲ್ಲಿದ್ದ ನಿರೂಪಕಿ ಹೇಳಿದ್ದೇನು ಗೊತ್ತೆ? "ಇತ್ತೀಚೆಗೆ ತಾನೆ ಜೀವಮಾನಶ್ರೇಷ್ಠ ಪ್ರಶಸ್ತಿಯನ್ನು 'ಬಾಚಿಕೊಂಡ' ಅಮ್ಮಾವ್ರಿಗೆ ವೇದಿಕೆಗೆ 'ಆಹ್ವಾನತೆ'ಗಳು!"

ನಿರೂಪಕಿಯ ಈ ಮಾತು ಕೇಳಿದಾಕ್ಷಣ ನಗುನಗುತ್ತಾ ಆಗಮಿಸುತ್ತಿದ್ದ ಪಾರ್ವತಮ್ಮನವರು ಗರ ಬಡಿದವರಂತೆ ಪೆಚ್ಚಾಗಿ ನಿಂತುಬಿಟ್ಟರು. ಬಹುಶಃ ಆ ನಿರೂಪಕಿಗೆ ಪ್ರಶಸ್ತಿಯನ್ನು ಪಡೆಯುವುದಕ್ಕೂ, 'ಬಾಚಿಕೊಳ್ಳುವುದ'ಕ್ಕೂ ವ್ಯತ್ಯಾಸ ತಿಳಿದಂತಿರಲಿಲ್ಲ. ಇನ್ನು 'ಆಹ್ವಾನತೆಗಳು' ಎಂಬ ಪದ ಕನ್ನಡದ ಯಾವ ಪದಕೋಶದಲ್ಲಿದೆ ಎಂದು ಸ್ವತಃ ತಾಯಿ ಕನ್ನಡಾಂಬೆಗೂ ತಿಳಿಯೋದು ಕಷ್ಟ.



ಇನ್ನೊಮ್ಮೆ ಹೀಗಾಗಿತ್ತು: ಹಿರಿಯ ನಿರ್ಮಾಪಕ ಸಾರಾ ಗೋವಿಂದು ಅವರು ಚಿತ್ರರಂಗದಲ್ಲಿನ ಸಂಕಷ್ಟಗಳ ಬಗ್ಗೆ ಮಾತನಾಡಿ ಮುಗಿಸಿದರು. ತಕ್ಷಣ ಮೈಕು ಹಿಡಕೊಂಡ ನಿರೂಪಕಿ ಏನಂದಳು ಗೊತ್ತಾ? "ತಮ್ಮ ಚುರುಕು ಮಾತುಗಳಿಂದ ಹಾಸ್ಯದ ಹೊನಲನ್ನು ಹರಿಸಿದ ಸಾರಾ ಗೋವಿಂದು ಅವರಿಗೆ ವಂದನೆಗಳು...!" ನಿರೂಪಕಿಯ ಈ ಮಾತುಗಳನ್ನು ಕೇಳಿದ ಕೂಡಲೇ ತಲೆಮೇಲೆ ಬಿಸಿನೀರು ಬಿದ್ದವರಂತೆ ಒಂದು ಕ್ಷಣ ತಲೆಯನ್ನು ವದರಿದ ಗೋವಿಂದುಗೆ ಆಶ್ಚರ್ಯವೋ ಆಶ್ಚರ್ಯ, 'ನಾನೇನು ಹಾಸ್ಯ ಮಾಡಿದೆ?' ಅಂತ.


ಅನುಶ್ರೀ

ಇನ್ನು ಸ್ಟೇಜು, ಮೈಕು ಸಿಕ್ಕಿದರೆ ಸಾಕು ಕೋತ್‌ಕೋತಿಯಂಗೆ ಆಡುವ ಅನುಶ್ರೀ ಎಂಬ ನಿರೂಪಕಿಯಿದ್ದರಂತೂ ಕಾರ್ಯಕ್ರಮಕ್ಕೆ ಬರಲಿರುವ ಆಹ್ವಾನಿತರು ಒಳಬರುವ ಮುನ್ನವೇ ರಿವರ್ಸ್ ಗೇರ್ ಹಾಕಿ ಮಂಗಮಾಯವಾಗುತ್ತಾರೆ. ಇನ್ನೂ ಕೆಲವೊಮ್ಮೆ ಏನಾಗುತ್ತದೆಯೆಂದರೆ ಕಾರ್ಯಕ್ರಮಕ್ಕೆ ಬಂದ ಮುಖ್ಯ ಅತಿಥಿಗಳ ಹೆಸರೇ ಬದಲಾಗಿಬಿಡುತ್ತದೆ! ಶರತ್‌ಬಾಬು- ಶರತ್ ರಾವ್, ಲೋಹಿತಾಶ್ವ- ರೋಹಿತಾಶ್ವ, ಸೀತಾರಾಮ್-ಶಾಂತಾರಾಮ್..... ಹೀಗೆ ಬಹಳಷ್ಟು ಮರುನಾಮಕರಣವೂ ನಡೆಯುತ್ತದೆ. ಹೆಸರುಗಳೊಂದಿಗೆ ರಾವ್, ಬಾಬುಗಳ ಎಕ್ಸ್‌ಟ್ರಾ ಫಿಟ್ಟಿಂಗ್ ಅಂತೂ ಮಾಮೂಲು.

ಬಹುತೇಕ ಟಿವಿ ಆ್ಯಂಕರುಗಳೇ ಈಗ ಕಾರ್ಯಕ್ರಮ ನಿರೂಪಣೆಗೂ ಇಳಿದಿದ್ದಾರೆ. ಸ್ಟೇಜ್ ನಿರೂಪಣೆಯೇ ಹೀಗಿರುವಾಗ ಇನ್ನು ಚಾನೆಲ್‌ಗಳೂ... ಅವುಗಳ ಕಾರ್ಯಕ್ರಮಗಳೂ ಯಾವ ಮಟ್ಟದಲ್ಲಿರಬಹುದು?

■ ಅರುಣ್

A R B P LANKESH, Kannada Weekly Price Rs. 12/- 05-02-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-



ಭುವಿ ತೊರೆದ ಭರತ

ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ನಟ ಹಾಗೂ ಹಿರಿಯ ಕಲಾವಿದ ಹೊನ್ನಪ್ಪ ಭಾಗವತರ್ ಅವರ ಪುತ್ರ ಭರತ್ ಭಾಗವತರ್ ಅಸ್ತಂಗತರಾಗಿದ್ದಾರೆ.

ಕಲಾವಿದರ ಮನೆತನದಲ್ಲೇ ಹುಟ್ಟಿ ಬೆಳೆದ ಭರತ್ ಕಿರುತೆರೆಯಲ್ಲಿ ಸಾಕಷ್ಟು ಹೆಸರು ಮಾಡಿದವರು. ಆರಂಭದಲ್ಲಿ ಖಳನಟನಾಗಿ ಚಿತ್ರರಂಗ ಪ್ರವೇಶಿಸಿದ ಭರತ್ ಆನಂತರ ಪೋಷಕ ಪಾತ್ರಗಳಿಗೆ ಮಾತ್ರ ಅಂಟಿಕೊಳ್ಳಬೇಕಾಗಿ ಬಂದದ್ದು ವಿಪರ್ಯಾಸವೇ ಸರಿ.

ಕಳೆದ ವರ್ಷ ತಾನೆ ಬಿಡುಗಡೆಗೊಂಡ 'ಪ್ರಚಂಡ ರಾವಣ' ಚಿತ್ರದ ನಿರ್ಮಾಣ ಪಾಲುದಾರರೂ ಆಗಿದ್ದ ಭರತ್ ಕೆಲ ವರ್ಷಗಳ ಹಿಂದಷ್ಟೇ ಅಪಘಾತಕ್ಕೀಡಾಗಿ ಕೊಂಚ ಮಂಕಾಗಿದ್ದರು. ಆದರೂ ಮೊನ್ನೆಮೊನ್ನೆಯಷ್ಟೇ ಬಿಡುಗಡೆಗೊಂಡಿದ್ದ 'ನೀನ್ಯಾರೆ' ಚಿತ್ರದಲ್ಲೂ ಅಭಿನಯಿಸಿದ್ದರು.

* * * *

ಭರತ್ ಭಾಗವತರ್ ಕೊನೆಯುಸಿರೆಳೆಯುವ ಮುನ್ನಾ ದಿನವೇ ನಮ್ಮ ಸಿನಿಮಾ ಮಂದಿ ಹಿಂದುಮುಂದು ನೋಡದೆ ಆ ಕಲಾವಿದನಿಗೆ ಒಂದು ನಿಮಿಷದ ಮೌನವನ್ನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಿದ ಅಚಾತುರ್ಯ ಘಟನೆಯೂ ನಡೆಯಿತು.

ನಡೆದದ್ದಿಷ್ಟು:

ಅಲ್ಲಿ ಭರತ್ ಆಸ್ಪತ್ರೆ ಸೇರಿ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರು. ಈ ವಿಷಯವನ್ನು ಖಾಸಗಿ ವಾಹಿನಿಯೊಂದು ತಪ್ಪಾಗಿ 'ಭರತ್ ಭಾಗವತರ್ ಇನ್ನಿಲ್ಲ' ಎಂದು ಬಿತ್ತರಿಸಿತ್ತು. ಇದನ್ನು ನೋಡಿದ ಪತ್ರಕರ್ತರು ಮತ್ತು ಸಿನಿಮಾಮಂದಿಯೆಲ್ಲ ಏನೆಂದೂ ವಿಚಾರಿಸದೆ 'ಪೋರ್ಕಿ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಮೌನಾಚರಣೆ ಮಾಡಿ ತಮ್ಮ ವಿವೇಕ ಎಂಥದ್ದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಹಿಂದೊಮ್ಮೆ ನಿವೇದಿತಾ ಜೈನ್ ಮಹಡಿಯಿಂದ ಬಿದ್ದು ಆಸ್ಪತ್ರೆ ಸೇರಿದಾಕ್ಷಣ ಇದೇ ಮಂದಿ ಆಕೆಗೆ ಶ್ರದ್ಧಾಂಜಲಿ ಸಲ್ಲಿಸಿದ್ದರು. ಆದರೆ ಇವರ ಅಂತಿಮ ನಮನಗಳ ನಂತರವೇ ಆಕೆ ಜೀವ ತೊರೆದದ್ದು!

ಇದಕ್ಕಿಂತ ದೊಡ್ಡ ಯಡವಟ್ಟು ಬೇರಾವುದಿರಲು ಸಾಧ್ಯ?

ರೋಡಿಗಿಳಿದ ರಾಧಿಕಾ!

ಕಳೆದೊಂದು ವರ್ಷದಿಂದ ವೈವಾಹಿಕ ಪ್ರಯಾಣದಲ್ಲೇ ಇದ್ದ ರಾಧಿಕಾ ರೋಡಿಗಿಳಿದಿದ್ದಾಳೆ!

ತನ್ನ 'ಪುತ್ರ-ಕುಮಾರ'ನೊಂದಿಗೆ ಹಾಯಾಗಿ ವಿದೇಶಗಳನ್ನು ಸುತ್ತುತ್ತಾ, ನಿಗೂಢ ಸ್ಥಳಗಳಲ್ಲಿ ವಾಸಿಸುತ್ತಾ ಯಾರ ಕಣ್ಣಿಗೂ ಕಾಣದಂತೆ ಗೌಪ್ಯ ಜೀವನ ನಡೆಸುತ್ತಿದ್ದ ರಾಧಿಕಾ ಮತ್ತೆ ಸಿನಿಮಾ... ಶೂಟಿಂಗುಗಳನ್ನು ಆರಂಭಿಸಿರುವುದು ಕನ್ನಡ ಚಿತ್ರರಂಗದ ಸದ್ಯದ ಹಾಟ್ ನ್ಯೂಸ್.

ಸಂಪೂರ್ಣವಾಗಿ ಚಿತ್ರೀಕರಣವಾಗಿದ್ದ 'ಈಶ್ವರ್' ಚಿತ್ರವನ್ನು ಕಳೆದ ವರ್ಷವೇ ನಿರ್ಮಾಪಕ ಶಂಕರ್ ಗೌಡರಿಗೆ ಮೂರು ಕೋಟಿ ಕೊಟ್ಟು ಖರೀದಿಸಿದ್ದ ರಾಧಿಕಾ ಈಗ ಆ ಚಿತ್ರದ ಹಾಡೊಂದಕ್ಕೆ ಮರು ಚಿತ್ರೀಕರಣ ಆರಂಭಿಸಿದ್ದಾಳೆ.

ಮೊದಲು ಚಿತ್ರೀಕರಣಗೊಂಡಿದ್ದ ಆ ಹಾಡಿನಲ್ಲಿ ರಾಧಿಕಾ ತುಂಡು ಬಟ್ಟೆಯನ್ನು ತೊಟ್ಟು ಸಖತ್ ಸ್ಪೈಸಿಯಾಗಿ ಕಾಣಿಸಿಕೊಂಡಿದ್ದಳಂತೆ. ಇದನ್ನು ನೋಡಿದ ಆಕೆಯ 'ಆಪ್ತ'ರೊಬ್ಬರು 'ಇದೆಲ್ಲಾ ನನಗೆ ಹಿಡಿಸೊಲ್ಲ' ಎಂದು ಮುನಿಸಿಕೊಂಡಿದ್ದರಂತೆ. ಹೀಗಾಗಿ ಮೈತುಂಬ ಬಟ್ಟೆತೊಟ್ಟು ಅದೇ ಹಾಡಿಗೆ ಮತ್ತೊಮ್ಮೆ ಹೆಜ್ಜೆ ಹಾಕುತ್ತಿದ್ದಾಳೆ ರಾಧಿಕಾ.

ಒಂದೂವರೆ ವರ್ಷದಿಂದ ಈ ರಾಧಿಕಾ ಮಾಯಾಲೋಕಕ್ಕಿಂತಲೂ ಹೆಚ್ಚಾಗಿ ರಾಜಕೀಯ ವಲಯದಲ್ಲಿ ದೊಡ್ಡ ಬಿರುಗಾಳಿ ಎಬ್ಬಿಸಿರೋದರಿಂದ "ನಮ್ಮೂರಿಗೆ ರಾಧಿಕಾ ಬಂದವ್ಳಂತೆ...." ಅಂತ ಸುದ್ದಿ ಹರಡುತ್ತಿದ್ದಂತೇ ಮಾಧ್ಯಮದವರು ಕೂಡಲೇ ತಮ್ಮ ಕ್ಯಾಮೆರಾ ಸಮೇತ ಮೈಸೂರು ಲ್ಯಾಂಪ್ಸ್‌ನ ಗೇಟ್ ಬಳಿ ಧಾವಿಸಿದರು. ಆದರೆ ಕಾಂಪೌಂಡಿನ ಒಳಗೆ ಇಣುಕಿ ನೋಡುವ ಸೌಭಾಗ್ಯವೂ ಮೀಡಿಯಾದವರಿಗೆ ಸಿಗಲಿಲ್ಲ. ಯಾಕೆಂದರೆ ನಾಲ್ಕು



ಜನ ಗನ್ ಮ್ಯಾನುಗಳು, ಹತ್ತು ಜನ ಪ್ರೈವೇಟ್ ಸೆಕ್ಯೂರಿಟಿಗಳನ್ನು ಹೊಂದಿರುವ 'ಮೇಡಂ' ರಾಧಿಕಾ ಅವರ್‍ಯಾರಿಗೂ ತನ್ನನ್ನು ಮಾತನಾಡಿಸಲು, ನೋಡಲು ಬಿಡಲೇ ಇಲ್ಲ.

ಈ ಮಧ್ಯೆಯೂ ದಿನಪತ್ರಿಕೆಯ ವರದಿಗಾರರೊಬ್ಬರು ತನ್ನೆಲ್ಲಾ ಇನ್‌ಫ್ಲೂಯೆನ್ಸ್ ಬಳಸಿ ಒಳಗೆ ಎಂಟ್ರಿ ಪಡೆದು ರಾಧಿಕಾಳ ಸಂದರ್ಶನ ಪಡೆದೇ ಬಿಟ್ಟರು. ನಂತರ ಆ ಪತ್ರಕರ್ತರೊಂದಿಗೆ ಮಾತನಾಡುತ್ತಾ ಚಿತ್ರರಂಗದ ಬಗ್ಗೆ ತನ್ನ ಸ್ಪಷ್ಟವಾದ ನಿಲುವುಗಳನ್ನೂ ತಿಳಿಸಿದ್ದಾಳೆ:

"ಇದು ನಾನು ನಟಿಯಾಗಿ ನಟಿಸುತ್ತಿರುವ ಕೊನೆಯ ಚಿತ್ರ. ಇನ್ನು ಮುಂದೆ ನಾನು ಮುಖಕ್ಕೆ ಬಣ್ಣ ಹಚ್ಚಿ ಯಾವುದೇ ಹೊಸಚಿತ್ರದಲ್ಲಿ ನಟಿಸುವುದಿಲ್ಲ. ಈ ಬಗ್ಗೆ ನಾನು ದೃಢವಾಗಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ" ಎಂದು ಖಡಕ್ಕಾಗಿ ಪ್ರತಿಕ್ರಿಯಿಸಿದ್ದಾಳೆ.

ಹಾಗಾದರೆ ಚಿತ್ರರಂಗಕ್ಕೆ ವಿದಾಯ ಹೇಳಿದಂತೆಯೇ? ಎಂದು ಪ್ರಶ್ನಿಸಿದರೆ, ನಾನು ನಟನೆಗಷ್ಟೇ ವಿದಾಯ ಹೇಳುತ್ತಿದ್ದೇನೆ ವಿನಹ ಚಿತ್ರರಂಗಕ್ಕಲ್ಲ ಅನ್ನೋದು ರಾಧಿಕೆಯ ಸ್ಪಷ್ಟೀಕರಣ. "ನಾನು ನನ್ನ ಸ್ವಂತ ಸಂಸ್ಥೆಯಲ್ಲಿ ಚಿತ್ರ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ನಿರ್ಣಯಿಸಿದ್ದೇನೆ. ನನ್ನ ಸ್ವಂತ ನಿರ್ಮಾಣದಲ್ಲಿ ಹೊಸ ನಾಯಕ ನಾಯಕಿಯರಿಗೆ ಅವಕಾಶ ನೀಡಬೇಕೆಂದೂ ತೀರ್ಮಾನಿಸಿದ್ದೇನೆ. ನಾನು ಚಿತ್ರರಂಗಕ್ಕೆ ಬರುವ ಮೊದಲು ಅವಕಾಶಕ್ಕಾಗಿ ತುಂಬಾ ಕಷ್ಟಪಟ್ಟಿದ್ದೇನೆ; ಅಂತಹ ಕಷ್ಟಗಳನ್ನು ಹೊಸಬರು ಪಡಬಾರದು ಎಂಬ ಉದ್ದೇಶದಿಂದ ಯಂಗ್ ಟ್ಯಾಲೆಂಟ್‌ಗಳನ್ನು ಹಾಕಿಕೊಂಡೇ ಚಿತ್ರ ನಿರ್ಮಿಸಲು ಹೊರಟಿದ್ದೇನೆ" ಅನ್ನೋ ಗ್ರೇಟ್ ಕಾಳಜಿ ಮೇಡಂ ರಾಧಿಕಾ ಅವರದ್ದು.

ಆರಂಭದಲ್ಲೇ ಯಾವುದೇ ಖಾಸಗಿ ಪ್ರಶ್ನೆಗಳಿಗೆ ಅವಕಾಶವಿಲ್ಲ ಎಂದು ಆಕೆ ಸ್ಪಷ್ಟವಾಗಿ ಹೇಳಿದ್ದರಿಂದ ಆಕೆಯ ಬಗ್ಗೆ ಚಿತ್ರರಂಗದಲ್ಲಿ ಮತ್ತು ವಿಧಾನಸೌಧದ ಕಾರಿಡಾರ್‌ಗಳಲ್ಲಿ ಆಗಾಗ ಕೇಳಿಬರುತ್ತಿದ್ದ ಗಾಸಿಪ್‌ಗಳ ಬಗೆಗಿನ ಯಾವ ಪ್ರಶ್ನೆಗೂ ಅಲ್ಲಿ ಅವಕಾಶವಿರಲಿಲ್ಲ.

ಒಂದಂತೂ ಸತ್ಯ. ಈ ಹಿಂದೆ ತೆಳ್ಳಗೆ ಬೆಳ್ಳಗೆ ಬಳಕುತ್ತಾ ಇದ್ದ ಈ ಹಾಲುಗಲ್ಲದ ಹುಡುಗಿ ತನ್ನ ತಾರಾವರ್ಚಸ್ಸಿನಿಂದ ಆಗ ರಮ್ಯಾ-ರಕ್ಷಿತಾರಿಗೆ ತೀವ್ರ ಪೈಪೋಟಿ ನೀಡಿದ್ದಳು. ಈಗ ರಕ್ಷಿತಾ ಮದುವೆಯಾಗಿ, ಮಗುವಿನ ತಾಯಿಯಾಗಿ ಡುಮ್ಮಿಯಾಗಿದ್ದಾಳೆ. ಇನ್ನೊಂದೆಡೆ ರಮ್ಯಾ ಅನ್ಯಭಾಷೆಯಲ್ಲಿ ಬಿಜಿಯಾಗಿದ್ದಾಳೆ. ಈಗ ಇನ್ನಷ್ಟು ರತಿವರ್ಚಸ್ಸಿನಿಂದ ಕಾಣುವ ರಾಧಿಕಾ ಈಗಿನ ತಲೆಮಾರಿನ ಹುಡುಗಿಯರಿಗೂ ಪೈಪೋಟಿ ಕೊಡುವಷ್ಟು ಸುಂದರವಾಗಿದ್ದಾಳೆ. ರಾಧಿಕಾ ಮುಖಕ್ಕೆ ಬಣ್ಣ ಹಚ್ಚಿದರೆ ಆಕೆ ನಂ.1 ಪಟ್ಟ ಅಲಂಕರಿಸುವ ಸಾಧ್ಯತೆಯೂ ಇಲ್ಲದಿಲ್ಲ. ಆದರೆ ಈಕೆ ನಟನೆಯಿಂದ ನಿರ್ಮಾಣದತ್ತ ಹೊರಟಿದ್ದಾಳಲ್ಲ? ಏನೇ ಆಗಲಿ 2 ವರ್ಷದ ಅಜ್ಞಾತವಾಸದ ನಂತರ ಗಾಂಧಿನಗರಕ್ಕೆ ಮರಳಿರುವ ಈ ಸುಂದರಿಗೆ ನಮ್ಮ ಸ್ವಾಗತ.

ಜಂಗ್ಲಿ

ಹಳೆ ಪಾತ್ರೆ... ಹಳೆ ಕಬ್ಣಾ...

ಹಳೇ ಪೇಪರ್ ಕಣೊ ಹೋಯಿ!



ಇಷ್ಟು ದಿನ "ಚಿತ್ರಾನ್ನ... ಚಿತ್ರಾನ್ನ" ಅನ್ನುತ್ತಿದ್ದ ಬಾಯಿಗಳೆಲ್ಲಾ ಈಗ "ಹಳೆ ಪಾತ್ರೆ... ಹಳೆ ಪೇಪರ್ss..." ಎನ್ನುತ್ತಿವೆ.

ಇದು 'ಜಂಗ್ಲಿ' ಮಹಿಮೆ!

'ಇಂತೀ ನಿನ್ನ ಪ್ರೀತಿಯ' ಎಂಬ ಶೋಕಗೀತೆ ಹಾಡಿ ಸಖತ್ ಸುಸ್ತಾಗಿರುವ 'ದುನಿಯಾ' ಸೂರಿ ಈ ಬಾರಿ ಗೆದ್ದೇ ತೀರಬೇಕು ಎಂದು ತೀರ್ಮಾನಿಸಿದಂತೆ ಕಾಣುತ್ತಿದೆ. 'ಜಂಗ್ಲಿ' ಚಿತ್ರದ ಹಾಡುಗಳನ್ನು ಕೇಳಿದ, ನೋಡಿದ ಯಾರಿಗೇ ಆದರೂ ಹೀಗನ್ನಿಸದೇ ಇರಲಾರದು.

ಕಳೆದ ವರ್ಷ ನೂರೂ ಚಿಲ್ಲರೆ ಸಿನಿಮಾಗಳು ಬಿಡುಗಡೆಯಾದರೂ "ನಿನ್ನಾ ಪೂಜೆಗೆ ಬಂದೇ ಮಾದೇಶ್ವರಾ.." ಮತ್ತು "ಚಿತ್ರಾನ್ನ ಚಿತ್ರಾನ್ನ" ಹಾಡುಗಳನ್ನು ಬಿಟ್ಟರೆ ಮತ್ಯಾವೂ ಪಡ್ಡೆಗಳ ನಾಲಿಗೆ ಮೇಲೆ ಹರಿದಾಡಲೇ ಇಲ್ಲ. ಈಗ ಎಲ್‌ಕೆಜಿ ಮಕ್ಕಳಿಂದ ಹಿಡಿದು ಸೀನಿಯರ್ ಪಡ್ಡೆಗಳ ತನಕ ಎಲ್ಲರ ಬಾಯಲ್ಲೂ "ಹಳೆ ಪಾತ್ರೆ... ಹಳೆ ಕಬ್ಣಾ... ಅಥವಾ ಪೌಡ್ರ್ ಹಾಕ್ಕಳಿ.. ತಲೆ ಬಾಚ್ಕಳಿ..." ಹಾಡೇ ಪ್ರಯಾಣಿಸುತ್ತಿದೆ.

'ದುನಿಯಾ' ಪ್ರಚಂಡ ಯಶಸ್ಸನ್ನು ಕಾಣುವಲ್ಲಿ ಅದರ ಹಾಡುಗಳ ಪಾತ್ರವೂ ಮಹತ್ತರವಾಗಿತ್ತು. ಈಗ ಟೀವಿಯಲ್ಲಿ ಬರುತ್ತಿರುವ 'ಜಂಗ್ಲಿ' ಚಿತ್ರದ ಹಾಡುಗಳಾಗಲಿ, ಅದರ ಬಗ್ಗೆ ಹುಟ್ಟಿಕೊಂಡಿರುವ ಕ್ರೇಜ್‌ಗಳನ್ನಾಗಲಿ ನೋಡಿದರೆ 'ಜಂಗ್ಲಿ' ಕೂಡಾ ಹಿಟ್ ಆಗುತ್ತದೆ ಎಂದೇ ಎಲ್ಲರಿಗೂ ಅನ್ನಿಸುತ್ತಿದೆ.




ನಿರ್ದೇಶಕ ಸೂರಿ ಕೂಡಾ ಚಿತ್ರದ ಬಗ್ಗೆ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. "ಒಂದು ಪುಟ್ಟ ಕಥೆಯನ್ನು ಇಟ್ಟುಕೊಂಡು ಅದರ ಸುತ್ತ ಎಂಟ್ಹತ್ತು ಪಾತ್ರಗಳನ್ನು ಸೃಷ್ಟಿಸಿದ್ದೀನಿ. ಅದರಲ್ಲಿ ಆಕ್ಷನ್, ಥ್ರಿಲ್ಲು.. ಜೊತೆಗೆ ಸಖತ್ ಕಾಮಿಡಿಯೂ ಸೇರಿಕೊಂಡಿದೆ. ಜನ ಒಪ್ಕೊಂಡ್ರೆ 'ಜಂಗ್ಲಿ' ಬಂಗಾರದಂತೆ" ಎನ್ನುತ್ತಿದ್ದಾರೆ.

'ವಿಜಯ' ಸಿಗುತ್ತಾ?

'ಜಂಗ್ಲಿ' ಸೋಲಲಿ, ಬಿಡಲಿ ನಿರ್ದೇಶಕ ಸೂರಿಗೆ ಯಾವುದೇ ತೊಂದರೆಯಿಲ್ಲ. ಯಾಕೆಂದರೆ ಆತ ಉತ್ತಮ ತಂತ್ರಜ್ಞನಾಗಿರುವುದರಿಂದ ಯಾವತ್ತಿಗೂ ಕೆಲಸಕ್ಕೇನೂ ಬರವಿಲ್ಲ. ಆದರೆ ನಷ್ಟ ಅಂತ ಆದರೆ ಅದು ನಟ ವಿಜಯ್‌ಗೆ ಮಾತ್ರ.

ಯಾಕೆಂದರೆ 'ದುನಿಯಾ' ನಂತರ ಬಂದ 'ಚಂಡ', 'ಯುಗ'ದಂಥ ಯಾವ ಚಿತ್ರಗಳೂ ವಿಜಯ ಕೈ ಹಿಡಿದಿಲ್ಲ. ಕಮರ್ಷಿಯಲ್ ಮತ್ತು ಕಲಾತ್ಮಕತೆ ಎರಡನ್ನೂ ತುಂಬಿಕೊಂಡಿದ್ದ 'ಅವ್ವ' ಮಹಿಳಾಪ್ರಧಾನ ಚಿತ್ರವಾಗಿದ್ದರಿಂದ ವಿಜಯ್ ಹೀರೋನಂತೆ ಮಿಂಚಲು ಸಾಧ್ಯವಾಗಲಿಲ್ಲ. ಆನಂತರ ಬಂದ 'ಸ್ಲಂ ಬಾಲ' ನಾಯಕಪ್ರಧಾನ ಚಿತ್ರವಾಗಿದ್ದರೂ ಜನರ ಮನಸ್ಸಿಗೆ ಹಿಡಿಸಲಿಲ್ಲ. ಇನ್ನು ಬಿಡುಗಡೆಯಾಗದೆ ಡಬ್ಬಾದಲ್ಲೇ ಕುಳಿತಿರುವ ಬೆಳಗೆರೆಯವರ 'ಮುಖ್ಯಮಂತ್ರಿ..' ಮತ್ತು ಓಂಪ್ರಕಾಶ್‌ರ 'ಪುಟ್ಟ' ಪಾಡು ಕೇಳೋರೇ ದಿಕ್ಕಿಲ್ಲ.

ಹೀಗಿರುವಾಗ ವಿಜಯ್‌ಗೆ 'ಜಂಗ್ಲಿ'ಯ ಗೆಲುವು ಅನಿವಾರ್ಯ. ವಿಜಯ್ ಕೂಡಾ ಈ ಚಿತ್ರಕ್ಕಾಗಿ ಸಾಕಷ್ಟು ಕಸುವು ಮಾಡಿ, ಸಿಕ್ಸ್‌ಪ್ಯಾಕ್ಸ್ ದೇಹ ಬೆಳೆಸಿದ್ದಾರೆ. ಗೆಲುವು ಅನ್ನೋ ಮೂರಕ್ಷರಕ್ಕಾಗಿ ಸೂರಿ ಮತ್ತು ವಿಜಯ್ ಆಸೆಗಣ್ಣಿನಿಂದ ಕಾಯುತ್ತಾ ಕುಳಿತಿದ್ದಾರೆ. ಅದು ಅವರಿಗೆ ದೊರೆಯುವಂತಾಗಲಿ.



ಭಟ್ಟರ ಸಾಥ್

"ಯೋಗರಾಜ್ ಭಟ್ರು, ಸೂರಿನೂ ಕಿತ್ತಾಡ್ಕೊಂಡ್‌ಬಿಟ್ಟವ್ರೆ. ಸೂರಿನ ಭಟ್ರು ಓಡಿಸ್‌ಬಿಟ್ಟವ್ರಂತೆ..." ಇಂಥ ಅಂತೆಕಂತೆಗಳು ಗಾಂಧಿನಗರಿಗಳ ಬಾಯಲ್ಲಿ ಸಂಚರಿಸುತ್ತಿರುವಾಗಲೇ ಈ ದೋಸ್ತಿಗಳು "ಹಾಗೇನೂ ಇಲ್ಲ" ಎಂದು ಸಾರಿದ್ದಾರೆ. 'ಜಂಗ್ಲಿ' ಚಿತ್ರಕ್ಕೆ ಭಟ್ಟರು ಮೂರು ಹಾಡುಗಳನ್ನು ಬರೆದಿದ್ದಾರೆ. ಈಗ ಹಿಟ್ ಆಗಿರುವ 'ಹಳೇ ಪಾತ್ರೆ....' ಕೂಡಾ ಭಟ್ಟರು ಬರೆದಿರೋದೇ.

■ ಅರುಣ್.ಜಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Raji...